ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು :
ಹ. ರಾ. ಪುರೋಹಿತ ಎಂ. ಎ.

—ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ—

Editor:
H. R. Purohit, M. A.

---(ಸಂಪುಟ ೧೯)--- ಹುಬ್ಬಳ್ಳಿ ಸೋಮವಾರ ತಾರೀಖು ೨೮---೭---೧೯೪೭ ---(ಸಂಚಿಕೆ ೧೭)---

ಪ್ರಪಂಚವು ಇಬ್ಭಾಗವಾಯಿತು

ಪರರಾಷ್ಟ್ರ ಮಂತ್ರಿಸಮ್ಮೇಲನ— ಮಾರ್ಶಲ ಯೋಜನೆಗೆ ರಶಿಯದ ಅಸಮ್ಮತಿ— ಇಬ್ಬಣವಾದ ಯುರೋಪು— ಬ್ರಿಟಿಶ ಮತ್ತು ಫ್ರೆಂಚರ ನಿಮಂತ್ರಣ.

ಜುಲೈ ೨ ನೆಯ ತಾರೀಕೆಂಬುದು (ಜರ್ಮನಿಯ ಮೇಲೆ ಕೊನೆಯ ವಿಜಯವನ್ನು ಸಂಪಾದಿಸಿದ ಬಳಿಕ) ೨೦ ನೆಯ ಶತಕದ ಪೂರ್ವಾರ್ಧದಲ್ಲಿ ಅತ್ಯಂತ ಅಶುಭ ಮತ್ತು ಭಯಂಕರ ದಿನವೆಂದು ಇತಿಹಾಸಜ್ಞರು ಬಣ್ಣಿಸದಿರಲಾರರು. ಏಕೆಂದರೆ ಅಂದೇ ಇಡಿಯ ಯುರೋಪಿನ ಮತ್ತು ತನ್ಮೂಲಕ ಇಡಿಯ ಜಗತ್ತಿನ ಆರ್ಥಿಕೋನ್ನತಿಯನ್ನು ಸಾಧಿಸಲು ಸಂಯುಕ್ತ ಪ್ರಯತ್ನವೆಸಗಲು ಸೇರಿದ ಬ್ರಿಟನ್, ಫ್ರಾನ್ಸ ಮತ್ತು ರಶಿಯಗಳ ಪರರಾಷ್ಟ್ರ ಮಂತ್ರಿಗಳ ಸಮ್ಮೇಲನವು ಮುರಿದುಹೋದದ್ದು; ಅಂದೇ ಸಮಾಜ ಸತ್ತಾವಾದಿಯಾದ ಪೂರ್ವ ಯುರೋಪು ಮತ್ತು ಬಂಡವಾಲಶಾಹಿಯನ್ನು ಬೆಂಬತ್ತಿದ ಪಶ್ಚಿಮ ಯುರೋಪು ಇವುಗಳಲ್ಲಿಯ ಒಡಕು ಸರಿಹೊಂದಬಹುದೆಂಬ ಆಸೆಯು ಪುಡಿ ಪುಡಿಯಾದುದು.

ಈ ಒಡಕು ಪ್ರತಿಯೊಂದು ಖಂಡವನ್ನೂ ರಾಷ್ಟ್ರವನ್ನೂ ಮುಟ್ಟುತ್ತದೆ, ಅದರ ಪರಿಣಾಮವು ದಕ್ಷಿಣ ಅಮೇರಿಕೆಯಲ್ಲಿ ಹೇಗೋ ಹಾಗೇ ಏಶಿಯದಲ್ಲೂ ಅನುಭವಕ್ಕೆ ಬರುತ್ತದೆ—ಅದು ಕೂಡ ಹಾರ್ವರ್ಡ ವಿಶ್ವವಿದ್ಯಾಲಯದಲ್ಲಿ ಜನರಲ ಜಾರ್ಜ ಮಾರ್ಶಲರು ತಮ್ಮ ಭಾಷಣದಲ್ಲಿ ಅಮೇರಿಕೆಯು ಆರ್ಥಿಕ ಸಹಾಯ ಕೊಡಲಿದೆಯೆಂದು ಹೇಳಿದ ಒಂದೇ ತಿಂಗಳಲ್ಲಿ!

ರಶಿಯದ ಮನೋವೃತ್ತಿ

ಅಮೇರಿಕೆಯ ಹಣದ ಕೊಡುಗೆಯು ಒಂದು ವರ್ಷದಿಂದ ರಶಿಯ ಮತ್ತು ಅದರ ಮಿತ್ರರಾಷ್ಟ್ರಗಳು ಹಾಗೂ ಅಮೇರಿಕ ಮತ್ತು ಅದರ ಮಿತ್ರದೇಶಗಳು ಇವುಗಳ ನಡುವಿದ್ದ ಸಾಶಂಕವೃತ್ತಿ ಮತ್ತು ವಿರೋಧಭಾವಗಳನ್ನು ನಂದಿಸಲು ಒಂದು ಉಪಾಯವಾಗಿತ್ತು. ಅಮೇರಿಕದ ಐಶ್ವರ್ಯ ಮತ್ತು ಉತ್ಪಾದಕ ಕಾರ್ಯಗಳ ಬೆಂಬಲವನ್ನೊಳಗೊಂಡ ಆಚರಣೀಯವಾದ ಆರ್ಥಿಕ ಸಹಕಾರವೇ ಆ ಉಪಾಯವಾಗಿತ್ತು.

ತನ್ನ ಮತ್ತು ತನ್ನ ಪಕ್ಷೀಯರ ಹಿತಕ್ಕಾಗಿ ಅಮೇರಿಕ ಸಾಲ ಕೊಡಲು ಮುಂದೆ ಬಂದಿಲ್ಲವೆಂದು ರಶಿಯವು ಖಚಿತವಾಗಿ ತಿಳಿದುಕೊಂಡಿತು ಅಮೇರಿಕದ ಡಾಲರುಗಳ ವರ್ಚಸ್ಸಿಗೊಳಗಾಗುವುದು ಹಿತಕರವಲ್ಲ; ಹಾಗೆ ಹೆಚ್ಚು ಸಾಲ ತೆಗೆದುಕೊಂಡರೆ ಯುರೋಪಿನ ವ್ಯಾಪಾರ ವ್ಯವಸಾಯಗಳ ಐಕ್ಯ ಮತ್ತು ಒಂದು ವಿಧದ ಆರ್ಥಿಕ ಯೋಜನೆ ಇವುಗಳನ್ನು ಸ್ವೀಕರಿಸಬೇಕಾಗುವುದು. ಇದಾವುದೂ ತನ್ನ ಬಣದ ಪುರೋಭಿವೃದ್ಧಿಗೆ ಒಳ್ಳೆಯದಲ್ಲವೆಂದು ರಶಿಯವು ತೀರ್ಮಾನಿಸಿತು.

ಮೇಲಿನ ತೀರ್ಮಾನಕ್ಕೆ ಆಧಾರರೂಪವಾದುದು ಮುಂದೆ ಹೇಳುವ ತರ್ಕ: ಸಂಯುಕ್ತ ರಾಷ್ಟ್ರಸಂಘಕ್ಕೆ ಸೇರುವ ಸದಸ್ಯ ರಾಷ್ಟ್ರಗಳು ಹೇಗೆ ಕೆಲಮಟ್ಟಿಗೆ ತಮ್ಮ ರಾಜಕೀಯ ಸಾರ್ವಭೌಮಾಧಿಕಾರವನ್ನು ಕಳೆದುಕೊಳ್ಳಬೇಕಾಗುವುದೋ ಹಾಗೇ ಉಕ್ತ ಆರ್ಥಿಕ ಯೋಜನೆಯನ್ನು ಅಂಗೀಕರಿಸಿದರೆ ರಶಿಯವು ತನ್ನ ಆರ್ಥಿಕ ಸಾರ್ವಭೌಮತ್ವವನ್ನು ಕೆಲವಂಶ ಬಿಟ್ಟುಕೊಡಬೇಕಾಗುವುದು ಈ ತ್ಯಾಗವನ್ನು ರಶಿಯನ್ನರು ಮಾಡಲು ಸಿದ್ಧರಿಲ್ಲ; ಮತ್ತು ಕಾಲವು ತಮಗನುಕೂಲವಾಗಿದೆಯೆಂದೂ ಯಾರ ಸಹಾಯವೂ ಇಲ್ಲದೆ ತಾವೇ ತಮ್ಮ ಆರ್ಥಿಕ ಮೋಕ್ಷವನ್ನು ಸಾಧಿಸಬಹುದೆಂದೂ ಅವರ ಮತ.

ಜುಲೈ ೨ ರಲ್ಲಿ ಸೇರಿದ ಪರರಾಷ್ಟ್ರ ಮಂತ್ರಿಸಮ್ಮೇಲನದಲ್ಲಿ ರಶಿಯವು ಅಮೇರಿಕದ ಸಾಮ್ಯವಾದ, ವಿರೋಧ ಧೋರಣದ ಮುಂದಿನ ಹೆಜ್ಜೆಯೆಂದು ಸಂಶಯ ದೃಷ್ಟಿಯಿಂದ ನೋಡಿ ಮಾರ್ಶಲ ಯೋಜನೆಯನ್ನು ತಿರಸ್ಕರಿಸಿದುದರಿಂದ ಯುರೋಪು ಆರ್ಥಿಕವಾಗಿ ಇಬ್ಭಾಗವಾಯಿತೆಂದೂ ಅದರ ಪರಿಣಾಮಗಳು ಬಹಳ ನಿರಾಶಾದಾಯಕವಾಗಿವೆಯೆಂದೂ ಭಾರತ ಮೊದಲಾದ ಏಶಿಯದ ಸ್ವತಂತ್ರ ರಾಷ್ಟ್ರಗಳು ಈ ಒಳ ಜಗಳದಲ್ಲಿ ಪ್ರವೇಶಿಸದೆ ದೂರ ನಿಲ್ಲುವುದು ಸೂಕ್ತವೆಂದೂ ಇಂಗ್ಲಂಡಿನ ಶಾಸನಸಭೆಯ ಮೇಲ್ಮನೆಯ ಕೂಲಿಕಾರ ಸದಸ್ಯರಾದ ಲಾರ್ಡ ಸ್ಟ್ರಾಬೊಲ್ಗಿಯವರು ಅಭಿಪ್ರಾಯಪಡುತ್ತಾರೆ.

ಸ್ಥಿರಾಭಿಪ್ರಾಯಗಳು

ಇಷ್ಟಲ್ಲದೆ ಪಾಶ್ಚಾತ್ಯ ಬಂಡವಾಲಶಾಹಿಯು—ಅದರಲ್ಲೂ ಅಮೇರಿಕದ ಸಂಯುಕ್ತ ಸಂಸ್ಥಾನದ್ದು—ಮುಗ್ಗರಿಸುತ್ತಿದೆಯೆಂದೂ ಅದು ಅಧೋಗತಿಗಿಳಿದ ಬಳಿಕ ರಶಿಯದ ಸಾಮ್ಯವಾದವೇ ಪ್ರಬಲವಾಗಿಯೂ ಚಿರಂಜೀವಿಯಾಗಿಯೂ ಆಗುವದೆಂದೂ ಅವರು ತಿಳಿದುಕೊಂಡಂತಿದೆ. ನಮಗೆ ತೋರುವಂತೆ ಈ ಅಭಿಪ್ರಾಯಗಳು ಸ್ಥಿರವೂ ಮೂಲಭೂತವೂ ಆಗಿದ್ದರೆ ಆಗ ಪರರಾಷ್ಟ್ರ ಮಂತ್ರಿ ಸಮ್ಮೇಲನ ಮುರಿದುದಕ್ಕೆ ಬೇರೆಯ ಕಾರಣವನ್ನು ಹುಡುಕಹೋಗುವುದು ನಿರುದ್ಯೋಗಿಗಳ ಕೆಲಸವೇ ಸರಿ.

ಬಹುಶಃ ಟ್ರೂಮನ್ನರ ಗ್ರೀಸು ತುರ್ಕಿಗಳನ್ನು ಬಲಪಡಿಸುವ ಧೋರಣವು ಸಮತಾವಾದದ ವಿರುದ್ಧವಿರುವುದರಿಂದ ಜನರಲ ಮಾರ್ಶಲ್ಲರ ಯೋಜನೆಯಾದರೂ ಅದೇ ಧೋರಣದ ವಿಸ್ತರಣವೆಂದು ರಶಿಯನ್ನರು ತಿಳಿದುಕೊಂಡಿರಲೂಬಹುದು. ಇದರ ಮೇಲೆ ಅಣುಬಾಂಬು ತಯಾರಿಕೆಯ ಗುಟ್ಟುಗಳ ಸಂಗ್ರಹಕ್ಕೆ ಅಮೇರಿಕನ್ನರು ಮನಸ್ಸು ಮಾಡದಿದ್ದುದೂ ಕಾರಣವಾಗಿರಬಹುದು.

ಅಮೇರಿಕನ್ನರಿಗೂ ಬ್ರಿಟಿಶರಿಗೂ ರಶಿಯದ ಮೇಲೆ ದೂರು ಕೊಡಲು ಹಲವಾರು ಕಾರಣಗಳಿವೆಯೆಂಬುದರಲ್ಲಿ ಸಂಶಯವಿಲ್ಲ. ಆದರೆ ಇದೆಲ್ಲ ಜಾಗತಿಕ ಯುದ್ಧಾನಂತರ ಈದ ಎರಡು ದುರ್ಭಾಗ್ಯ ವರ್ಷಗಳ ಚರಿತ್ರೆಯಿಂದ ಸಂಭವಿಸಿದ್ದೆಂದೇ ಹೇಳಬೇಕಾಗಿದೆ. ಇಲ್ಲಿ ಮುಖ್ಯವಾದುದೆಂದರೆ ಜಾಗತಿಕ ಆರ್ಥಿಕ ಐಕ್ಯವನ್ನು ಸಾಧಿಸುವುದರಲ್ಲಿ ಉಂಟಾದ ಸೋಲಿನ ಪರಿಣಾಮಗಳನ್ನು ತಿಳಿದುಕೊಳ್ಳುವುದೇ ಆಗಿದೆ. ಏಕೆಂದರೆ ಅದೇ ಅಂಕ್ಯದ ಗುರಿಯಾಗಿತ್ತು.

ಅನಿವಾರ್ಯವಾದ ಆವಶ್ಯಕತೆ

ತಮ್ಮ ಹೊಸ ಯೋಜನೆಯೊಳಕ್ಕೆ ರಶಿಯವನ್ನು ಸೇರಿಸಿಕೊಳ್ಳುವುದರಲ್ಲಿ ಪರಾಜಿತರಾದ ಬ್ರಿಟಿಶರು ಮತ್ತು ಫ್ರೆಂಚರು ಉಳಿದ ಐರೋಪ್ಯ ರಾಷ್ಟ್ರಗಳಲ್ಲಿ ಯಾವವು ಸಮ್ಮತಿಸುವವೋ ಅಂಥವನ್ನು ಸೇರಿಸಿಕೊಂಡು ಮುಂದೆ ಸಾಗಬೇಕಾಗಿದೆ; ಮತ್ತು ಆ ಪ್ರಕಾರವಾಗಿ ಫ್ಯಾಸಿಸ್ಟ ಸ್ಪೇನೊಂದನ್ನು ಬಿಟ್ಟು ಉಳಿದ ಎಲ್ಲ ಐರೋಪ್ಯ ರಾಷ್ಟ್ರಗಳಿಗೂ ಆಹ್ವಾನ ಕಳಿಸಲಾಗಿದೆ. ಆಹ್ವಾನವು ಮಾಸ್ಕೋವಿಗೆ ಕೂಡ ಹೋಗಿದೆ; ಏಕೆಂದರೆ, ಅಲ್ಲಿಗೆ ಕಳಿಸದಿರುವುದಕ್ಕೆ ಯಾವ ಕಾರಣವೂ ಇಲ್ಲ. ಈ ಎರಡು ಮುಖ್ಯ ಪಾಶ್ಚಾತ್ಯ ದೇಶಗಳಿಗೆ ಹೀಗೆ ಮಾಡದೆ ಗತ್ಯಂತರವಿಲ್ಲವೆಂದು ನಾನು ಪುನಃ ಹೇಳುತ್ತೇನೆ. ಅವುಗಳ ಆರ್ಥಿಕ ಪರಿಸ್ಥಿತಿಯು ಎರಡು ಜಾಗತಿಕ ಯುದ್ಧಗಳಿಂದ ಹದಗೆಟ್ಟು ಹೋಗಿರುವದರಿಂದ ನಾಳಿನ ಕಷ್ಟಕರವಾದ ವರುಷವನ್ನು ಕಳೆಯಲು ಆಹಾರ ಬೇಕೆನ್ನುವ, ವಸ್ತ್ರಬಟ್ಟೆಬೇಕೆನ್ನುವ ಇತರ ಪ್ರಮುಖ ಸಾಮುಗ್ರಿಗಳ ಅಗತ್ಯ ಹೆಚ್ಚಿರುವ ಇತರ ಅಸಹಾಯ ರಾಷ್ಟ್ರಗಳಿಗಾಗಲಿ ತಮಗಾಗಲಿ ಬ್ರಿಟನ್ ಫ್ರಾನ್ಸಗಳು ಅಮೇರಿಕವು ಕರೆದು ಕೊಟ್ಟ ಸಹಾಯವನ್ನು ಬೇಡವೆಂದು ಹೇಳಲಾರವು.

ಅಮೇರಿಕದ ಸಂಯುಕ್ತ ಸಂಸ್ಥಾನದತ್ತ ಲಕ್ಷ್ಯವಿಟ್ಟು ನೋಡಿದರೆ ಅದಕ್ಕಾದರೂ ಮೇಲೆ ಹೇಳಿದ ರಾಷ್ಟ್ರಗಳಿಗೆ ಸಹಾಯ ನೀಡುವುದು ಅನಿವಾರ್ಯವೆಂದೇ ಹೇಳಬೇಕಾಗುತ್ತದೆ.

ಸಂಯುಕ್ತ ಸಂಸ್ಥಾನದ ಹೊರಗೆ ಡಾಲರುಗಳಿಲ್ಲವೆಂದು ಮಾತಾಡುವುದು ಒಳ್ಳೆಯ ಜೋಕಿಯಾಗಿ ಕಾಣಬಹುದು; ಆದರೆ ಡಾಲರುಗಳು ತಮ್ಮಷ್ಟಕ್ಕೆ ತಾವೇ ಇದ್ದರೆ ಅಪ್ರಯೋಜಕಗಳೇ ಸರಿ. ಡಾಲರುಗಳು ಯಾವ ಸಾಮುಗ್ರಿಗಳನ್ನು ಕೊಳ್ಳಬಲ್ಲವೆಂಬುದೇ ಬಹಳ ಮುಖ್ಯವಾದದ್ದು ಮತ್ತು ಸಂಯುಕ್ತ ಸಂಸ್ಥಾನಕ್ಕೆ ತನ್ನ ಸಾಮಾನುಗಳನ್ನು ಬೇರೆಯ ದೇಶಗಳಿಗೆ ಮಾರಲು ಶಕ್ತಿಯಿರಬೇಕಾದುದು ಅತ್ಯಾವಶ್ಯಕವಾದುದು: ಸಂಸ್ಥಾನದೊಳಗಿನ ಪ್ರಜೆಗಳು ಬಳಸಿ ಹೆಚ್ಚಾಗಿ ಉಳಿಯುವ ಸಾಮಾನುಗಳು ಸಂ. ಸಂಸ್ಥಾನದಲ್ಲಿ ಹೇರಳವಾಗಿವೆ; ಮತ್ತು ಅನೇಕ ರೀತಿಗಳಿಂದ ಈ ಅವಶಿಷ್ಟ ಪದಾರ್ಥಗಳನ್ನು ಪರರಾಷ್ಟ್ರಗಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಅಲ್ಲಿಗೆ ರವಾನಿಸಲಾಗಿದೆ.

ಆಯಾತ--ನಿರ್ಯಾತಗಳು

ಹೀಗೆ ೧೯೪೬ ರಲ್ಲಿ ೧೫೦೦ ಕೋಟಿ ಡಾಲರುಗಳ ಬೆಲೆಯ ಸಾಮಾನುಗಳು ಹೊರ ದೇಶಗಳಿಗೆ ಹೋದವು. ೧೯೩೭ ರಲ್ಲಿ ೩೫೦ ಕೋಟಿ ಡಾಲರುಗಳ ಬೆಲೆಯ ಸಾಮಾನುಗಳನ್ನು ಮಾತ್ರ ನಿರ್ಯಾತ ಮಾಡಲಾಗಿತ್ತು. ಮತ್ತು ಇದರ ಮೇಲೆ ೪೬ ರಲ್ಲಿ ಸಂಸ್ಥಾನ ಸರಕಾರವು ತನ್ನ ಧೋರಣದ ಪ್ರಕಾರ ಗುಪ್ತವಾಗಿ ಯುದ್ಧಕಾಲದಲ್ಲಿ ಪರದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಕಳಿಸಿದ್ದು ಸುಮಾರು ೬೦೦ ಕೋಟಿ ಡಾಲರುಗಳಷ್ಟು ಬೆಲೆಯದಾಗಿದೆ. ಈ ವರ್ಷದ ಮೊದಲ ಮೂರು ತಿಂಗಳ ನಿರ್ಯಾತದ ಪ್ರಮಾಣದಿಂದ ಲೆಕ್ಕ ಮಾಡಿದರೆ ೧೯೪೭ ರಲ್ಲಿ ಒಟ್ಟು ನಿರ್ಯಾತವು ೨೦೦೦ ಕೋಟಿ ಡಾಲರುಗಳಷ್ಟು ಆಗಬಹುದಾಗಿದೆ.


ಶಾಂತಿ ಕಾಲದಲ್ಲಿ ಈ ನಿರ್ಯಾತಗಳು ಆಯಾತಗಳಿಗೆ ಸರಿಯಾಗಿರಬೇಕು; ಆದರೂ ೧೯೪೬ರಲ್ಲಿ ಸಂ. ಸಂಸ್ಥಾನವು ೭೦೦ ಕೋಟಿ ಡಾಲರುಗಳ ಬೆಲೆಯ ಸಾಮಾನುಗಳನ್ನು ಮಾತ್ರ ಪರದೇಶಗಳಿಂದ ತರಿಸಿಕೊಂಡಿತು. ಮತ್ತು ಈ ವರ್ಷದ ಕಳೆದ ಮೂರು ತಿಂಗಳಲ್ಲಿಯ ಆಯಾತ ಪ್ರಮಾಣದ ಮೇಲೆ ಲೆಕ್ಕಹಾಕಿದರೆ ೧೯೪೭ ರ ಆಯಾತವು ೮೦೦ ಕೋಟಿ ಡಾಲರುಗಳನ್ನು ಮೀರಿ ಹೋಗದು.

ಮೇಲಿನ ಕೆಲವು ಅಂಕಸಂಖ್ಯೆಗಳಿಂದ ಸಾಮಾನ್ಯವಾದ ಯುದ್ಧಪೂರ್ವದ ವ್ಯಾಪಾರಕ್ರಮದಿಂದ ಅಮೇರಿಕದ ಅವಶಿಷ್ಟ ಸಾಮಾನುಗಳು ಹೊರದೇಶಕ್ಕೆ ಹೋಗುವಂತೆ ಮಾಡಲು ಸಾಧ್ಯವಿಲ್ಲವೆಂದು ತಿಳಿದು ಬರುತ್ತದೆ. ಆ ಬಗ್ಗೆ ಬೇರೆಯ ಯಾವುದಾದರೂ ಅಸಾ

—೧೬ನೇ ಪುಟಕ್ಕೆ



ಎರಡು ಜಗತ್ತು



೧. ಯುಗಾಂತರ
೨. ವಿಮರ್ಶಕ ವೈದ್ಯ

ಬರೆದವರು ಶ್ರೀ ವಿ. ಕೃ. ಗೋಕಾಕ ಅವರು. ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ಅವರು. ಪುಟಗಳು ೮೭ ಮತ್ತು ೫೪. ಬೆಲೆ ೧೨ ಮತ್ತು ೬ ಆಣೆಗಳು.

'ಯುಗಾಂತರ' ವೊಂದು ೩ ಅಂಕಗಳ ದೃಶ್ಯ ಕಾವ್ಯ. ಇದರ ಪಾತ್ರಗಳಲ್ಲಿ ಅಗರ್ಭ ಶ್ರೀಮಂತರಿದ್ದು ಕೀರ್ತಿಕಾಮುರಾದ ದಂಪತಿಗಳು, ಶ್ರೀಗರ್ಭರಾಗಿದ್ದು ಅಧಿಕಾರ ಧನಾದಿಗಳನ್ನು ಬಯಸುವ ಮಧ್ಯಮಾರ್ಗಿಗಳು, ಭಿನ್ನಾದರ್ಶಗಳ ಅರಾಧಕರಿದ್ದು ಪರಸ್ಪರ ವಿಚಾರವಿನಿಮಯದಿಂದ ಸತುರತ ಜೀವನ ನಡೆಸುವ ದಂಪತಿಗಳು— ಈ ಮೂರು ಬಗೆಯವರಿದ್ದಾರೆ. ಕಿಶನ್ ಕಿಶೋರ ರುಕ್ಮಿಣೀದೇವಿಯರು ಮೊದಲಿನ ವರ್ಗಕ್ಕೂ, ಕಾಂತಿಚಂದ್ರ ರೋಹಿಣಿದೇವಿಯರು ಎರಡನೆಯ ವರ್ಗಕ್ಕೂ, ಶೋಕಲೇಂದ್ರ ಮೃಣಾಲಿನಿಯರು ಮೂರನೆಯ ವರ್ಗಕ್ಕೂ ಸೇರಿದವರಾಗಿದ್ದಾರೆ.

ಇದಲ್ಲದೆ ೧ ನೆಯವರು ವಾನಪ್ರಸ್ಥ ಹಿಡಿದವರು, ೨ ನೆಯವರು ಸಮಾಜ ಜೀವನದಲ್ಲಿ ಪ್ರಮುಖ ಪಾತ್ರವಹಿಸುವ ಅತ್ಯಾಶೆಯುಳ್ಳವರು ಮತ್ತು ೩ ನೆಯ ದಂಪತಿಗಳು ಮಧ್ಯಮಾರ್ಗಾವಲಂಬಿಗಳೂ ಸಹಿಷ್ಣುಗಳೂ ವಿಚಾರಪರರೂ ಆಗಿ ನಿರೂಪಿಸಲ್ಪಟ್ಟಿದ್ದಾರೆ. ಈ ದೃಶ್ಯದ ಒಂದು ಅಸದೃಶ ವೈಶಿಷ್ಟ್ಯವೆಂದರೆ ಕವಿ ಶೋಕಲೇಂದ್ರ ಮತ್ತು ಕಾವ್ಯೇಡ್ ಮೃಣಾಲಿನಿಯರ ಮಿಲನದಿಂದ ಸೂಚ್ಯವಾದ ಬರಲಿರುವ ಜಗಜ್ಜೀವನದ ನ್ಯಾಯವಾದ, ಮನೋಹರವಾದ ಮತ್ತು ಆದರ್ಶವಾದ ನವೀನ ದರ್ಶನ. ಇದೇ ಇದರ ನಾಮಕರಣಕ್ಕೆ ಆಧಾರವಾದುದು.

ಶ್ರೀ ಗೋಕಾಕರು ಜೀರ್ಣಿಸಿಕೊಂಡ ಪಾಶ್ಚಾತ್ಯ ಪೌರಸ್ತ್ಯ ಲೋಕದ, ಆಚಾರ, ವಿಚಾರ, ಆಸೆ, ಆಕಾಂಕ್ಷೆ, ಕಲ್ಪನೆ ಮತ್ತು ದರ್ಶನಗಳ ಫಲವಾಗಿ ಹೊರಹೊಮ್ಮಿದ ಹೊಸ ಹೊಂಗನಸಿದೆಂದು ನಿರ್ವಿವಾದವಾಗಿ ಹೇಳಬಹುದು. ಭಾವನೆ-ಬುದ್ಧಿ, ವಿಜ್ಞಾನ ಕಲೆ, ವಾಸ್ತವ-ಆದರ್ಶ, ವ್ಯವಹಾರ ವಿಚಾರ ಈ ದ್ವಂದ್ವಗಳ ಸಾಮರಸ್ಯವನ್ನು ಸಾಧಿಸಲು ಹಟತೊಟ್ಟ ಸಾಧಕ ಜೀವನದ ಸಿದ್ಧಿಯ ದರ್ಶನವನ್ನೊಳಗೊಂಡ ಜಗತ್ತಿನ ನಾಳಿನ ಬಾಳ ಚಿತ್ರ ಈ ನಾಟಕದಲ್ಲಿ ಬರುವ ಮುಖ್ಯಾಂಗ. ಕಥಾನಾಯಕ ನಾಯಿಕೆಯರಾದ ಕವಿ ಮತ್ತು ಸಾಮ್ಯವಾದಿನಿಯರ ಪಾತ್ರಪೋಷಣ ಅಪೂರ್ಣವೆಂದು ಕೆಲವೊಮ್ಮೆ ಎನ್ನಿಸಬಹುದು. ಅವರು ರಾಮ ಸೀತೆಯರಂತೆ, ದುಷ್ಯಂತ ಶಕುಂತಲೆಯರಂತೆ ಕಲ್ಪನಾ ಸುಲಭರಾದ ಐತಿಹಾಸಿಕ ಮತ್ತು ಜನಜನಿತ ವ್ಯಕ್ತಿಗಳಲ್ಲವಾದುದರಿಂದ ಮೇಲೆ ಹೇಳಿದಂತೆ ಓದುಗರಿಗೆ ಒಂದು ಕ್ಷಣಭಾಸವಾದೀತು. ಆದರೆ ಅದು ಗ್ರಂಥಕರ್ತರ ದೃಷ್ಟಿದೋಷವಲ್ಲ— ರಸಿಕರ ದೃಷ್ಟಿಯ ಇಲ್ಲವೆ ಸಂಸ್ಕಾರದ ಅಪೂರ್ಣತೆಯಿಂದ ತೋರುವ ಅಭಾಸಿಕ ದೋಷವೆಂದೇ ಹೇಳಬೇಕಾಗುತ್ತದೆ. ಆದುದರಿಂದ ಸಮಾಜಸೇವೆ, ಶಾಸ್ತ್ರಾನುಸಂಧಾನ, ಕಾವ್ಯಾರಾಧನ ಮತ್ತು ಆರ್ಥಿಕ ಕ್ರಾಂತಿ ಇವುಗಳ ವಿವೇಕವನ್ನು ಅಳವಡಿಸಿಕೊಂಡ ಆದರ್ಶ ಜೀವನದ ಚಿತ್ರ ವಿತ್ತ ಶ್ರೀ ಗೋಕಾಕರ ಕಾರ್ಯ ಶ್ಲಾಘ್ಯವಾದುದು. ಅವರ ಯುಗಾಂತರ ದರ್ಶನವು ಕನ್ನಡಿಗರಿಗೆ ಸ್ಫೂರ್ತಿದಾಯಕವಾಗಲಿ.

'ವಿಮರ್ಶಕ ವೈದ್ಯ' ವೊಂದು ಪ್ರಹಸನ. ಇದರಲ್ಲಿ ಹಳೆಯ ಕಾಲದ ವ್ಯಾಸದಾಸರಾದ ಶಾಸ್ತ್ರಿಗಳ, ಹಾಸ್ಯಾಸ್ಪದ ವಸ್ತುಪರವಾಗಿ ಹಾಸ್ಯಾಸ್ಪದವಾಗಿ ಕವನಹೆಣೆವ ಬಾಲಾಮೂರ್ತರ ಮತ್ತು ಶಾಯಿಪ್ಪಸಂಘವರ, ಛಂದಕ್ಕಾಗಿ ಶಬ್ದಗಳ ಕುತ್ತಿಗೆ ಮುರಿವ ಮತ್ತು ಬೋಳುಪದಗಳೆಂದು ಅಧುನಿಕ ಕವಿತೆಗಳ ನಕಲಿಮಾಡುವ ಪದ್ಯಕರ್ತೃಗಳಾದ ಏಕಾಂಬರರಾಯ ಕೆಂಥವರ, ಅಜೀರ್ಣವಾದ ವೇದಾಂತಸಾರ ತತ್ವವಿಚಾರಗಳನ್ನು ಛಂದೋಬದ್ಧವಾಗಿ ಬರೆವ ತಿಕೋರಕವಿಗಳ, ವಾಸ್ತವಿಕ ಚಿತ್ರಕೊಡುವ ಉದ್ದೇಶದಿಂದ ಕವಿತಾ ಮಾಧುರ್ಯಕ್ಕೆ, ರೀತಿ ನಡತೆಗೆ ತಿಲತರ್ಪಣವಿತ್ತ ಶರಣೇಂದ್ರರಂತಹ ಉಪದೇಶಕ ಕವಿಗಳ, ಬಾಯಿಗೆ ಬಂದುದರ ಮೇಲೆ ಲಾವಣಿ ಕಟ್ಟುವ ಕುಂಡಲಿನೀ ಕವಿಗಳಂಥವರ ಕಾವ್ಯ ಕೌಶಲಪ್ರದರ್ಶನವೇ ಈ ಪ್ರಹಸನದ ವಸ್ತು.

ಇಂದಿನ ಕನ್ನಡಿಗರಲ್ಲಿ ಮೇಲೆ ಹೇಳಿದ ಎಲ್ಲ ಹಗೆದ ಕಾವ್ಯಕರ್ತೃಗಳೂ ಇದ್ದಾರೆ. ಅವರು ತೆರೆಮರೆಯಲ್ಲಿ, ಪ್ರಹಸನದಲ್ಲಿ ಹೇಳಿರುವಂತೆ, ತಮ್ಮ ಕಾರ್ಯ ನಡೆಸುತ್ತಲೂ ಇದ್ದಾರೆ ಬಹುಶಃ ಇಂತಹ ಜೀವಂತ ಉದಾಹರಣಗಳನ್ನು ಕಂಡೇ ಶ್ರೀ ಗೋಕಾಕರು ಈ ಏಕಾಂಕ ಪ್ರಹಸನವನ್ನು ಬರೆದಿರಬಹುದೆನಿಸುತ್ತದೆ. ಇಲ್ಲಿ ಪ್ರಧಾನವಾಗಿ ಹಾಸ್ಯರಸವು ಚಿಲ್ಲಿರುತ್ತದೆ; ಪರ್ಯಾಯವಾಗಿ ಕವಿತಾ ರಚನಾ ದೋಷಗಳೂ ಬೋಧ್ಯವಾಗುತ್ತವೆ ಇಂತಹ ಪಂಡಿತ ರಸಿಕರ ನಗೆಗಾರಿಕೆಯು ರಸಿಕರನ್ನು ಪ್ರಸನ್ನೀಕರಿಸದಿರದೆಂದು ನಂಬುತ್ತೇವೆ.

ಉದ್ಯೋಗಪರ್ವಸಂಗ್ರಹ

ಸಂಪಾದಕರು ಶ್ರೀಗಳಾದ ಟಿ. ಎಸ್. ಶ್ಯಾಮರಾವ್ ಮತ್ತು ಎಚ್. ಎಂ. ಶಂಕರನಾರಾಯಣರಾವ್ ಅವರು. ಪ್ರಕಾಶಕರು ಕಾವ್ಯಾಲಯ ಮೈಸೂರು, ಅವರು. ಪುಟ ಸಂಖ್ಯೆ ೧೧೮, ಬೆಲೆ ರೂ. ೧—೮—೦

ಕುಮಾರವ್ಯಾಸ ಭಾರತದ ಬಗ್ಗೆ ಕನ್ನಡ ಜನತೆಗೆ ಹೆಚ್ಚು ಹೇಳಬೇಕಾಗಿಲ್ಲ. ಅದರ ಜನಪ್ರಿಯತೆ ಅಷ್ಟಿಷ್ಟಲ್ಲ. ಸುಲಭವಾಗಿ ಅದರ ಸಾರಗ್ರಹಣ ಮಾಡಲು ಅನುಕೂಲವಾಗುವಂತೆ ಉದ್ಯೋಗಪರ್ವವೊಂದನ್ನು ಈಗ ಸಂಪಾದಿಸಿದ ವಿದ್ವಾಂಸರು ಎಲ್ಲ ಪರ್ವಗಳನ್ನೂ ಹೀಗೇ ಸಂಗ್ರಹಿಸಿಕೊಡುವ ಹೊಣೆ ಹೊತ್ತಿರುವುದು ಪ್ರೋತ್ಸಾಹಾರ್ಹವಾಗಿದೆ. ಸಂಗ್ರಹದ ಪೂರ್ಣತೆಗಾಗಿ ಜೋಡಿಸಿದ ವಿಷಯ, ಮುನ್ನುಡಿ, ಪೀಠಿಕೆ, ಶಬ್ದಕೋಶ ಮತ್ತು ಶುದ್ಧಾಶುದ್ಧ ಪತ್ರಿಕೆಗಳು ಬಹಳ ಉಪಯುಕ್ತವಾದುವು. ಇಂಥ ಸತ್ಕಾರ್ಯಕ್ಕಾಗಿ ಸಂಪಾದಕ ಪ್ರಕಾಶಕರು ಅಭಿನಂದನಾರ್ಹರು.

ಮರಿ ವಿಜ್ಞಾನಿ

ಬರೆದವರು ಶ್ರೀ ಕುವೆಂಪು ಅವರು. ಪ್ರಕಾಶಕರು ಕಾವ್ಯಾಲಯ, ಮೈಸೂರು ಅವರು ಪುಟ ಸಂಖ್ಯೆ ೨೮, ಬೆಲೆ ೬ ಆಣೆಗಳು.

'ಮರಿ ವಿಜ್ಞಾನಿ' ಯೊಂದು ಮಕ್ಕಳ ಮುತ್ತಿನ ಮಾಲೆಯ ಮುತ್ತೆಂದು ಪ್ರಕಟವಾದ ಪದ್ಯ ಸಂಗ್ರಹ. ಇದರಲ್ಲಿ ಶ್ರೀ ಕುವೆಂಪುರವರ ೧೩ ಕವನಗಳಿವೆ. ಹೆಚ್ಚಿನ ಪದ್ಯಗಳು ಮಕ್ಕಳಿಗಾಗಿ ಬರೆದಂತಿವೆ. ಆದರೆ "ಕೈಮುಟ್ಟಾಟ", "ಅಮ್ಮನ ಮೂರ್ತಿ" ಮೊದಲಾದ ಪದ್ಯಗಳಲ್ಲಿ ಕಾಲಾತೀತ ದೇಶಾತೀತನಾದ ಪರಬ್ರಹ್ಮ ಬರದಿರುವುದು ಮಕ್ಕಳಿಗೆ "ಟೀರೀಯದ ಗಂಟಲೊಳ್ ಹಿಮಾಲಯಮಂ ತುರುಕಿದಂತಾ" ದೀತು. "ಪಾಪ ಪುಣ್ಯಗಳ ದಾಂಟಿ" ರುವ ತಮ್ಮ ಸ್ವರೂಪವನ್ನು ಮಕ್ಕಳು ತಿಳಿವಂತೆ ಹೇಳುವ ತಾಯಿ "ನ ಭೂತೇನ ಭವಿಷ್ಯತಿ" ಈ ಪುಸ್ತಕ ಓದುವ ಅಧಿಕಾರಿಗಳು ಮಕ್ಕಳೆಂದು ಪ್ರಕಟವಾಗಿರುವುದರಿಂದ ಮೇಲಿನ ಮಾತನ್ನು ಹೇಳಬೇಕಾಯ್ತು. ಇಂಥ ಪದ್ಯಗಳು ದೊಡ್ಡವರಿಗಾಗಿ ಬರೆದಂತಿಲ್ಲ, ಮಕ್ಕಳಿಗೆ ಅಜೀರ್ಣಕಾರಿಗಳು. ಬಾಕಿ ಎಲ್ಲ ಚೆನ್ನು.

ಗೌರಿಯ ಮದುವೆ

ಬರೆದವರು ಶ್ರೀ. ಸಿ. ಕೃಷ್ಣ ಅವರು. ಪ್ರಕಾಶಕರು ಕಾವ್ಯಾಲಯ ಮೈಸೂರು, ಅವರು. ಪುಟ ಸಂಖ್ಯೆ ೭೮, ಬೆಲೆ ಸಾದಾ ಪ್ರತಿಗೆ ರೂ. ೧-೪-೦ ಮತ್ತು ಕ್ಯಾಲಿಕೋ ಪ್ರತಿಗೆ ರೂ. ೨-೪-೦.

'ಗೌರಿಯ ಮದುವೆ' ಯೊಂದು ಶೃಂಗಾರ ಕಥೆ. ಇಲ್ಲಿಯ ಸನ್ನಿವೇಶಗಳೆಲ್ಲ ಕದ್ರಸಪೋಷಕಗಳೇ. ಶ್ರೀ. ಸಿ. ಕೃಷ್ಣರು ಇಂತಹ ವಸ್ತುಗಳನ್ನಾಯ್ದುಕೊಂಡು ಗ್ರಂಥರಚನೆ ಮಾಡುವುದರಲ್ಲಿ ಪಳಗಿದವರೆಂಬುದು ಅವರ ಇತರ ಕೃತಿಗಳ ಅವಲೋಕನದಿಂದ ತಿಳಿಯಬಹುದು. ಶೃಂಗಾರಪೋಷಕವಾದಷ್ಟು ದುರಂತ ಮತ್ತು ಸೂಕ್ಷ್ಮವೂ ಮಧುರವೂ ಆದ ಹಾಸ್ಯರೇಖೆ ಅಲ್ಲಲ್ಲಿ ಕಂಡುಬರುತ್ತದೆ. ಗೌರಿಯದೊಂದು ಪ್ರಿಯವಾದ ಪಾತ್ರ. ಆ ಕಥಾನಾಯಿಕೆ ಮತ್ತು ಕಥಾನಾಯಕ ಇವರು ಒಳ್ಳೆಯ ಲಲಿತ ಮೂರ್ತಿಗಳಾಗಿ ಚಿತ್ರಿಸಲ್ಪಟ್ಟಿದ್ದಾರೆ. ಆದುದರಿಂದ ಈ ಕಥೆಯು ಸ್ವಾಗತಾರ್ಹವೆಂದು ನಿರ್ದಾಕ್ಷಿಣ್ಯವಾಗಿ ಹೇಳಬಹುದು.

ಮುಕ್ತಿಸಾಧನ ಸುಲಭೋಪಾಯಗಳು

ಲೇ— ಪಂಡಿತ ಚೀಮನಹಳ್ಳಿ ರಘುನಾಥಾಚಾರ್ಯ ಶ್ರೀ ರಾಮಪೇಟೆ ಮೈಸೂರು, ಡೆಮಿ ಅಷ್ಟಪತ್ರದ ೫೬ ಪುಟಗಳು ಬೆಲೆ ಪತ್ತಾಜೆ. ವಿದ್ಯಾರ್ಥಿಗಳಿಗೆ ಐದಾಣೆ ಮಾತ್ರ.

ಮುಕ್ತಿಯೆ ಪ್ರತಿಯೊಬ್ಬ ಮಾನವನ ಪರಮಧ್ಯೇಯ. ಈ ಮುಕ್ತಿಯ ಮಾರ್ಗವನ್ನನುಸರಿಸದೆ ಮಾನವ ಬಳಲುತಿರುವವನು. ಈ ಮಾರ್ಗ ಬಹಳ ಕಠಿನವಾದುದೆಂಬುದು ನಿಜ. ಅದರೂ ಪ್ರತಿಯೊಬ್ಬ ಬಾಲ್ಯದಿಂದಲೆ ಈ ಮಾರ್ಗವನ್ನನುಸರಿಸಲು ಪ್ರಯತ್ನಿಸಿದರ ಇಷ್ಟಕೈಗೂಡಬಹುದು. ಪ್ರಸ್ತುತ ಪುಸ್ತಕದಲ್ಲಿ ಆಚಾರ್ಯರು ಈ ವಿಷಯವನ್ನು ಚೆನ್ನಾಗಿ ವಿಮರ್ಶಿಸಿರುವರು, ಈ ಮಾರ್ಗಾನುಯಾಯಿಗೆ ಮೊದಲು ಅವಶ್ಯವಾಗಿ ಬೇಕಾದ ಸತ್ವಗುಣವೃದ್ಧಿ, ಚಿತ್ತ ಸ್ಥೈರ್ಯ ಮೊದಲಾದ್ದನ್ನು ಹೀಗೆ ಸಾಧಿಸಬೇಕೆಂಬದನ್ನು ಮೊದಲನೆ ಭಾಗದಲ್ಲಿ ವಿವರಿಸಿದ್ದಾರೆ. ಎರಡನೆ ಭಾಗದಲ್ಲಿ ಶುಚಿರ್ಭೂತನಾದ ಮನುಷ್ಯ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯನ್ನಿಟ್ಟು ಅವನ ಪೂಜಾರಾಧನೆ ಮೊದಲಾದವುಗಳನ್ನು ಹೇಗೆ ಮಾಡಬೇಕು ಮುಂತಾದ್ದನ್ನು ಬೇಗೆ ವಿವರಿಸಿದ್ದಾಗಿದೆ. ಯಾವದೇ ವಿಶಿಷ್ಟ ಮತದ ತತ್ವಗಳನ್ನು ಇದರಲ್ಲಿ ಸಂಪ್ರದಾಯಬದ್ಧತೆಯಿಂದ ವಿವರಿಸಿರದೆ ಮಾನವಸಾಮಾನ್ಯಕ್ಕೆ ಅವಶ್ಯವಾಗಿರುವ ವಿಷಯವನ್ನೆಲ್ಲ ತಿಳಿಸಿದರು. ಎಲ್ಲ ಜನರು ವಿಶೇಷತಃ ಎಳೆ ಮಕ್ಕಳು ಇದನ್ನೋದಿ ಆಚರಣೆ ಮಾಡಿ ಮುಕ್ತಿಯೋಗ್ಯರಾಗಬೇಕಾಗಿ ಸೂಚನೆ.

ವೈಷ್ಣವ ದೀಕ್ಷೆ

ಪಂಡಿತ ಚೀಮನಹಳ್ಳಿ ರಾಘುನಾಥಾಚಾರ್ಯ ಡೆಮಿ ಅಷ್ಟಪತ್ರದ ೩೦ ಪುಟಗಳು ಬೆಲೆ ಆರಾಣೆ. ಶ್ರೀರಾಮಪೇಟೆ ಮೈಸೂರು.

ಮುಕ್ತಿ ಸಾಧನದ ದ್ವಿತೀಯ ಪರಿಚ್ಛೇದವಿದು. ಮುಕ್ತಿಗೆ ವೈಷ್ಣವ ದೀಕ್ಷೆ ಹೀಗೆ ಅವಶ್ಯವೆಂಬುದನ್ನು ಆಚಾರ್ಯರು ಈ ಪುಟ್ಟ ಪುಸ್ತಕದಲ್ಲಿ ಶಾಸ್ತ್ರಾಧಾರಗಳಿಂದ ಸಿದ್ಧ ಮಾಡಿದ್ದಾರೆ. ವೈಷ್ಣವ ದೀಕ್ಷೆಯೆಂದರೇನು ಅದನ್ನು ಪಡೆಯುವದೆಂತು, ಅದಕ್ಕಾಗಿ ವ್ರತ ನಿಯಮಗಳನ್ನೆಂತು ಆಚರಿಸಬೇಕು ಮೊದಲಾದವುಗಳನ್ನೆಲ್ಲ ಸ್ವಲ್ಪದರಲ್ಲಿ ತಿಳಿಸಿ ಕೊಟ್ಟಿದ್ದಾರೆ. ಎಲ್ಲ ಕರ್ಮಗಳಲ್ಲಿ ಭಗವದಾರಾಧನೆ ಅವಶ್ಯವೆಂಬುದನ್ನು ಪ್ರತಿಪಾದಿಸಿದ್ದಾರೆ. ಸಾಧಕರಿಗೆ ಒಳ್ಳೆ ಉಪಯುಕ್ತ ಪುಸ್ತಕ.

ಸನ್ಮಿತ್ರ ಸಮಾಗಮ

ಲೇ— ಪಂಡಿತ ಚೀಮನಹಳ್ಳಿ ರಘುನಾಥಾಚಾರ್ಯರು ಕ್ರೌನ ಅಷ್ಟಪತ್ರದ ೮೮ ಪುಟಗಳು ಬೆಲೆ ನಾಲ್ಕಾಣೆ. ಪ್ರಕಾಶಕರು ಎಂ. ಆರ್. ವೆಂಕೋಬರಾವ ಕೊತ್ವಾಲ ರಾಮಯ್ಯನ ಬೀದಿ ಮೈಸೂರ.

ಈ ಪುಟ್ಟ ಪುಸ್ತಕದಲ್ಲಿ ವಿಷ್ಣು ಸರ್ವೋತ್ತಮತ್ವ ವಿಷಯವನ್ನು ಆಚಾರ್ಯರು ರೈಲಿನಲ್ಲಿಯ ಪ್ರವಾಸಿಕರ ಸಂವಾದರೂಪದಿಂದ ಪ್ರತಿಪಾದಿಸಿರುವರು. ರೇಲ್ವೆ ಪ್ರವಾಸಿಕರ ಹರಟೆ ಇದಾಗಿದ್ದರೂ ವೇದಶಾಸ್ತ್ರಗಳಲ್ಲಿರುವ ವಾಕ್ಯಗಳನ್ನುದಾಹರಿಸಿ ಈ ವಿಷಯವನ್ನು ಸಪ್ರಮಾಣ ಸಿದ್ಧಮಾಡಿರುವರು. ಕನ್ನಡದಲ್ಲಿ ಸುಲಭ ಭಾಷೆಯಲ್ಲಿ ಮತ್ತು ಪ್ರಶ್ನೋತ್ತರ ರೂಪವಾಗಿ ಇದನ್ನು ಸಿದ್ಧ ಮಾಡಿದ್ದರಿಂದ ಸ್ತ್ರೀ ಪುರುಷ ಬಾಲಕ ಬಾಲಿಕೆ ವೃದ್ಧ ವೃದ್ಧೆಯರಿಗುಪಯುಕ್ತವಾಗಿದೆ. ಎಲ್ಲರೂ ಇದರ ಲಾಭ ಪಡೆಯಬೇಕು.

ಪರಾಪರ ಬ್ರಹ್ಮವಿದ್ಯೆ

ಲೇ— ಪಂಡಿತ ಚೀಮನಹಳ್ಳಿ ರಘುನಾಥಾಚಾರ್ಯರು ಶ್ರೀರಾಮಪೇಟೆ ಮೈಸೂರು. ಡೆಮಿ ಅಷ್ಟಪತ್ರದ ೨೬ ಪುಟಗಳು ಬೆಲೆ ಆರಾಣೆ

ಛಾಂದೋಗ್ಯೋಪನಿಷತ್ತಿನಲ್ಲಿ ವಿವರಿಸಲಾದ ಗುರುಶುಶ್ರೂಷೆ ಮತ್ತು ಸಂವರ್ಗ ವಿದ್ಯೋಪದೇಶವೆಂಬ ಪ್ರಬಂಧವಿದು. ಶ್ರೀಮನ್ಮಧ್ವಸಿದ್ಧಾಂತ. ಪ್ರಕಾಶಿನಿಯಲ್ಲಿ ಪ್ರಸಿದ್ಧವಾದುದು. ಪರಾಪರ ಬ್ರಹ್ಮವಿದ್ಯೆಯನ್ನು ತಿಳಿಯುವದು ಪ್ರತಿಯೊಬ್ಬ ಮಾನವನ ಕರ್ತವ್ಯ. ಉಪನಿಷತ್ತಿನ ಸಾರವೇ ಇದು. ಇದನ್ನು ಎಷ್ಟು ವಿಧದಿಂದ ತಿಳಿದುಕೊಂಡರೂ ಅವಶ್ಯವೆ. ಈ ಪರಾಪರ ಬ್ರಹ್ಮವಿದ್ಯೆಯನ್ನು ಚೆನ್ನಾಗಿ ತಿಳಿದುಕೊಂಡು ಮನನಮಾಡುವದು ಪರಮಾನಂದಕರವು. ಶ್ರೇಯಸ್ಸಿಗೆ ಸಾಧನೆಯು. ಆಚಾರ್ಯರು ತಿಳಿಯಾದ ಭಾಷೆಯಲ್ಲಿ ಸ್ವಲ್ಪದರಲ್ಲಿಯೆ ಈ ಗೂಢ ವಿಷಯವನ್ನು ತಿಳಿಸಿಕೊಡಲು ಪ್ರಯತ್ನಿಸಿದ್ದಾರೆ. ಜಿಜ್ಞಾಸುಗಳು ಇದರ ಪ್ರಯೋಜನ ಪಡೆಯಬೇಕು.

ಶ್ರೀರಾಮಚಾರಿತ್ರ್ಯ, ಕೃಷ್ಣ ಚಾರಿತ್ರ್ಯ ಮಂಜರಿ

ಲೇ— ಪಂಡಿತ ಚೀಮನಹಳ್ಳಿ ರಘುನಾಥಾಚಾರ್ಯರು ಕ್ರೌನ ಅಷ್ಟಪತ್ರ ೩೨ ಪುಟಗಳ

—೧೬ ನೇ ಪುಟಕ್ಕೆ

ರಾಷ್ಟ್ರಧ್ವಜ
ಅಶೋಕ ಮತ್ತು ಗಾಂಧಿ ಯುಗಗಳ ಹೊಂದಿಕೆ

ರಾಷ್ಟ್ರಧ್ವಜ ಮತ್ತು ರಾಷ್ಟ್ರಮುದ್ರೆಗಳ ರಚನೆಯ ಬಗ್ಗೆ ನಿಯಮಿತವಾದ ಸಮಿತಿಯು ಅಶೋಕ ಚಕ್ರವರ್ತಿಯ ಕಾಲದ ಸಾಂಚಿಯ ಸ್ತಂಭದಿಂದ ಸ್ಫೂರ್ತಿ ಪಡೆಯಿತೆಂದು ತಿಳಿದುಬಂದಿದೆ. ಮೊದಲಿನ ಹಳದಿ-ಬಿಳಿ-ಹಸಿರು ಪಟ್ಟಿಗಳ ಮೇಲೆ ಚಕ್ರವೊಂದಿರುವಂತೆ ಧ್ವಜ ರಚಿಸಲ್ಪಡುವುದು.

ಗಾಂಧೀಜಿಯು ಚರಕದ ಬದಲು ಚಕ್ರವನ್ನು ಇಟ್ಟಿರುವುದಕ್ಕೆ ಸಮ್ಮತಿಸಿದ್ದಾರೆ. ಚಕ್ರವು ಜೀವನ ಚಕ್ರ, ಅದೃಷ್ಟಚಕ್ರ, ಚಲನ ಚಕ್ರ ಮತ್ತು ಪ್ರಗತಿ ಚಕ್ರಗಳನ್ನು ವ್ಯಂಜಿಸುತ್ತದೆ. ಅಷ್ಟೂ ಅಲ್ಲದೆ ಯುದ್ಧದಲ್ಲಿ ಗೆದ್ದು ಶಸ್ತ್ರಸನ್ಯಾಸ ತೆಗೆದುಕೊಂಡು ಧರ್ಮಚಕ್ರವನ್ನು ಸ್ಥಾಪಿಸಿದ ಅಶೋಕ ಚಕ್ರವರ್ತಿಯ ಧರ್ಮದೃಷ್ಟಿಯನ್ನೂ ಶಾಂತಿಪ್ರಿಯತೆಯನ್ನೂ ಸೂಚಿಸುತ್ತದೆ.

ಇನ್ನು ಅಧುನಿಕ ವಿಚಾರಕ್ಕೆ ಹೊಂದಿಸಿ ನೋಡುವುದಾದರೆ ಚಕ್ರವು ವಿಜ್ಞಾನದ ಬೆಳವಣಿಗೆ— ಅದರಲ್ಲೂ ಯಾಂತ್ರಿಕ ಮತ್ತು ಕೈಗಾರಿಕೆ ಹಾಗೂ ಉದ್ಯಮಗಳ ಅಭಿವೃದ್ಧಿಯ ಚಿಹ್ನವಾಗಿದೆ. ಅದು ಯಂತ್ರ, ಮೋಟಾರು, ವಿಮಾನಗಳನ್ನು ಕಂಡುಹಿಡಿದ ಅದ್ಭುತವಾದ ಕಾಲಗತಿಯನ್ನು ಪ್ರತಿನಿಧಿಸುತ್ತದೆ. ಈ ದೃಷ್ಟಿಯಿಂದ ಚಕ್ರವು ಭಾರತದ ಪೂರ್ವಕಾಲದ ಧ್ಯೇಯವಾದ ಮತ್ತು ಅಧುನಿಕ ಕಾಲದ ವಾಸ್ತವವಾದ. ಈ ಎರಡಕ್ಕೂ ಒಂದೇ ಗುರುತಾಗಿ ತೋರುತ್ತದೆ.

ಅನಂತರ ಚಕ್ರದ ಹಲ್ಲುಗಳು ಅಚ್ಚು ಸಹಿತವಾಗಿ ಸೂರ್ಯನಿಗೆ ಪ್ರತೀಕವಾಗುವುವು. ಅವನು ಎಷ್ಟೋ ಶತಮಾನಗಳ ವರೆಗೆ ಜೀವಶಕ್ತಿದಾತನೆಂದೂ ಸಸ್ಯಾದಿ ಫಲನಾಯಕನೆಂದೂ ಬೆಳಕು ಬೀರುವವನೆಂದೂ ಪೂಜಿಸಲ್ಪಡುತ್ತಿದ್ದನು. ಆದುದರಿಂದ ಚಕ್ರವು ಜೀವಶಕ್ತಿಯ, ಬೆಳಕಿನ, ಆರೋಗ್ಯ ಮತ್ತು ತನೋಭಾವಗಳ ಪ್ರತೀಕವಾಗಬಲ್ಲುದು. ಇಂತಹ ಚಕ್ರವು ಪ್ರತಿನಿಧಿಸುವ ಗುಣಧರ್ಮ ಧ್ಯೇಯ ಧೋರಣಗಳನ್ನು ತಿಳಿದು ಆಚರಿಸುವುದು ಭಾರತೀಯರ ಕರ್ತವ್ಯವಲ್ಲವೆ? ನಮ್ಮ ಕಾರ್ಯದಿಂದ ನಾವು ಚಕ್ರವು ಪ್ರತಿನಿಧಿಸುವ ನೈತಿಕ ಸೌಂದರ್ಯವನ್ನು ಪ್ರಕಟಿಸಿ ಜಗತ್ತಿನ ಮನ್ನಣೆಗೆ ಪಾತ್ರರಾಗಬೇಕು.

ಸೂಚಿತವಾದ ರಾಷ್ಟ್ರಮುದ್ರೆಯು ಬಹಳ ರಮಣೀಯವಾಗಿದೆ. ಇದೂ ಅಶೋಕ ಚಕ್ರವರ್ತಿ ನೆಡಿಸಿದ ಸಾಂಚಿಯ ಸ್ತಂಭದಿಂದಲೆ ಸ್ಫೂರ್ತಿಪಡೆದದ್ದು. ಈ ಮುದ್ರೆಯಲ್ಲಿ ಪರಂಪರಾಗತ ರೂಪದ ಕಮಲ, ಸ್ತಂಭಾಕೃತಿ ಮತ್ತು (ನಾಲ್ಕರ ಬದಲು) ಮೂರು ಸಿಂಹಗಳು ಚಿತ್ರಿಸಲ್ಪಡುತ್ತವೆ.

ಸ್ತಂಭವು ಧರ್ಮದ ಜಯಚಿಹ್ನವಾಗಿದೆ ಕಮಲವು ಸೌಂದರ್ಯ ಸಮೃದ್ಧಿಗಳ ಪ್ರತೀಕವಾಗಿದೆ. ಮನುಷ್ಯ ಮನುಷ್ಯರಲ್ಲಿಯ ಸಂಬಂಧದ ಸೌಂದರ್ಯ, ಜೀವನ ಸೌಂದರ್ಯ, ಕಲಾ ಸೌಂದರ್ಯ, ಶಿಲ್ಪ ಸೌಂದರ್ಯ, ಸಂಗೀತ ಸಾಹಿತ್ಯಗಳ ಸೌಂದರ್ಯ, ವೀರದೇಶಭಕ್ತಿಯ ಸೌಂದರ್ಯ, ದೇಶೋದ್ಧಾರ ಕಾರಣ ಸೌಂದರ್ಯ ಎಂಬ ಸೌಂದರ್ಯದ ನಾನಾ ಮುಖಗಳು, ವಿಶ್ವರೂಪಗಳು ಚಕ್ರದಿಂದ ಸೂಚಿತವಾಗುತ್ತವೆ. ಇದೊಂದು ಕಮಲ ಸಂದೇಶವೆಂದರೂ ಎನ್ನಬಹುದು.

ಅರಣ್ಯರಾಜನಾದ ಸಿಂಹನು ಶಕ್ತಿಸಾಹಸ ಗಾಂಭಿರ್ಯಗಳ ಮೂರ್ತಿಯು. ಮೂರು ಸಿಂಹಾಕೃತಿಗಳು ಮೇಲಿನ ಮೂರು ಗುಣಗಳ ಪ್ರತೀಕಗಳಾಗಬಲ್ಲುವು. ಸ್ವತಂತ್ರ ಭಾರತೀಯನು ಸಮರ್ಥನೂ, ನಿರ್ಭೀತನೂ, ಗಾಂಭೀರ್ಯ ಸಂಪನ್ನನೂ ಆಗಬೇಕೆಂಬುದನ್ನು ಇವು ಸೂಚಿಸುತ್ತವೆ; ಮತ್ತು ಸಿಂಹಪ್ರತಾಪದಿಂದ ಸಂಪಾದಿಸಿದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬೇಕೆಂದೂ ಸಂದೇಶ ಕೊಡತಕ್ಕವಾಗಿವೆ. ಧೀರ, ಉದಾರ, ಗಂಭೀರ ಭಾವಗಳನ್ನು ಸಿಂಹಾಕೃತಿ ಬಿಂಬಿಸುವದು. ದಾಸ್ಯದಾನದಂತಿಯನ್ನು ಸೀಳಿಬಿಸುಡುವ ಭಾರತೀಯ ಯೋಧಪ್ರತಾಪಕ್ಕೆ ಇದಕ್ಕಿಂತ ಉತ್ತಮವಾದ ಚಿಹ್ನವಿಲ್ಲ; ಆದುದರಿಂದ ಸ್ತಂಭಕ್ಕೆ ಮೂರು ಸಿಂಹಗಳು ಜೊತೆಯಾಗಿ ಚಾಚಿನಿಂತಂತೆ ಮುದ್ರೆಯಲ್ಲಿ ಚಿತ್ರಿಸಲಾಗುವುದು.

ಸಂಪಾದಕೀಯ ಟೀಕೆಟಿಪ್ಪಣಿಗಳು

ಸ್ವಾತಂತ್ರ್ಯದಿನೋತ್ಸವ

ಅಗಸ್ಟ ೧೫ ನೇ ತಾರೀಕು ಹಿಂದುಸ್ತಾನದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವದು. ಅಂದು ಭಾರತವು ಬ್ರಿಟಿಶ ಸರಕಾರದಿಂದ ಅದಳಿತ ಅಧಿಕಾರವನ್ನು ಸ್ವೀಕರಿಸುವುದು. ಬ್ರಿಟಿಶ ಪಾರ್ಲಮೆಂಟಿನಲ್ಲಿ ಈ ಬಗ್ಗೆ ಮಂಡಿಸಿದ ಮಸೂದೆ ಸ್ವೀಕೃತವಾಗಿ ಅರಸನ ಮುದ್ರೆ ಕೂಡ ಬಿದ್ದು ಅದೀಗ ಕಾಯದೆಯಾಗಿ ಪರಿಣಮಿಸಿದೆ. ಲಾರ್ಡ ಕ್ಲೈವನು ಖಡ್ಗದ ಬಲುಮೆಯಿಂದ ಕಸಿದುಕೊಂಡಿದ್ದ ಹಿಂದುಸ್ತಾನವನ್ನು ಭಾರತೀಯರು ತ್ಯಾಗ, ಅಹಿಂಸಾತ್ಮಕ ಹೋರಾಟ, ಆತ್ಮಬಲಿದಾನಗಳಿಂದ ಮರಳಿ ಪಡೆದರು. ಇದರಲ್ಲಿ ಬ್ರಿಟಿಶರ ದೌರ್ಬಲ್ಯವೇನೂ ಇಲ್ಲ; ಔದಾರ್ಯವೇ ಇದೆಂದು' ಮುಖ್ಯಮಂತ್ರಿ ಅ್ಯಟ್ಲಿಯವರು ಆತ್ಮಪೌರುಷ ಕೊಚ್ಚಿಕೊಂಡಿದ್ದರೂ ಭಾರತೀಯರ ಸತತ ಪ್ರಯತ್ನದ ಪರಿಣಾಮವೆ ಇದೆಂದು ಹೇಳಬೇಕಾಗಿದೆ. ಏನೇ ಇದ್ದರೂ ಘಟನೆಗಳು ಅಷ್ಟು ದ್ರುತಗತಿಯಿಂದ ಸಾಗಿ ನಿರೀಕ್ಷಣೆಗಿಂತ ಮೊದಲೆ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಪಾರ್ಲಮೆಂಟಿನ ಮಸೂದೆಯನ್ವಯ ಈಗ ಸಾಮಂತ ಸ್ವರಾಜ್ಯ ಸಿಕ್ಕಿದ್ದರೂ ಭಾರತೀಯರು ಬೇಗ ಪೂರ್ಣ ಸ್ವಾತಂತ್ರ್ಯ ಪಡೆವುದರಲ್ಲಿ ಸಂದೇಹವಿಲ್ಲ. ಅಂತೆಯೆ ಅಗಸ್ಟ ೧೫ ರಂದು ಸ್ವಾತಂತ್ರ್ಯದಿನೋತ್ಸವವನ್ನು ನಡೆಸಬೇಕೆಂದು ಕಾಂಗ್ರೆಸ್ ಕಾರ್ಯ ಸಮಿತಿಯವರು ನಿರ್ಧರಿಸಿದ್ದಾರೆ. ೧೯೨೯ ರ ಲಾಹೋರ ಕಾಂಗ್ರೆಸ್ಸಿನಿಂದ ಕಾಂಗ್ರೆಸ್ಸು ಜಾನೇವಾರಿ ೨೬ ನ್ನು ಸ್ವಾತಂತ್ರ್ಯ ದಿನವೆಂದು ಆಚರಿಸುತಿರುವದು ಸಂಪೂರ್ಣ ಸ್ವಾತಂತ್ರ್ಯದ ಗೊತ್ತುವಳಿಯನ್ನು ಕಾಂಗ್ರೆಸ್ಸು ಪಾಸು ಮಾಡಿಕೊಂಡ ದಿನವದು. ೧೯೪೭ ಅಗಸ್ಟ ೧೫ ಅ ಸ್ವಾತಂತ್ರ್ಯವನ್ನು ಕರತಲಾಮಲಕಮಾಡಿಕೊಂಡ ದಿನ. ಅಂತೆಯೆ ಈ ಎರಡೂ ದಿನಗಳಾಚರಣೆಯಲ್ಲಿ ಭೇದವಿಂತಿದೆ. ಜಾನೇವಾರಿ ೨೬ ಸ್ವಾತಂತ್ರ್ಯ ದಿನೋತ್ಸವವನ್ನು ಬ್ರಿಟಿಶ ಅಧಿಕಾರಿಗಳು ನಿರ್ಬಂಧಿಸುತಿದ್ದರು; ಕೇವಲ ಕಾಂಗ್ರೆಸ್ಸಿಗರಷ್ಟೇ ಅದರಲ್ಲಿ ಭಾಗವಹಿಸುತಿದ್ದರು. ಆದರೆ ಅಗಸ್ಟ ೧೫ ರ ಸ್ವಾತಂತ್ರ್ಯ ಉತ್ಸವವನ್ನು ಭಾರತೀಯರೆಲ್ಲ ಒಳ್ಳೆ ಉತ್ಸಾಹದಿಂದ ಜರುಗಿಸಲಿರುವರು. ಅಧಿಕಾರಿಗಳು ಪ್ರಜೆಗಳೆಂಬ ಭೇದಭಾವವಿಲ್ಲದೆ ಎಲ್ಲರೂ ಕೂಡಿಕೊಂಡು ಈ ದಿನವನ್ನಾಚರಿಸಲಾಗುವದು. ಅಂದು ಧ್ವಜಾರೋಹಣ ಸಾರ್ವಜನಿಕ ಸಭೆ ಮೊದಲಾದವುಗಳು ನಡೆಯತಕ್ಕದ್ದು. ಅದೊಂದು ಹಬ್ಬದ ದಿನದಂತೆ ಎಲ್ಲರೂ ತಮ್ಮ ತಮ್ಮ ಮನೆಗಳನ್ನು ಶೃಂಗರಿಸಿ ರಾಷ್ಟ್ರಧ್ವಜವನ್ನೇರಿಸಿ ಸ್ವಾತಂತ್ರ್ಯ ಮಹೋತ್ಸವವನ್ನು ಜರುಗಿಸಬೇಕು ಇದೆಲ್ಲ ಕಾರ್ಯ ಅತ್ಯಂತ ಶಾಂತತೆಯಿಂದ ನಡೆಯಬೇಕು. ಎಲ್ಲಿಯೂ ಸ್ವಲ್ಪವೂ ಒತ್ತಾಯ ನಡೆಯತಕ್ಕದ್ದಲ್ಲ. ದೇಶ ವಿಭಜನೆಯಾದುದು ಎಷ್ಟೇ ವಿಷಾದಕರವಾಗಿದ್ದರೂ ದೊರೆತ ಸ್ವಾತಂತ್ರ್ಯವನ್ನು ಸ್ವೀಕರಿಸಿ ಅಖಂಡತ್ವಕ್ಕಾಗಿ ಪ್ರಯತ್ನಿಸುವದೆ ಕರ್ತವ್ಯವಾಗಿದೆಯಲ್ಲದೆ ಈ ದಿನೋತ್ಸವವನ್ನು ಬಹಿಷ್ಕರಿಸುವದು ಇಲ್ಲವೆ ವಿರೋಧಿಸುವದು ಸರಿಯಾದ ಮಾರ್ಗವಲ್ಲ. ಆದುದರಿಂದ ಎಲ್ಲರೂ ಇದರಲ್ಲಿ ಭಾಗವಹಿಸತಕ್ಕದ್ದು.

ನಮ್ಮ ರಾಷ್ಟ್ರಧ್ವಜ

ಘಟನಾ ಸಮಿತಿಯವರು ಹಿಂದುಸ್ತಾನದ ಹೊಸ ರಾಷ್ಟ್ರಧ್ವಜವೆಂತಿರಬೇಕೆಂಬದನ್ನು ನಿರ್ಧರಿಸಿರುವರು. ಈ ಹೊಸ ಧ್ವಜದ ವಿವರಗಳನ್ನು ಇದೇ ಸಂಚಿಕೆಯಲ್ಲಿ ಬೇರೆಡೆ ಕೊಟ್ಟಿದ್ದೇವೆ. ಘಟನಾ ಸಮಿತಿಯಲ್ಲಿ ಎಲ್ಲ ಜಾತಿ ಪಕ್ಷ ಪಂಗಡಗಳ ಪ್ರತಿನಿಧಿಗಳೂ ಈ ಧ್ವಜಕ್ಕೆ ಒಪ್ಪಿಗೆ ಕೊಟ್ಟದ್ದರಿಂದ ಭಾರತೀಯರ ಸರ್ವಮಾನ್ಯ ಧ್ವಜವೆಂದು ಎಲ್ಲರೂ ಇದನ್ನು ಮನ್ನಿಸತಕ್ಕದ್ದು. ಅಗಸ್ಟ ೧೫ ರಂದು ಈ ಹೊಸ ಧ್ವಜವನ್ನೆ ಎಲ್ಲರೂ ಹಾರಿಸತಕ್ಕದ್ದು. ಘಟನಾ ಸಮಿತಿ ಒಮ್ಮೆ ಪೂರ್ಣ ವಿಚಾರ ಮಾಡಿ ಈ ಧ್ವಜವನ್ನು ಗೊತ್ತುಪಡಿಸಿದ ನಂತರ ಅದರಲ್ಲಿ ದೋಷ ಮುಂತಾದವುಗಳನ್ನು ತೆಗೆಯುವದು ಜಾಣತನವಲ್ಲ. ಎಲ್ಲರೂ ಈ ಧ್ವಜಕ್ಕೇ ತಲೆವಾಗತಕ್ಕದ್ದು. ಈ ಧ್ವಜವಾದರೊ ಭಾರತೀಯರ ಹಿಂದಿನ ಹಿರಿಮೆಗೆ, ಇಂದಿನ ಗೌರವಕ್ಕೆ ತಕ್ಕುದಾಗಿದೆ ಅದರಲ್ಲಿದ್ದ ಮೂರು ಬಣ್ಣಗಳು ಜಾತಿಸೂಚಕವಾಗಿರದೆ ಕೇಸರಿಯು ಧೈರ್ಯ ಮತ್ತು ತ್ಯಾಗ, ಬಿಳಿ ಸತ್ಯ ಮತ್ತು ಶಾಂತಿ, ಹಸಿರು ವಿಶ್ವಾಸ ಮತ್ತು ಶಕ್ತಿಯನ್ನು ಸೂಚಿಸುತ್ತವೆ. ಮಧ್ಯದಲ್ಲಿರುವ ಅಶೋಕನ ಚಕ್ರವು ನಮ್ಮ ಪ್ರಾಚೀನ ವೈಭವವನ್ನು ಸ್ಮರಣೆಗೆ ತಂದು ಕೊಡುತಿದೆಯಲ್ಲದೆ ನಮ್ಮ ಭವಿಷ್ಯದ ಮಾರ್ಗದರ್ಶಕವಾಗಿದೆ. ಕಾಂಗ್ರೆಸ್ಸು ತನ್ನ ಸ್ವಾತಂತ್ರ್ಯ ಸಂಗ್ರಾಮದಲ್ಲಿಟ್ಟುಕೊಂಡ ಧ್ವಜದಲ್ಲಿನ ರಾಟಿಯ ಬದಲು ಚಕ್ರವನ್ನು ಇಡಲಾಗಿದೆ. ರಾಟಿಯು ಧ್ವಜದ ಎರಡೂ ಬದಿಗಳಲ್ಲಿ ಒಂದೇ ರೀತಿ ಕಾಣಿಸದೆ ಇದ್ದುದರಿಂದ ಈ ರೀತಿ ವ್ಯತ್ಯಾಸ ಮಾಡಲಾಯಿತೆಂದು ಪಂಡಿತ ಜವಾಹರಲಾಲರು ಹೇಳಿದ್ದು ಉಚಿತವಾಗಿದೆ. ಈ ರಾಷ್ಟ್ರಧ್ವಜದಡಿಯಲ್ಲಿ ಭಾರತೀಯರು ಜಗತ್ತಿನಲ್ಲಿ ತಮ್ಮ ಕೀರ್ತಿಯನ್ನು ಪಸರಿಸಲೆಂದು ಈ ಸಮಯದಲ್ಲಿ ಹಾರಯಿಸಬಹುದಾಗಿದೆ. ರಾಷ್ಟ್ರಧ್ವಜಕ್ಕಾಗಿ ಭಾರತೀಯರು ಬಗೆಬಗೆಯ ಕಷ್ಟನಷ್ಟಗಳನ್ನು ಹೊಂದಿದ್ದುಂಟು. ಆದುದರಿಂದ ಅದರ ಫಲವಾಗಿ ಅವರಿಗೆ ಸಾಮಂತ ಸರಕಾರ ಮತ್ತು ಸ್ವತಂತ್ರ ಧ್ವಜ ಸಿಕ್ಕಿದೆ. ಪರಕೀಯರ ದಾಸ್ಯದ ದ್ಯೋತಕವಾದ ಯೂನಿಯನ್ ಜ್ಯಾಕಿಗೆ ಇಂದು ಭಾರತದಲ್ಲಿ ಸ್ಥಾನವುಳಿಯಲಿಲ್ಲ ಎಲ್ಲ ಜಾತಿಯ ಜನರೂ ಈ ಧ್ವಜಕ್ಕೆ ಬೆಂಬಲ ಕೊಟ್ಟದ್ದರಿಂದ ಹಿಂದುಸ್ತಾನದಲ್ಲಿ ಬೇರೆ ಧ್ವಜಗಳನ್ನು ಯಾರೂ ಹಾರಿಸಲಾರರು. ಅಗಸ್ಟ ೧೫ ಕ್ಕೆ ಭಾರತದಲ್ಲೆಲ್ಲ ಹಾರಾಡಹತ್ತಿದ ಈ ರಾಷ್ಟ್ರಧ್ವಜವು ಕೆಳಗಿಳಿಯದೆ ಯಾವಾಗಲೂ ಭಾರತದ ಸ್ವಾತಂತ್ರ್ಯವನ್ನೇ ಎತ್ತಿ ಹಿಡಿಯಲಿ.

ಸಕಾಲಿಕ ಎಚ್ಚರಿಕೆ

ಅಗಸ್ಟ ೧೫ ರಿಂದ ಭಾರತ ಮತ್ತು ಪಾಕಿಸ್ತಾನ ಎರಡು ಬೇರೆ ಬೇರೆ ಸಾಮಂತ ರಾಷ್ಟ್ರಗಳು ಹಿಂದುಸ್ತಾನದಲ್ಲಿ ಸ್ಥಾಪಿತವಾದಂತಾಯಿತು. ಮುಸಲ್ಮಾನ ಬಹುಸಂಖ್ಯಾಕ ಮತ್ತು ಹಿಂದೂ ಬಹುಸಂಖ್ಯಾಕ ಪ್ರಾಂತಗಳೆಂದು ಬ್ರಿಟಿಶರು ಈ ಭಾಗಗಳನ್ನು ಮಾಡಿದ್ದರೂ ಆಯಾ ಬಾಗಗಳಲ್ಲಿ ಹಿಂದೂ ಮುಸಲ್ಮಾನರು ಉಳಿದೇ ತೀರುವರು. ಆದುದರಿಂದ ಅಲ್ಪಸಂಖ್ಯಾಕರನ್ನು ರಕ್ಷಿಸುವ ಹೊಣೆ ಬಹುಸಂಖ್ಯಾಕರದಾಗಿದೆ. ಹಿಂದುಸ್ತಾನ ಅಖಂಡವಾದಾಗಿನಕ್ಕಿಂತ ಈ ಹೊಣೆ ಈಗ ಹೆಚ್ಚಿದೆಯೆಂದೂ ಹೇಳಬೇಕಾಗಿದೆ. ಆದರೆ ನವಖಾಲಿ ಮೊದಲಾದ ಪೂರ್ವ ಬಂಗಾಲ ಪ್ರದೇಶಗಳಿಂದ ಬರುವ ಸುದ್ದಿಗಳನ್ನು ನೋಡಿದರೆ ಯಾರ ಹೃದಯವೂ ತಳಮಳಗೊಳ್ಳದಿರಲಾರದು. ಈ ಸಂಬಂಧದಲ್ಲಿ ಶ್ರೀ ಆಶುತೋಷ ಲಾಹಿರಿಯವರು ಹೊರಡಿಸಿದ ಪ್ರಕಟನೆಯನ್ನು ಸಂಬಂಧಿಸಿದ ಸರಕಾರಗಳು ಮತ್ತು ಆಯಾ ಜಾತೀಯ ಧುರೀಣರು ನಿರ್ವಿಕಾರ ಮತ್ತು ಗಂಭೀರ ರೀತಿಯಿಂದ ವಿಚಾರಿಸಿ ಪರಿಸ್ಥಿತಿಯನ್ನು ಶಾಂತವಿಡುವುದಕ್ಕೆ ಮುಂಜಾಗ್ರತೆ ವಹಿಸುವದು ಕರ್ತವ್ಯವಾಗಿದೆ. ಅಗಸ್ಟ ೧೫ ರ ನಂತರ ಹಿಂದುಗಳ ಆಸ್ತಿಪಾಸ್ತಿ ಹಾಗು ಅವರ ಹೆಣ್ಣುಮಕ್ಕಳ ಮೇಲೆ ತಮಗೆ ಪೂರ್ಣ ಅಧಿಕಾರ ಪ್ರಾಪ್ತವಾಗುವದೆಂಬ ದುಷ್ಟವಿಚಾರ ಪೂರ್ವಬಂಗಾಲದ ಮುಸಲ್ಮಾನರಲ್ಲಿ ಸುಳಿಯುತಿದೆಯೆಂದು ತಿಪ್ಪೇರಾ ಬಕರಗಂಜ ಮೊದಲಾದ ಜಿಲ್ಲೆಗಳಿಂದ ಪ್ರತಿದಿನ ಸುದ್ದಿ ಬರುತಿದೆ. ಹಿಂದೂ ಮಹಿಳೆಯರ ಬಗ್ಗೆ ಮುಸಲ್ಮಾನರು ತಾಳುತಿರುವ ಧೋರಣ ಅತ್ಯಂತ ಗಂಡಾಂತರದ್ದಾಗಿದೆಂದು ಸುದ್ದಿ. ೧೫ ರ ನಂತರ ಹಿಂದು ಹುಡಿಗೆಯರನ್ನು ಮುಸಲ್ಮಾನರಿಗೆ ಮಾಡಿಕೊಡಲಿಕ್ಕೆಬೇಕೆಂದು ಬಹಿರಂಗವಾಗಿ ಕೆಲವರು ಹೇಳುತಿರುವರು.. ಕೆಲವರು ಈ ಬಗ್ಗೆ ನೋಟೀಸು ಕೂಡ ಕೊಟ್ಟಿರುವರು ಎಂದು ಮುಂತಾಗಿ ಲಾಹಿರಿಯವರು ತಮ್ಮ ಪ್ರಕಟನೆಯಲ್ಲಿ ಬರೆದಿರುತ್ತಾರೆ. ಇದೆಲ್ಲ ವಸ್ತುಸ್ಥಿತಿಯಾಗಿದ್ದರೆ ಅಲ್ಲಿನ ಮುಸಲ್ಮಾನ ಧುರೀಣರು ಮತ್ತು ಪಾಕಿಸ್ತಾನದ ಗವರ್ನರ ಜನರಲರಾದ ಕಾಯದೆ ಅಜಂ ಜಿನ್ನಾರವರು ಈ ಬಗ್ಗೆ ಕೂಡಲೆ ವಿಚಾರ ಮಾಡಬೇಕು. ದಾರಿ ತಪ್ಪಿ ನಡೆಯಬಯಸಿದ ತಮ್ಮ ಅನುಯಾಯಿಗಳಿಗೆ ಚೆನ್ನಾಗಿ ಬುದ್ಧಿ ಹೇಳಬೇಕು. ಬಾಯಿಂದ ಅಲ್ಪಸಂಖ್ಯಾಕರ ರಕ್ಷಣೆಯ ಮಾತು ಆಡಿದರೆ ತೀರದು; ಸದ್ಯಕ್ಕೆ ಅವನ್ನೆಲ್ಲ ಕೃತಿಯಲ್ಲಿ ತರಬೇಕಾಗಿದೆ. ಅಗಸ್ಟ ೧೫ ರ ನಂತರ ಪೂರ್ವ ಬಂಗಾಲದಲ್ಲಿಯ ಹಿಂದುಗಳು ಅವರ ಆಸ್ತಿಪಾಸ್ತಿ ಮತ್ತು ಹೆಣ್ಣುಮಕ್ಕಳ ಕೂದಲೆಳೆಗೆ ಕೂಡ ಧಕ್ಕೆ ಹತ್ತದಂತೆ ನೋಡಿಕೊಳ್ಳುವದು ಪೂರ್ವ ಬಂಗಾಲ ಸರಕಾರದ ಮತ್ತು ಮುಸಲ್ಮಾನರ ಕರ್ತವ್ಯವಾಗಿದೆ. ಹಿಂದೆ ಆದ ಅನರ್ಥಗಳೇ ಸಾಕಾಗಿರುವಾಗ ಮತ್ತೆ ಈ ಹೊಸ ಅನರ್ಥಗಳಿಗೆ ಅವಕಾಶ ಕೊಡಕೂಡದು. ಈ ರೀತಿ ಬಲಾತ್ಕಾರ ನಡೆಯುವದಾದರೆ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಶಾಂತಿ ಸುವ್ಯವಸ್ಥೆ ನೆಮ್ಮದಿ ಉಳಿಯಲಾರವು. ಆದುದರಿಂದ ಪೂರ್ವ ಬಂಗಾಲ ಸರಕಾರದ ಮೇಲೆ ಈಗ ಬಹಳ ಹೊಣೆ ಬಿದ್ದಿದೆ. ಪಶ್ಚಿಮ ಬಂಗಾಲದಲ್ಲಿಯ ಮುಸಲ್ಮಾನೇತರ ಧುರೀಣರೂ ಪಶ್ಚಿಮ ಬಂಗಾಲ ಸರಕಾರವೂ ಈ ಸಮಯದಲ್ಲಿ ಪೂರ್ವ ಬಂಗಾಲದಲ್ಲಿಯ ಹಿಂದುಗಳಿಗೆ ಪೂರ್ಣ ಸಹಾಯ ಮಾಡಲು ಸಿದ್ಧರಾಗಬೇಕು. ಅನ್ಯಾಯ ಜುಲುಮೆಗಳನ್ನು ಅಹಿಂಸಾತ್ಮಕವಾಗಿ ಪ್ರತಿಭಟಿಸಬೇಕು. ಹೆಚ್ಚಿನ ಅನರ್ಥಗಳಿಗೆ ಅವಕಾಶವಾಗದಂತೆ ಘಟನೆಗಳು ನಡೆಯಲೆಂದು ಹಾರೈಸುತ್ತೇವೆ.

ಎಲ್ಲಕ್ಕೂ ಮಹತ್ವದ್ದು

ಘಟನಾ ಸಮಿತಿಯು ಮೊಟ್ಟ ಮೊದಲು ೯-೧೨-೪೬ ನೆ ದಿನ ಕೂಡಿತು. ಈ ವರೆಗೆ ಎರಡು ಅಧಿವೇಶನಗಳಾಗಿ ಹೋದವು. ಇದು ಮೂರನೆಯ ಅಧಿವೇಶನ. ಇನ್ನೂ ಒಂದು ಅಕ್ಟೋಬರ ತಿಂಗಳಲ್ಲಿ ಆಗುವದು. ಆದರೆ ಈ ಎಲ್ಲ ಅಧಿವೇಶನಗಳಲ್ಲಿ ಈ ಅಧಿವೇಶನವೆ ಎಲ್ಲಕ್ಕೂ ಹೆಚ್ಚು ಮಹತ್ವದ್ದೆನ್ನಲು ಅಡ್ಡಿಯಿಲ್ಲ. ಯಾಕಂದರೆ ಈ ಅಧಿವೇಶನ ನಡೆಯುತಿರುವಾಗಲೆ ೧೮-೭-೧೯೪೭ ನೇ ದಿನ ನಾಲ್ಕು ಗಂಟೆಗೆ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಕೊಡುವ ಕಟ್ಟಳೆಗೆ ಬ್ರಿಟಿಶ್ ಅರಸರ ಔಪಚಾರಿಕ ಸಮ್ಮತಿ ಸಿಕ್ಕಿತು. ಅಂದಿನಿಂದಲೆ ಹಿಂದುಸ್ತಾನವು ತತ್ವತಃ ಸ್ವತಂತ್ರವಾಯಿತು. ಇದೇ ಅಧಿವೇಶನದಲ್ಲಿ ಹಿಂದುಸ್ತಾನದ ಭಾವೀ ಘಟನೆಯ—ಪ್ರಾಂತಿಕ ಹಾಗೂ ಕೇಂದ್ರ—ಮೂಲ ತತ್ವಗಳ ಚರ್ಚೆ ನಡೆದು ಅವುಗಳ ನಿರ್ಣಯವಾಯಿತು. ಇನ್ನು ಆ ಮೂಲ ತತ್ವಗಳಿಗೆ ಕೇವಲ ಕಾಯದೆಯ ಸ್ವರೂಪ ಕೊಡುವದು, ಅವುಗಳಿಗೆ ಯೋಗ್ಯ ಭಾಷೆಯ ಉಡುಪು ತೊಡಿಸುವದು ಮಾತ್ರ ಉಳಿಯಿತು. ಮೂರನೆಯ ಹಾಗೂ ಕರ್ನಾಟಕದ ದೃಷ್ಟಿಯಿಂದ ಅತಿಶಯ ಮಹತ್ವದ ಮಾತು ಅದುದೆಂದರೆ ಭಾಷಾನುಗುಣ ಪ್ರಾಂತರಚನೆಯ ವಿಷಯದಲ್ಲಿ ಘಟನಾ ಸಮಿತಿಯು ಒಂದು ಪ್ರತ್ಯಕ್ಷ ಹೆಜ್ಜೆಯನ್ನಿಟ್ಟು ನಾಲ್ಕು ಪ್ರಾಂತಗಳ ರಚನೆಯ ವಿಷಯದಲ್ಲಿ ಹಿಂದುಸ್ತಾನದ ಸಾಮಂತ ಸರಕಾರಕ್ಕೆ ಒಂದು ಆದೇಶವನ್ನು ಕೊಟಿತು. ಗಾತ್ರ, ಉತ್ಪನ್ನ, ಮುಂತಾದ ಹಲವೊಂದು ಮಾತುಗಳ ಬಗ್ಗೆ ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರದವರು ತಮ್ಮ ಪಕ್ಷವನ್ನು ಮಂಡಿಸಿ ಇನ್ನು ಪ್ರತ್ಯೇಕ ಪ್ರಾಂತಗಳನ್ನು ಪಡೆಯಲು ಸರಳವಾದ ದಾರಿಯಾಯಿತು. ಈ ರೀತಿ ಈ ಅಧಿವೇಶನವೆ ಅತಿ ಮಹತ್ವದ್ದು.

ಕಾಂಗ್ರೆಸ್ ಸೇವಾದಲ

ಹೋದ ೨೨-೭-೪೭ ನೆ ದಿನ ದಿಲ್ಲಿಯಲ್ಲಿ ಕಾಂಗ್ರೆಸಸೇವಾದಲದ ಮುಖ್ಯಪ್ರಾಂತಿಕಕಾರ್ಯಕರ್ತರ ಒಂದು ಚಿಕ್ಕ ಶಿಬಿರವು ಪ್ರಾರಂಭವಾಯಿತು. ಅದನ್ನು ಕಾಂಗ್ರೆಸ್ಸಿನ ಅಧ್ಯಕ್ಷರೆ ತೆರೆದರು. ಕಾಂಗ್ರೆಸ್ಸಿನ ಸೇವಾದಲದ ಹೊಸ ಘಟನೆ, ಹೊಸ ರಚನೆ ನಡೆದ ಬಳಿಕ ಕೂಡಿದ ಮೊದಲನೆ ಅಖಿಲ ಭಾರತೀಯ ಶಿಬಿರವೆಂದರೆ ಇದೇಸರಿ. ಆ ದೃಷ್ಟಿಯಿಂದ ಇದಕ್ಕೆ ವಿಶೇಷ ಮಹತ್ವವಿದೆ. ಘಟನೆ ಮುಂತಾದವುಗಳು ಏನೇ ಇದ್ದರೂ ಸೇವಾದಲದ ಕಾರ್ಯಕ್ಕೆ ರಾಷ್ಟ್ರ ಸ್ವರೂಪವು ಬರತಕ್ಕದ್ದೆಂಬುದು ಈ ಶಿಬಿರದಲ್ಲಿ ನಡೆಯತಕ್ಕ ಕಾರ್ಯಕಲಾಪಗಳನ್ನೆ ಅವಲಂಬಿಸಿರುವದು. ಈ ನವ ಮನ್ವಂತರದಲ್ಲಿ, ಸ್ವತಂತ್ರ ಹಿಂದುಸ್ತಾನದಲ್ಲಿ ಕಾಂಗ್ರೆಸ್ ಸೇವಾದಲವು ಏನು ಕಾರ್ಯ ಮಾಡತಕ್ಕದ್ದು, ಯಾವ ರೀತಿ ಮಾಡತಕ್ಕದ್ದು, ಯಾವ ವಿಚಾರ ಪ್ರಣಾಲಿಯನ್ನು ಅನುಸರಿಸಿ ನಡೆಯತಕ್ಕದು, ಇತ್ಯಾದಿ ಸಂಗತಿಗಳ ನಿರ್ಣಯವು ಈ ಶಿಬಿರದಲ್ಲಿಯೆ ಆಗಿ ಆ ಪ್ರಕಾರ ಪ್ರಾಂತಿಕ ಕಾರ್ಯಕರ್ತರಿಗೆ ಆದೇಶವು ದೊರೆಯುವದು. ಸ್ವಾತಂತ್ರ್ಯದ ಹೋರಾಟವು ಇನ್ನು ಮುಗಿಯಿತು. ರಾಜಕೀಯ ದೃಷ್ಟಿಯಿಂದ ಸ್ವಾತಂತ್ರ್ಯವು ಪ್ರಾಪ್ತವಾಯಿತು. ಇನ್ನು ಸ್ವಾತಂತ್ರ್ಯ ರಕ್ಷಣೆಯ ಕಾರ್ಯವನ್ನು ಹಿಂದುಸ್ತಾನದ ಸೈನ್ಯವು ಮಾಡುವದು, ಎಂಬ ಮಾತು ನಿಜ. ಆದರೆ ಕೇವಲ ಸೈನ್ಯಗಳಿಂದಲೆ ಸ್ವಾತಂತ್ರ್ಯದ ರಕ್ಷಣೆಯಾಗುತಿರುವದಿಲ್ಲ. ಆಯಾ ದೇಶದ ನಾಗರಿಕರು ತಮ್ಮ ಸ್ವಾತಂತ್ರ್ಯದ ರಕ್ಷಣೆಯ ಹೊಣೆಯನ್ನು ಎಷ್ಟೋ ಮಟ್ಟಿಗೆ ಹೊರಬೇಕಾಗುವದು. ಆ ಬಗೆಯ ಹೊಣೆ ಹೊತ್ತ ನಾಗರಿಕರನ್ನು ಸಿದ್ಧಪಡಿಸುವದೆ ಸೇವಾದಲದ ಮುಖ್ಯ ಕಾರ್ಯವು. ರಾಷ್ಟ್ರಪತಿಗಳು ಹೇಳಿದಂತೆ ಕಾಂಗ್ರೆಸ್ ಸ್ವಯಂಸೇವಕರು ಹಳ್ಳಿಹಳ್ಳಿಗಳಿಗೆ ಹೋಗಿ ಸ್ವಯಂಸೇವಕರ ಅವಶ್ಯಕತೆಯನ್ನು ಜನತೆಗೆ ತಿಳಿಸಿ ಹೇಳಿ ಪ್ರತಿಯೊಂದು ಮನೆಯಲ್ಲಿ ಒಬ್ಬನಿಗಾದರೂ ಸ್ವಯಂಸೇವಕರ ಶಿಕ್ಷಣ ಕೊಟ್ಟು ತರಬೇತು ಮಾಡಬೇಕು. ಅದು ಅದರ ಕರ್ತವ್ಯ.

ಮಹತ್ವದ ಸುಧಾರಣೆ

ಮುಂಬಯಿ ಸರಕಾರದವರು ಕ್ರಿಮಿನಲ್ ಟ್ರಾಯಿಬ್ಸ ಕಾಯದೆ ವಿಚಾರಣೆ ಸಮಿತಿಯ ಸೂಚನೆಗಳನುಸಾರವಾಗಿ ಅದನ್ನು ರದ್ದುಪಡಿಸಲು ನಿರ್ಧರಿಸಿದ್ದಾರೆ ಈ ಕಾಯದೆಯ ಬದಲು ನಿರಂತರ ಗುನ್ಹೆಗಾರರ ಕಾಯದೆಯನ್ನು ಜಾರಿಯಲ್ಲಿ ತರಲಿರುವರು ಅನಂತರ ಈ ವರ್ಗದವರನ್ನು ಹಿಂದುಳಿದ ವರ್ಗದವರೆಂದು ಗಣಿಸಲಾಗುವದು. ಏನೂ ಶಿಕ್ಷೆಯಿಲ್ಲದಂಥ ಹಾಗು ಒಂದೇ ಶಿಕ್ಷೆಯಾದಂಥವರ ಮೇಲಿನ ಹಾಗು ಶಿಕ್ಷೆಯಾದವರ ನಡತೆ ಕಳೆದ ಎರಡು ವರುಷಗಳಿಂದ ಚೆನ್ನಾಗಿದ್ದರೆ ಅವರನ್ನು ನೊಂದಣಿ ನಿರ್ಬಂಧದಿಂದ ರದ್ದುಪಡಿಸಲಾಗುವದು. ಶಾಶ್ವತ ಅಪರಾಧಿಗಳನ್ನಷ್ಟೇ ಸೆಟ್ಲಮೆಂಟಗಳಲ್ಲಿಡಲಾಗುವದು. ಈ ಸೆಟ್ಲಮೆಂಟುಗಳಲ್ಲಿ ಕಳೆದ ೩ ವರ್ಷ ಚೆನ್ನಾಗಿ ನಡೆದುಕೊಂಡವರನ್ನು ಸೆಟ್ಲಮೆಂಟದಿಂದ ಮುಕ್ತಮಾಡಿ ವಸಾಹತಿಯಲ್ಲಿಡಲಾಗುವದು. ಅಲ್ಲಿ ಎರಡು ವರ್ಷ ಚೆನ್ನಾಗಿ ನಡೆದುಕೊಂಡಲ್ಲಿ ನೊಂದಣಿಯಿಂದ ಮುಕ್ತಮಾಡಲಾಗುವದು. ಎರಡು ಅಥವಾ ಹೆಚ್ಚು ಅದರೆ ೫ ಕ್ಕಿಂತ ಹೆಚ್ಚಿಲ್ಲದಷ್ಟು ಶಿಕ್ಷೆ ಹೊಂದಿದವನು ನಿರಂತರ ಗುನ್ಹೆಗಾರನೆಂದೂ ೫ ಕ್ಕಿಂತ ಹೆಚ್ಚು ಶಿಕ್ಷೆ ಹೊಂದಿದವನು ಶಾಶ್ವತ ಗುನ್ಹೆಗಾರನೆಂದೂ ಗಣಿಸಲಾಗುವದು. ಈ ಹೊಸ ಕಾಯದೆಯ ರೂಪರೇಷೆ ಇಂತು ಇದೆ. ಲೋಕಪ್ರಿಯ ಸರಕಾರದವರು ಈ ಮಹತ್ವದ ಸುಧಾರಣೆಯನ್ನು ಮಾಡಲಣಿಯಾಗಿದ್ದು ನಿಜವಾಗಿ ಪ್ರಶಂಸನೀಯವಾಗಿದೆ. ಕ್ರಿಮಿನಲ್ ಟ್ರಾಯಿಬ್ಸ ವರ್ಗದವರು ಇದರ ಲಾಭವನ್ನು ಪಡೆದು ತಮ್ಮ ಜೀವನ, ನೀತಿ ರೀತಿಗಳನ್ನು ಸುಧಾರಿಸಿಕೊಳ್ಳಬೇಕು. ಹಿಂದೆ ಯಾವದೇ ಕಾರಣದಿಂದ ಗುನ್ಹೇಗಾರ ಜಾತಿಗೆ ಅವರು ಸೇರಿದವರಾಗಿದ್ದರೂ ಸದ್ಯದ ಸ್ವತಂತ್ರ ಭಾರತದಲ್ಲಿ ಅವರು ತಮ್ಮ ವರ್ತನವನ್ನು ಸುಧಾರಿಸಿಕೊಂಡು ನಾಗರಿಕ ಹಕ್ಕುಬಾಧ್ಯತೆಗಳನ್ನೆಲ್ಲ ಅನುಭೋಗಿಸಬೇಕು. ಅವರು ಈ ಸುಧಾರಣೆಗಳ ದುರುಪಯೋಗ ಮಾಡಿಕೊಳ್ಳದಂತೆ ಜಾಗ್ರತರಾಗಿರಬೇಕಾದುದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ.

ಇಂಡೋನೇಶಿಯ

ಇಂಡೋನೇಶಿಯದಲ್ಲಿ ನಡೆದ ಭೀಕರ ಯುದ್ಧದ ಸಂಬಂಧದಲ್ಲಿ ಬೇರೆ ಕಡೆ ವಿವರವಾಗಿ ಚರ್ಚಿಸಿದ್ದಾಗಿದೆ ಡಚ್ಚರು ಅಲ್ಲಿ ನಡೆಸಿದ ಅಮಾನುಷ ಹತ್ಯಾಕಾಂಡವು, ಎಸೆದ ಬಾಂಬು ದಾಳಿಗಳು ಯಾವ ನಾಗರಿಕ ರಾಷ್ಟ್ರಗಳಿಗೂ ಸಲ್ಲವು. ಇದರಿಂದ ಜಗತ್ತಿನ ಶಾಂತಿಗೇ ಭಂಗ ಬಂದಿದೆಂದು ಧಾರಾಳವಾಗಿ ಹೇಳಬಹುದು. ಆತ್ಮರಕ್ಷಣೆಗಾಗಿ ಇಂಡೋನೇಶಿಯ ಪ್ರಜಾರಾಜ್ಯದವರು ನಡೆಸಿದ ಹೋರಾಟಕ್ಕೆ ಇಡೀ ಜಗತ್ತಿನ ಸಹಾನುಭೂತಿ ದೊರೆಯುತಿದೆ; ದೊರೆಯುವದು ಅವಶ್ಯ. ಡಚ್ಚರು ಇಂಡೋನೇಶಿಯದಲ್ಲಿ ನಡೆಸಿದ ಅತ್ಯಾಚಾರ, ಪ್ರಜಾಪ್ರಭುತ್ವ, ಸ್ವಯಂ ನಿರ್ಣಯ ತತ್ವ ಮತ್ತು ಶಾಂತಿಗೆ ವಿರೋಧಕವಾಗಿದೆಯಲ್ಲದೆ ಯುಕ್ತ ರಾಷ್ಟ್ರ ಸಂಘವು ಇಟ್ಟುಕೊಂಡ ಮೂಲಭೂತ ತತ್ವಗಳಿಗೂ ವಿರೋಧಕವಾಗಿದೆ. ಈ ಸಂದರ್ಭದಲ್ಲಿ ಯುಕ್ತ ರಾಷ್ಟ್ರಸಂಘದವರು ವಿಶೇಷತಃ ಅದರ ಪ್ರಬಲ ಸದಸ್ಯ ರಾಷ್ಟ್ರಗಳಾದ ಬ್ರಿಟನ್ ಅಮೇರಿಕೆಗಳು ಈ ಸಮಯದಲ್ಲಿ ಇಂಡೋನೇಶಿಯಕ್ಕೆ ನ್ಯಾಯ್ಯವನ್ನು ದಯಪಾಲಿಸಲು ಮುಂದೆ ಬರುವದು ಕರ್ತವ್ಯವಾಗಿದೆ. ಪ್ರಜಾರಾಜ್ಯದ ಹಕ್ಕುಬಾಧ್ಯತೆಗಳನ್ನು ಹತ್ತಿಕ್ಕಲು ಡಚ್ಚರು ನಡೆಸಿದ ಪುಂಡಾಟಿಕೆ ಅತ್ಯಂತ ಖಂಡನೀಯವಾಗಿದೆ. ಈ ಪ್ರಜಾರಾಜ್ಯದ ಪರವಾಗಿ ಹೊರಡಿಸಿದ ಪ್ರಕಟನೆಯಲ್ಲಿ ಡಚ್ಚರಿಗೆ ಶರಣು ಹೋಗುವದಿಲ್ಲವೆಂದೂ ಕೊನೆಯ ವರೆಗೆ ಹೋರಾಟ ಸಾಗಿಸುವದಾಗಿಯೂ ಸಾರಲಾಗಿದೆ. ಡಚ್ಚರಲ್ಲಿ ಅಧುನಿಕ ಶಸ್ತ್ರಾಸ್ತ್ರಗಳಿದ್ದುದರಿಂದ ಈ ಸಂಗ್ರಾಮದಲ್ಲಿ ಅವರಿಗೆ ಜಯ ಸಿಕ್ಕಬಹುದು. ಆದರೂ ಗತ್ತುಗಾರಿಕೆಯ ಯುದ್ಧವನ್ನು ನಡೆಯಿಸಿಯಾದರೂ ಉದ್ದಿಷ್ಟವನ್ನು ಸಾಧಿಸುವುದಾಗಿ ಸಾರಲಾಗಿದೆ. ಡಚ್ಚ ಸರಕಾರದವರು ಈ ಸಂಬಂಧದಲ್ಲಿ ಗಂಭೀರ ವಿಚಾರ ಮಾಡಿ ಸದ್ಯದ ಹತ್ಯಾಕಾಂಡವನ್ನು ಬಿಟ್ಟುಗೊಟ್ಟು ಪ್ರಜಾರಾಜ್ಯದೊಡನೆ ಒಡಂಬಡಿಕೆ ಮಾಡಿಕೊಂಡು ದೇಶದಲ್ಲಿ ಶಾಂತತೆಯನ್ನು ಉಂಟುಮಾಡಬೇಕು. ಆ ರೀತಿ ಮಾಡಹಚ್ಚುವದು ಮೇಲೆ ಹೇಳಿದಂತೆ ಬ್ರಿಟನ್ ಅಮೇರಿಕೆಗಳ ಕರ್ತವ್ಯವಾಗಿದೆಂದು ಬೇರೆ ಹೇಳಬೇಕಿಲ್ಲ.

ಜುಲೈ ೧೯ ರಿಂದ ಎರಡು ನಡುಗಾಲ ಸರಕಾರಗಳು

ಗಡಿನಾಡು ಪಾಕಿಸ್ತಾನ ಸೇರಿತು — ಘಟನಾ ಸಮಿತಿಯಲ್ಲಿ ಪ್ರಾಂತಿಕ ಘಟನೆಯ ಸ್ವೀಕಾರ—ಗವರ್ನರರಿಗೆ ವಿಶೇಷಾಧಿಕಾರ

ತಾ. ೧೫ ಮುಂಜಾನೆ ಹತ್ತು ಗಂಟೆಗೆ ಹಿಂದೀ ಸ್ವಾತಂತ್ರ್ಯ ಮಸೂದೆಗೆ ಬ್ರಿಟಿಶ ರಾಜಮುದ್ರೆ ಬಿದ್ದು ಅದು ಕಾಯದೆಯಾದಾಗ ಹಿಂದೀ—ಬ್ರಿಟಿಶ ಸಂಬಂಧ ಆಳು—ಅರಸ ಸಂಬಂಧದಿಂದ ಸಮಾನಿಕರ ಸಂಬಂಧಕ್ಕೆ ಮಾರ್ಪಟ್ಟಂತಾಯಿತು. ಅದರೊಡನೆ ಒಂದಾಗಿದ್ದ ಹಿಂದುಸ್ಥಾನ ಎರಡಾಗಿಯೂ ಮಾರ್ಪಟ್ಟಿತು. ಒಳಗೊಳಗೆ ಪರಸ್ಪರ ವಿರುದ್ಧ ದಿಕ್ಕುಗಳಲ್ಲಿ ಎಳೆಯುತ್ತಿದ್ದ ನಡುಗಾಲ ಸರಕಾರವೂ ಒಡೆದು ಎರಡಾಯಿತು. ತಾ. ೧೯ ಕ್ಕೆ ಹೊರಟ ವಾಯಿಸರಾಯರ ಪ್ರಕಟನೆಯನ್ವಯ "ಹಿಂದುಸ್ಥಾನ" ಸರಕಾರಕ್ಕೆ ಪಂ. ಜವಾಹರಲಾಲ, ಸರದಾರ ಪಟೇಲ, ಡಾ ರಾಜೇಂದ್ರ ಪ್ರಸಾದ, ಮೌ. ಅಬುಲ ಕಲಾಮ ಆಝಾದ, ಶ್ರೀ ರಾಜಗೋಪಾಲಾಚಾರಿ, ಡಾ. ಜಾನ ಮಥಾಯಿ, ಸರದಾರ ಬಲದೇವಸಿಂಗ, ಶ್ರೀ ಸಿ. ಎಚ್. ಭಾಭಾ, ಮತ್ತು ಜಗಜೀವನರಾಮ ಇವರನ್ನು ಮಂತ್ರಿಗಳಾಗಿಯೂ "ಪಾಕಿಸ್ತಾನ"ಕ್ಕೆ ಶ್ರೀ ಲಿಯಾಕತ ಅಲ್ಲಿಖಾನ, ಆಯ. ಆಯ. ಚುಂದ್ರಿಗಾರ, ಅಬ್ದುರ್ರಬ ನಿಶ್ತರ, ಗಜನಫರ ಅಲ್ಲಿಖಾನ, ಹಾಗು ಜೋಗೇಂದ್ರನಾಥ ಮಂಡಲ ಇವರನ್ನೂ ನೇಮಿಸಲಾಗಿದೆ. ಅರ್ಥಾತ್ ಅಖಂಡ ನಡುಗಾಲ ಸರಕಾರದ ಸದಸ್ಯರನ್ನೇ ಇದ್ದಕ್ಕಿದ್ದಂತೆ ಲೀಗ್ ನಿಯುಕ್ತ ಕಾಂಗ್ರೆಸ್ ನಿಯುಕ್ತವೆಂದು ಇಬ್ಭಾಗ ಮಾಡಿ ಅವರಿಗೆ ಭಾವೀ ಸರಕಾರದ್ವಯದ ಅಧಿಕಾರಗಳನ್ನು ಹಂಚಲಾಗಿದೆ. ಇವು ತಂತಮ್ಮ ಪ್ರದೇಶಗಳಿಗೆ ಸಂಬಂಧಿಸಿದ ವಿಷಯಗಳನ್ನು ಬೇರೆ ಬೇರೆಯಾಗಿಯೂ ಉಭಯ ಸಮಾನ ವಿಷಯಗಳನ್ನು ಜತೆಯಾಗಿಯೂ ನಿರ್ವಹಿಸುವವು. ಹಿಂದುಸ್ಥಾನದಲ್ಲುಳಿಯಲೊಪ್ಪಿದ ನೌಕರರು ಹಿಂದೀ ನಡುಗಾಲ ಸರಕಾರದ ಹಾಗು ಪಾಕಿಸ್ತಾನದಲ್ಲಿ ಕೆಲಸ ಮಾಡಲೊಪ್ಪಿದವರು ಪಾಕಿಸ್ತಾನ ನಡುಗಾಲ ಸರಕಾರದ ಕೈಕೆಳಗೆ ಕೆಲಸ ಮಾಡುವರು.

ಗಡಿನಾಡಿನ ನಿರ್ಣಯ

ಮೊನ್ನೆ ರವಿವಾರ (ತಾ. ೨೦) ನೆ ದಿನ ವಾಯಿಸರಾಯರು ಪ್ರಕಟಿಸಿದ ಗಡಿನಾಡಿನ ಮತಗಣನೆಯ ಪರಿಣಾಮದೊಡನೆ ಹಿಂದುಸ್ಥಾನ—ಪಾಕಿಸ್ತಾನಗಳೊಳಗಿನ ಪ್ರಾದೇಶಿಕ ವಿವಾದವೊಂದು ಹೆಸರಿಗೆ ಮಾತ್ರವಾದರೂ ಬಗೆಹರಿದಂತಾಯಿತು. ಗಡಿನಾಡು ಪಾಕಿಸ್ತಾನದಲ್ಲಿ ಸೇರಲು ನಿರ್ಣಯಿಸಿತು. ಮತ್ತು ಅದೇ ಮೇರೆಗೆ ವಾಯಿಸರಾಯರು ಒಂದು ಪ್ರಕಟನೆಯ ಮೂಲಕ ಗಡಿನಾಡಿನಿಂದ ಆರಿಸಲ್ಪಟ್ಟ ಹಿಂದೀ ಘಟನಾ ಸಮಿತಿಯ ನಾಲ್ವರೂ ಸದಸ್ಯರ ಸದಸ್ಯತ್ವ ಕೊನೆಗಂಡಿತೆಂದು ಸಾರಿದ್ದಾರೆ. (ಡಾ. ಆಝಾದರೂ ಗಫಾರಖಾನರೂ ಈ ಮೂಲಕ ಹಿಂದೀ ಘಟನಾ ಸಮಿತಿಯ ಸದಸ್ಯತ್ವವನ್ನು ಕಳೆದುಕೊಂಡರು) ಆದರೆ ಮತಗಣನೆಯ ಪರಿಣಾಮ ಗಡಿನಾಡಿನಲ್ಲಿ ಖಾನಬಂಧುಗಳ ಪ್ರಭಾವ ಕಡಿಮೆಯಾಗಿಲ್ಲವೆಂದೂ ಲೀಗು ಅಲ್ಲಿ ಬಲಿಷ್ಠವಿಲ್ಲವೆಂದೂ ತೋರಿಸಿ ಕೊಟ್ಟಿದೆ. ಮತಗಣನೆ ಹೇಳಿಕೇಳಿ ಏಕಪಕ್ಷೀಯ ಪಂದ್ಯಾಟವಾಗಿತ್ತು! ೫ ಲಕ್ಷ ೭೨ ಸಾವಿರ ಮತದಾರರಲ್ಲಿ ಕೇವಲ ೨ ಲಕ್ಷ ೮೯ ಸಾವಿರ ಜನರು ಪಾಕಿಸ್ತಾನಕ್ಕೆ ಮತ ಹಾಕಿದರು. ಅರ್ಥಾತ್ ನೂರಕ್ಕೆ ೫೦.೪೯ ಮತಗಳಷ್ಟೇ ಪಾಕಿಸ್ತಾನಕ್ಕೆ ಬಿದ್ದಂತಾಯಿತು. ಹಿಂದುಸ್ತಾನಕ್ಕೆ ೨೮೭೪ ಮತ ಮಾತ್ರ ಬಿದ್ದವು. ಉಳಿದ ಮತದಾರರು ಮತಗಳನ್ನೆ ಹಾಕಲಿಲ್ಲ. ಅಂದ ಬಳಿಕ ಖಾನಬಂಧುಗಳು ಬಹಿಷ್ಕಾರ ಪ್ರಚಾರ ಬಹುಮಟ್ಟಿಗೆ ಸಫಲವಾಯಿತು. ಈಗ ಗಡಿನಾಡಿನ ಪರಿಸ್ಥಿತಿ ಒಳ್ಳೆ ವಿರೋಧಾಭಾಸಮಯವಾಗಿದೆ. ಡಾ. ಖಾನಸಾಹೇಬರು ಹೊಸ ಚುನಾವಣೆಗಳಾದ ಹೊರತು ರಾಜೀನಾಮೆ ಕೊಡುವದಿಲ್ಲ. ಅಲ್ಲದೆ ಘಟನಾ ಸಮಿತಿಯ ಗಡಿನಾಡ ಪ್ರತಿನಿಧಿಗಳು ಪಾಕಿಸ್ತಾನ ಘಟನಾ ಸಮಿತಿಯನ್ನು ಬಹಿಷ್ಕರಿಸುವರು. ಹೊಸ ಸಾರ್ವತ್ರಿಕ ಚುನಾವಣೆ ಹೂಡುವದರಿಂದ ಅನೇಕ ತೊಡಕುಗಳುಂಟಾಗುವವು. ಜಿನ್ನಾ ಸಾಹೇಬರು ಖಾನ ಬಂಧುಗಳ ಸಹಕಾರ ದೊರಕಿಸಿಕೊಳ್ಳದಿದ್ದರೆ ಅವರ ಪರಿಸ್ಥಿತಿ ಇಕ್ಕಟ್ಟಿನದಾಗುವಲ್ಲಿ ಸಂದೇಹವಿಲ್ಲ.

ಪ್ರಾಂತ ವಿಭಜನೆ

ಪಂಜಾಬ ಮತ್ತು ಬಂಗಾಲ ವಿಭಜನೆಯ ಗಡಿ ನಿರ್ಣಯ ಸಮಿತಿಗಳ ಮುಂದೆ ಸಾಕ್ಷ್ಯಗಳು ನಡೆದಿವೆ. ಇವುಗಳ ನಿರ್ಣಯ ಹೊರಬೀಳಲು ಆಗಸ್ಟ ೧೫ಕ್ಕಿಂತಲೂ ತಡವಾಗಬಹುದೆಂದು ನಿರೀಕ್ಷಿಸಲಾಗಿತ್ತು. ಜುಲೈ ೩೧ ರ ವರೆಗೆ ಉಭಯಪಕ್ಷಗಳ ಮಂಡನೆಯೇ ನಡೆಯುವದು. ಆ ಮೇಲೆ ಸಮಿತಿಗಳ ಮುಂದೆ ಬಂದ ಅಸಂಖ್ಯ ದಾಖಲೆ—ವಾದಗಳನ್ನು ತೂಗಿ ನೋಡಿ ಅವು ನಿರ್ಣಯ ತೆಗೆದುಕೊಳ್ಳಬೇಕು. ಆದರೂ ವಾಯಿಸರಾಯರು ನಿರ್ಣಯ ಆಗಸ್ಟ ೧೫ ರೊಳಗೇ ಹೊರಬೀಳಬೇಕೆಂದು ಒತ್ತಾಯಪಡಿಸಿದ್ದಾರೆ. ಅಂತೆಯೆ ಪಂಜಾಬ ಸಮಿತಿ ಆಗಸ್ಟ ೧೦ ಕ್ಕೆ ನಿರ್ಣಯ ಕೊಡುವದು. ಬಂಗಾಲದ್ದೂ ೧೫ ರೊಳಗೆ ತಡೆದಿರದು. ಈ ಅವಸರದಲ್ಲಿ ನಿರ್ಣಯಗಳು ಸಂಪೂರ್ಣ ನ್ಯಾಯಯುಕ್ತವಾಗುವದು ಸಂಭವವಿಲ್ಲವೆಂಬ ಭಯವಿದ್ದರೂ ವಾಯಿಸರಾಯರ ಆತುರಕ್ಕೆ ಅರ್ಥವಿಲ್ಲದಿಲ್ಲ. ಎರಡೂ ಪ್ರಾಂತಗಳಲ್ಲಿ ವಿಸ್ತಾರ ಪ್ರದೇಶಗಳ ಮೇಲೆ ಎರಡೂ ಪಕ್ಷಗಳು ಹಕ್ಕು ಮುಂದಿಸಿವೆ. ಪಂಜಾಬದಲ್ಲಿ ಸೀಖರು ಹೆಚ್ಚು ಹೆಚ್ಚು ಉಗ್ರರಾಗುತ್ತಿದ್ದಾರೆ. ಪಾಕಿಸ್ತಾನದಲ್ಲಿ ತಾವೆಂದೂ ಪುದುವಾಳುವದಿಲ್ಲೆಂದೂ ಪಾಕಿಸ್ತಾನ ಘಟನಾ ಸಮಿತಿಯನ್ನು ತಾವು ಬಹಿಷ್ಕರಿಸುವೆವೆಂದೂ ಅವರು ಸಾರಿದ್ದಲ್ಲದೆ ನೂರಕ್ಕೆ ೮೫ ರಷ್ಟು ಸೀಖರು ಹಿಂದೀ ಒಕ್ಕೂಟದಲ್ಲಿ ಬರುವಂತೆ ಸೀಮಾ ರೇಷೆಯನ್ನೆಳೆಯಬೇಕೆಂದೂ ಉಳಿದ ೧೫ ರಷ್ಟು ಜನರನ್ನು ಜನಸಂಖ್ಯೆಯ ಸ್ಥಾನಾಂತರದಿಂದ ಒಕ್ಕೂಟದಲ್ಲಿ ಕರೆಸಿಕೊಳ್ಳಬೇಕೆಂದೂ ಅಕಾಲಿ ದಲದ ಬೇಡಿಕೆಯುಂಟು. ಇದನ್ನು ಸಾಧಿಸಲು ಸೀಖರು ಜೀವದ ಹಂಗುದೊರೆದು ಹೋರುವರೆಂದು ಜ್ಞಾನಿ ಕರ್ತಾರಸಿಂಗರು ಸಾರಿದ್ದಾರೆ. ಪಂಜಾಬಿ ಮುಸ್ಲಿಮರೂ ಅಷ್ಟೇ ಉಗ್ರರಾಗಿದ್ದಾರೆ. ತಮಗೆ ಸೇರತಕ್ಕ ಒಂದೇ ಒಂದು ಅಂಗುಲ ನೆಲವನ್ನೂ ತಾವು ಬಿಟ್ಟುಕೊಡಲಾರೆವೆಂದು ಅವರು ಅರ್ಭಟಿಸಿದ್ದಾರೆ. ಲಾಹೋರಿನಲ್ಲಿ ಹಿಂಸಾಚಾರ ಇನ್ನೂ ನಿಂತಿಲ್ಲ. ವಿಶೇಷ ವಿವಾದಕ್ಕೊಳಗಾದ ಗುರುಜನವಾಲಾ, ಲಾಹೋರ ಮತ್ತು ಅಮೃತಸರ ಜಿಲ್ಲೆಗಳಲ್ಲಿ ಹಿಂದೂ-ಮುಸ್ಲಿಂ-ಸೀಖ ಸಮ್ಮಿಶ್ರ ಸೈನ್ಯವನ್ನು ಇರಿಸಬೇಕಾಗಿ ಬಂದಿದೆ. ಇಂಥ ಗಂಡಾಂತರಸ್ಥಿತಿಯಲ್ಲಿ ಗಡಿ ಸಮಿತಿಯ ನಿರ್ಣಯ ಅಧಿಕಾರ ಹಸ್ತಾಂತರವಾದ ಬಳಿಕ ಹೊರಬಿದ್ದರೆ ಅದು ಪುನಃ ಹಿಂಸಾಚಾರಕ್ಕೂ ಸಂಭವತಃ ಪಾಕಿಸ್ತಾನ—ಹಿಂದುಸ್ತಾನಗಳ ನಡುವೆ ಹೋರಾಟಕ್ಕೂ ಕಾರಣವಾಗಬಹುದು. ಮೌಂಟಬ್ಯಾಟನ್ನರ ಆತುರದ ಕಾರಣವಿದೇ.

ಗವರ್ನರರ ಬದಲಾವಣೆ

ಆಗಸ್ಟ ೧೫ ರ ನಂತರ ಹಿಂದೀ ಪ್ರಾಂತಗಳ ಗವರ್ನರರಲ್ಲಿ ಬದಲಾವಣೆಯಾಗಲಿದೆಯೆಂದು ತಿಳಿಯುತ್ತದೆ. ಇದರಲ್ಲಿ ಮುಖ್ಯವಾಗಿ ಅನುಸರಿಸತಕ್ಕ ಧೋರಣೆ ಹೀಗಿರುವಂತಿದೆ: ಆಯ. ಸಿ. ಎಸ್. ಅಧಿಕಾರಿಗಳಾಗಿದ್ದು ಗವರ್ನರ ಪದಕ್ಕೇರಿಸಲ್ಪಟ್ಟ ಯುರೋಪಿಯನ್ ಗವರ್ನರರನ್ನು ಒಡನೆ ಮನೆಗೆ ಕಳಿಸಬೇಕು. ಉಳಿದವರು ಹಾಗೆಯೆ ಉಳಿಯತಕ್ಕದ್ದು. ಈ ಪ್ರಕಾರ ಮುಂಬಯಿ ಮದ್ರಾಸ ಪ್ರಾಂತಗಳ ಗವರ್ನರರಾದ ಸರ್ ಜಾನ್ ಕಾಲವಿಲ್ಲ ಮತ್ತು ಸರ್ ಅರ್ಚಿಬಾಲ್ಡ ನೈ ಅವರೂ ಆಸಾಮ ಮತ್ತು ಓಡಿಸಾ ಗವರ್ನರರಾದ ಸರ್ ಅಕಬರ ಹೈದರಿ ಹಾಗು ಸರ್ ಚಂದೂಲಾಲ ತ್ರಿವೇದಿಯವರೂ ಉಳಿಯುವರು. ಉಳಿದವರು ಮನೆಗೆ ಹೋಗುವರು. ಖಾಲಿಯಾಗುವ ಸ್ಥಳಗಳಿಗೆ ಸೂಚಿತವಾಗಿರುವ ಹೆಸರುಗಳಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿ, ಶ್ರೀ ಮಂಗಲದಾಸ ಪಕ್ವಾಸಾ ಹಾಗು ಡಾ. ಅಬುಲ ಕಲಾಮ ಆಝಾದರವು ಪ್ರಮುಖವಾಗಿವೆ. ಹೊಸ ಗವರ್ನರರೂ ಈಗಿರುವವರೂ ಹೊಸ ರಾಜ್ಯಘಟನೆ ಜಾರಿಯಲ್ಲಿ ಬರುವವರಿಗಷ್ಟೇ ಅಧಿಕಾರದಲ್ಲುಳಿಯುವರೆಂದು ಗಮನಿಸಬೇಕು. ಅನಂತರ ಪ್ರಾಂತಗಳಲ್ಲಿ ಜನನಿಯುಕ್ತ ಗವರ್ನರರೇ ಅಧಿಕಾರಕ್ಕೆ ಬರುವರು.

ಸಂಸ್ಥಾನಗಳ ಭವಿತವ್ಯ

ಘಟನಾ ಸಮಿತಿಯಲ್ಲಿ ಈಗ ಭಾಗ ವಹಿಸಿರುವ ಸಂಸ್ಥಾನಗಳೆಲ್ಲವೂ ಹಿಂದೀ ಒಕ್ಕೂಟದಲ್ಲಿ ಸೇರುವದು ನಿಶ್ಚಿತಪ್ರಾಯವಾಗಿದೆ. ಈಗ ಹೊರಗಿಳಿಯಲೆಳಸಿದ ತಿರ್ವಾಂಕೂರು, ಹೈದರಾಬಾದ, ಇಂದೂರ, ಭೋಪಾಳ, ಕಾಶ್ಮೀರ ಸಂಸ್ಥಾನಗಳ ಮೇಲೂ ಒಕ್ಕೂಟದಲ್ಲಿ ಸೇರಲು ಒತ್ತಾಯ ಹೇರಲಾಗುತ್ತಿದೆ. ಈ ಕಾರ್ಯದಲ್ಲಿ ವಾಯಿಸರಾಯ ಮೌಂಟಬ್ಯಾಟನ್ನರೇ ಬಹಳ ಆಸ್ಥೆ ವಹಿಸಿದ್ದಾರೆ. "ಒಕ್ಕೂಟದಿಂದ ಹೊರಗುಳಿದರೆ ನಿಮ್ಮ ಗೋರಿಯನ್ನು ನೀವೇ ಅಗೆದಂತೆ" ಎಂದು ಅವರು ಹೈದರಾಬಾದ ನಿಝಾಮರಿಗೆ ಹೇಳಿ ಕಳಿಸಿದ್ದಾರಂತೆ. ಈ ಸಂಸ್ಥಾನಗಳಗೂಡ ಅವರು ನಡೆಸಿದ ಮಾತುಕತೆಗಳ ಪರಿಣಾಮವಾಗಿ ಹೈದರಾಬಾದ, ತಿರ್ವಾಂಕೂರುಗಳು ಘಟನಾ ಸಮಿತಿಯಲ್ಲಿ ಸೇರದಿದ್ದರೂ ಪ್ರತ್ಯೇಕ ಒಪ್ಪಂದಗಳ ಮೂಲಕ ಹಿಂದೀ ಒಕ್ಕೂಟದಲ್ಲಿ ಸೇರಬಹುದೆಂದು ಪ್ರಬಲ ಆಶೆಯುಂಟಾಗಿದೆ. ಕಡಿಮೆಯೆಂದರೆ ಸಂರಕ್ಷಣೆ ವಿದೇಶ ಸಂಬಂಧ ಮತ್ತು ಸಂಪರ್ಕ ಸೌಕರ್ಯಗಳ ವಿಷಯಗಳಲ್ಲಾದರೂ ಅವು ಒಕ್ಕೂಟದಲ್ಲಿ ಸೇರಲೊಪ್ಪಬಹುದು.

ಹಿಂದೀ ಸಂರಕ್ಷಣೆ

ಆಗಸ್ಟ ೧೫ ರ ನಂತರ ಬ್ರಿಟಿಶ ಸೈನ್ಯ ಈ ದೇಶದಿಂದ ಹಿಂತೆಗೆಯಲ್ಪಟ್ಟರೂ ಇದರ ಸಂರಕ್ಷಣೆಯಲ್ಲಿ ಬ್ರಿಟಿಶರು ವಿಶೇಷ ಆಸ್ಥೆ ವಹಿಸುವದು ನಿಶ್ಚಯ. ಹಿಂದುಸ್ತಾನದ ಉತ್ತರ ಗಡಿಗೆ ರಶಿಯನ್ನರ ಸಾಮೀಪ್ಯವೇ ಮೊದಲಾದ ಹಲವು ಸಂಗತಿಗಳು ಅವರನ್ನು ಈ ದೇಶದ ಮೇಲೆ ಕಣ್ಣಿಟ್ಟಿರುವಂತೆ ಮಾಡದಿರದು. ಆದುದರಿಂದ ಈ ಉಪಖಂಡದ ಸಂರಕ್ಷಣ ವ್ಯವಸ್ಥೆಯ ವಿಷಯದಲ್ಲಿ ಹೊಸ ಒಪ್ಪಂದ ಮಾಡಿಕೊಳ್ಳಲು ಮೌಂಟಬ್ಯಾಟನ್ನರ ಸಲಹೆಗಾರರಾದ ಲಾರ್ಡ ಇಸ್ಮೆಯವರು ಮಾತುಕತೆ ಪ್ರಾರಂಭಿಸುವರೆಂದು ಹೇಳಲಾಗಿದೆ. ಪಾಕಿಸ್ತಾನ—ಹಿಂದುಸ್ತಾನಗಳ ನಡುವೆ ಸಂರಕ್ಷಣೆ, ಸಾರಿಗೆ, ಮತ್ತು ಹೊಸ ಗಡಿಗಳ ಸ್ಥೈರ್ಯ ರಕ್ಷಣೆಗಳ ವಿಷಯದಲ್ಲಿ ಒಪ್ಪಂದ ಮಾಡಿಸಲು ಯತ್ನಿಸುವರಂತೆ. ಅಲ್ಲದೆ ಗಡಿನಾಡು ಪ್ರಾಂತದ ಸಂರಕ್ಷಣೆಗಾಗಿ ತಮ್ಮ ಅಂಕೆಯಲ್ಲಿ ಗುರ್ಖಾ ಸೈನ್ಯವನ್ನಿರಿಸಲು ಅವರು ಆತುರರಾಗಿದ್ದಾರೆ. ಹಿಂದೀ ಸೈನ್ಯವನ್ನು ಅಲ್ಲಿರಿಸಲು ಜಿನ್ನಾರು ಒಪ್ಪಲಿಕ್ಕಿಲ್ಲಂತೆ. ಇದಲ್ಲದೆ ಹಿಂದೀ ಸಾಗರದ ರಕ್ಷಣೆಗಾಗಿ ಹಿಂದುಸ್ತಾನ—ಪಾಕಿಸ್ತಾನ-ಬ್ರಹ್ಮ-ಮಲಯಾ-ಅಸ್ಟ್ರೇಲಿಯಾ—ದಕ್ಷಿಣ ಅಫ್ರಿಕಾ—ಕೆನ್ಯಾಗಳ ಜತೆ ವ್ಯವಸ್ಥೆಯೂ ಬೇಕೆಂದು ಬ್ರಿಟಿಶರ ಅಭಿಪ್ರಾಯವಿದೆ. ಇಬ್ಭಾಗವಾದ ಜಗತ್ತಿನಲ್ಲಿ ಹಿಂದುಸ್ತಾನ ಪ್ರಬಲ ಸಶಸ್ತ್ರ ಬಲಗಳನ್ನು ಕಟ್ಟುವ ವರೆಗೆ ಅದು ಪರವರ ವರ್ಚಸ್ಸಿನಿಂದ ಪೂರ್ತಿ ಮುಕ್ತವಾಗುವದು ದುಸ್ಸಾಧ್ಯ.

ಘಟನಾ ಸಮಿತಿ

ಘಟನಾ ಸಮಿತಿಯ ಸಭೆಗಳಲ್ಲಿ ಈಗ ಅಪೂರ್ವ ಸಾಮರಸ್ಯ ಕಾಣಬರುತ್ತಿದೆ. ಮುಸ್ಲಿಂಲೀಗ್ ಸದಸ್ಯರು ಮನಃಪೂರ್ವಕ ಸಹಕರಿಸುತ್ತಿದ್ದಾರೆಂದು ಹೇಳಬಹುದು. ಈ ಅಧಿವೇಶನ ಜುಲೈ ೩೧ ರ ವರೆಗೆ ನಡೆದು ಮುಂದೆ ಬೀಳಬಹುದು. ಕಳೆದ ವರದಿಯ ನಂತರ ಪ್ರಾಂತಿಕ ಘಟನೆಯ ಚರ್ಚೆ ಮುಗಿದು ಗವರ್ನರನ ಅಧಿಕಾರವ್ಯಾಪ್ತಿಯನ್ನು ಕೂಡ ನಿರ್ಧರಿಸಲಾಯಿತು. ಪ್ರಾಂತಿಕ ಘಟನೆಯ ಸಂಬಂಧದಲ್ಲಿ (ಕಳೆದ ವರದಿಯ ನಂತರ) ಈ ಕೆಳಗಿನ ಮಹತ್ವದ ನಿರ್ಣಯಗಳಾದವು:

● ಪ್ರಾಂತಿಕ ಗವರ್ನರನ ಸಹಾಯಕ್ಕೆ ಮಂತ್ರಿಮಂಡಳವಿರಬೇಕು. ಅವನು ಅದನ್ನು ನೇಮಿಸಬೇಕು. ಮತ್ತು ಅವನ ಇಚ್ಛೆಯಿರುವಷ್ಟು ಕಾಲ ಅದು ಅಧಿಕಾರದಲ್ಲಿರಬೇಕು.

ಪ್ರಾಂತಿಕ ಮಂತ್ರಿಮಂಡಲದ ಆಯ್ಕೆಯನ್ನು ಶಾಸನಸಭೆಯೇ ಮಾಡಬೇಕು. ಮತ್ತು ಶಾಸನ ಸಭೆಯ ಅವಧಿಯಲ್ಲಿ ಅದನ್ನು ಕಿತ್ತು ಹಾಕುವಂತಿಲ್ಲ; ಮಂತ್ರಿಗಳನ್ನು ಪ್ರಮಾಣಬದ್ಧ ಮತದಾನದಿಂದ ಆರಿಸಬೇಕೆಂದು ಲೀಗಿನವರು ತಂದ ತಿದ್ದುಪಡಿಗಳು ನಿರಾಕರಿಸಲ್ಪಟ್ಟವು. ಕಿತ್ತುಹಾಕಲಾರದ ಮಂತ್ರಿಮಂಡಲಗಳಿದ್ದರೆ ಆಡಳಿತ ಸ್ಥಗಿತವಾಗುವದೆಂದೂ ಪ್ರಮಾಣಬದ್ಧ ಮತದಾನದಿಂದ ಮಂತ್ರಿಗಳನ್ನಾರಿಸಿದರೆ ಹಲವು ಪಕ್ಷದ ಮಂತ್ರಿಗಳು ಸೇರಿ ಆಡಳಿತದಲ್ಲಿ ಏಕಸೂತ್ರತೆಯುಳಿಯುವದಿಲ್ಲೆಂದೂ ಕಾಂಗ್ರೆಸ್ ಸದಸ್ಯರು ತಿದ್ದುಪಡಿಯನ್ನು ವಿರೋಧಿಸಿದರು.

● ಯಾವುದೇ ಪ್ರಾಂತ ಹಿಂದೀ ಒಕ್ಕೂಟ ಸರಕಾರದ ಅಪ್ಪಣೆ ಪಡೆದು ನೆರೆಹೊರೆಯ ಸಂಸ್ಥಾನಗಳ ಆಡಳಿತೆಯನ್ನು ಅವುಗಳೊಡನೆ ಒಪ್ಪಂದ ಮಾಡಿಕೊಂಡು ವಹಿಸಿಕೊಳ್ಳಬಹುದು. ಆದರೆ ಪ್ರಾಂತಿಕ ಸರಕಾರ ತನಗೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ತೆಗೆದುಕೊಳ್ಳಬಹುದು.

ಚಿಕ್ಕಪುಟ್ಟ ಸಂಸ್ಥಾನಗಳಿಗೆ ಆಡಳಿತೆಯನ್ನು ದಕ್ಷತೆಯಿಂದ ಸಾಗಿಸಲು ಅಸಾಧ್ಯವಾಗುವದರಿಂದ ಈ ಕಲಮನ್ನು ಸೇರಿಸಲಾಯಿತು.

● ಪ್ರಾಂತಗಳಲ್ಲಿ ಶಾಸನ ಸಭೆಗಳನ್ನು ಒಂದು ಲಕ್ಷ ಜನಸಂಖ್ಯೆಗೊಬ್ಬ ಸದಸ್ಯನಂತೆ ಇರುವ ಶಾಸನ ಸಭೆಯಿರಬೇಕು, ಪರಮಾವಧಿ ಸದಸ್ಯ ಸಂಖ್ಯೆ ೩೦೦ ಇರಬೇಕೆಂಬ ಶ್ರೀ ಮಹಮುದ ಸಾದುಲ್ಲಾರ ಮತ್ತು ಕನಿಷ್ಠ ಸದಸ್ಯ ಸಂಖ್ಯೆ ೬೦ ಇರಬೇಕೆಂಬ ಶ್ರೀ ಸಿಧ್ವಾರ ತಿದ್ದುಪಡಿ ಸ್ವೀಕೃತವಾದವು. ಆಯಾ ಪ್ರಾಂತದ ಘಟನಾಸಮಿತಿ ಸದಸ್ಯರು ಇಚ್ಛಿಸಿದರೆ ಮೇಲ್ಮನೆಗಳನ್ನೂ ರಚಿಸಿಕೊಳ್ಳಬಹುದು.

● ಪ್ರಾಂತದಲ್ಲಿ ಶಾಂತಿಭಂಗವಾಗುವ ಸಂದರ್ಭದಲ್ಲಿ ಗವರ್ನರನು ಸರ್ವಾಧಿಕಾರವನ್ನು (ಹೈಕೋರ್ಟಿನ ಅಧಿಕಾರ ಹೊರತು) ವಹಿಸಿ ಆಡಳಿತ ಸಾಗಿಸಬಹುದು. ಆದರೆ ಈ ಕ್ರಮ ತೆಗೆದುಕೊಳ್ಳುವ ಮೊದಲು ಅವನು ಒಕ್ಕೂಟದ ಅಧ್ಯಕ್ಷನಿಗೆ ತಿಳಿಸಬೇಕು. ಪುನಃ ಬೆಳೆಸಲ್ಪಡದಿದ್ದರೆ ಇಂಥ ಸರ್ವಾಧಿಕಾರಗ್ರಹಣದ ಅವಧಿ ಕೇವಲ ೨ ವಾರ ಇರತಕ್ಕದ್ದು.

● ಶಾಸನ ಸಭೆಯಲ್ಲಿ ಸ್ವೀಕೃತವಾದ ಯಾವುದೆ ಮಸೂದೆಗೆ ಅಂಕಿತವಿಕ್ಕುವ ಮೊದಲು ಗವರ್ನರನು ಪುನರ್ವಿಮರ್ಶೆಗಾಗಿ ಅಥವಾ ತಿದ್ದುಪಡಿಗಾಗಿ ತಿರುಗಿ ಶಾಸನ ಸಭೆಗೆ ಕಳಿಸುವ ಅಧಿಕಾರ ಪಡೆದಿದ್ದಾನೆ. ಆದರೆ ಎರಡನೆ ಬಾರಿ ಅದು ತಿದ್ದುಪಡಿಯೊಡನೆ ಅಥವಾ ಇಲ್ಲದೆ ಸ್ವೀಕೃತವಾದರೆ ಅದ ಅವನು ಅಂಕಿತವಿಕ್ಕಲೇಬೇಕು.

ಒಕ್ಕೂಟ ಘಟನೆಯ ಸಂಬಂಧದಲ್ಲಿ ಸೂಚಿತವಾದ ಮುಖ್ಯ ಕಲಮುಗಳು ಇಂತಿವೆ:

● ಒಕ್ಕೂಟದ ಅಧ್ಯಕ್ಷನು ಕೇಂದ್ರ ಶಾಸನ ಸಭೆ, ಕೇಂದ್ರ ಮೇಲ್ಮನೆ, ಪ್ರಾಂತಿಕ ಶಾಸನಸಭೆಗಳ ಸದಸ್ಯರಿಂದ ಆರಿಸಲ್ಪಡಬೇಕು (ಈ ಕಲಮಿನ ಚರ್ಚೆ ಮುಗಿದಿಲ್ಲ).

● ಒಕ್ಕೂಟದಲ್ಲಿ ಅಧ್ಯಕ್ಷ, ಮೇಲ್ಮನೆ ಮತ್ತು ಪ್ರಜಾ ಸಭೆಗಳಿರತಕ್ಕದ್ದು.

● ಅಧ್ಯಕ್ಷನ ಅಧಿಕಾರಾವಧಿ ೫ ವರ್ಷ ಇರತಕ್ಕದ್ದು.

● ಪ್ರಜಾಸಭೆಯಲ್ಲಿ ಅಧಿಕಾರಾವಧಿ ೪ ವರ್ಷ, ಅದಕ್ಕೆ ಎಲ್ಲ ಘಟಕಗಗಳಿಂದ ಪ್ರತಿ ೧೦ ಲಕ್ಷಕ್ಕೊಬ್ಬನಿಗೆ ಹೆಚ್ಚಿಲ್ಲದಂತೆಯೂ ೭೫ ಲಕ್ಷಕ್ಕೊಬ್ಬನಿಗೆ ಕಡಿಮೆಯಿಲ್ಲದಂತೆ ಇಯ್ಕೆಯಾಗುವದು.

● ಮೇಲ್ಮನೆಯಲ್ಲಿ ಅಧ್ಯಕ್ಷರು, ವಿಶ್ವವಿದ್ಯಾಲಯಗಳ ಮತ್ತು ವೈಜ್ಞಾನಿಕ ಸಂಸ್ಥೆಗಳ ೧೦ ಕ್ಕೆ ಮೀರದಷ್ಟು ಮತ್ತು ಘಟಕಗಳ ಪ್ರತಿನಿಧಿಗಳಿರುವರು.

ರಾಷ್ಟ್ರಧ್ವಜ

ಘಟನಾ ಸಮಿತಿಯ ಎಲ್ಲ ಪಕ್ಷಗಳ ಸದಸ್ಯರು ಒಮ್ಮತದಿಂದ ಹಿಂದುಸ್ತಾನದ ರಾಷ್ಟ್ರಧ್ವಜವನ್ನು ಸ್ವೀಕರಿಸಿದರು. ಈಗಿನ ಕಾಂಗ್ರೆಸ್ ಧ್ವಜದಲ್ಲಿಯೇ (ಕೇಸರಿ, ಬಿಳಿ, ಹಸುರು) ಮಧ್ಯದಲ್ಲಿರುವ ಚರಕದ ಬಳಿ ಅಶೋಕನ ಚಕ್ರವನ್ನು ಹಾಕಲಾಗಿದೆ. ಈ ಧ್ವಜಕ್ಕೆ ವಿಧೇಯರಾಗಿರುವದಾಗಿ ಲೀಗ್ ಸದಸ್ಯರು ಸಹಿತ ಪಣ ತೊಟ್ಟಿದ್ದಾರೆ.

ರಾಷ್ಟ್ರಭಾಷೆ

ಹಿಂದುಸ್ತಾನ ಘಟನಾ ಸಮಿತಿಯ ಕಾಂಗ್ರೆಸ್ ಪಕ್ಷದ ಸದಸ್ಯರು ನಿನ್ನಿನ ದಿವಸ ದೇವನಾಗರಿ ಲಿಪಿಯಲ್ಲಿ ಬರೆದ ಹಿಂದೀ ಭಾಷೆಯೇ ಹಿಂದುಸ್ತಾನದ ರಾಷ್ಟ್ರಭಾಷೆಯಾಗಬೇಕೆಂದು ನಿರ್ಧರಿಸಿ, ಇದರಂತೆ ಪ್ರಾಂತಿಕ ಮತ್ತು ಒಕ್ಕೂಟ ಘಟನೆಗಳಲ್ಲಿ ನಿರ್ದೇಶ ಮಾಡಬೇಕೆಂಬ ಗೊತ್ತುವಳಿಯನ್ನು ಭಾಷೆಗೆ ಸಂಬಂಧಪಟ್ಟ ಕಲಮು ಚರ್ಚೆಗೆ ಬಂದಾಗ ಮಂಡಿಸಬೇಕೆಂದು ಗೊತ್ತಾಗಿದೆ. ಈ ವಿಷಯದ ಮೇಲೆ ಗೊತ್ತುವಳಿಯನ್ನು ಬರೆಯಲು ಒಂದು ಸಮಿತಿಯನ್ನು ರಚಿಸಲಾಗಿದೆ.

ಉ. ಕ. ಜಿಲ್ಲೆಯಲ್ಲಿ ಮಳೆ ವಿಕ್ಷಿಪ್ತರೀತಿಯಿಂದ ಬೀಳಹತ್ತಿದೆ. ಮೊದಲು ಹಾಕಿದ ಬೀಜಕ್ಕೆ ಮಳೆ ಬೀಳದ್ದರಿಂದ ವ್ಯರ್ಥವಾಯಿತು. ಈಗ ಮತ್ತೆ ಬೀಜ ಹಾಕಬೇಕಾದ ಪ್ರಸಂಗ ಬಂದಿದ್ದು ರೈತರಲ್ಲಿ ಬೀಜಗಳಿಲ್ಲದ ಕೂಗು ಕೇಳಬರುತ್ತಿದೆ.

ಅಂತರರಾಷ್ಟ್ರೀಯ

ಬ್ರಹ್ಮದೇಶದಲ್ಲಿ ಮಂತ್ರಿಹತ್ಯೆ

ಸ್ವಾತಂತ್ರ್ಯದ ಹೊಸ್ತಿಲಲ್ಲಿ ನಿಂತಿರುವ ಬ್ರಹ್ಮದೇಶದ ಮೇಲೆ ಕಳೆದವಾರ ಇತಿಹಾಸದಲ್ಲೆ ಅಭೂತಪೂರ್ವವೆನಿಸಬಹುದಾದಂಥ ವಿಪತ್ತು ಬಂದೊದಗಿತು. ರಂಗೂನಿನ ಸರಕಾರಿ ಭವನದಲ್ಲಿ ಬ್ರಹ್ಮೀ ಮಂತ್ರಿಮಂಡಲದ ಸಭೆ ನಡೆದಿತ್ತು. ಒಮ್ಮಿಂದೊಮ್ಮೆ ಸೈನಿಕ ವೇಷಧಾರಿಗಳಾದ ಕೆಲ ಬ್ರಹ್ಮೀಯರು ಸಭೆ ನಡೆದ ಕೋಣೆಯೊಳಗೆ ನುಗ್ಗಿದರು. ಅವರ ಕೈಯಲ್ಲಿ ಸ್ಟೆನ್‌ಗನ್ ಮೊದಲಾದ ಅತ್ಯಂತ ಪ್ರಾಣಘಾತಕ ಆಯುಧಗಳಿದ್ದವು. ಬಂದವರೇ ಅವರು ಗುಂಡು ಹಾರಿಸತೊಡಗಿದರು. ಐವರು ಮಂತ್ರಿಗಳನ್ನೊಡಗೊಂಡು ಮಂತ್ರಿಮಂಡಲದ ಉಪಾಧ್ಯಕ್ಷರೂ ಬ್ರಹ್ಮೀ ರಾಷ್ಟ್ರೀಯತೆಯ ಅದ್ವಿತೀಯ ನಾಯಕರೂ ಆದ ಅಂಗಸಾನರು ತಕ್ಷಣ ಕೊಲೆ ಮಾಡಲ್ಪಟ್ಟರು.

● ಜನರಲ್ ಅಂಗಸಾನರು ಕೇವಲ ೩೨ ವಯಸ್ಸಿನ ಯುವಕರು. ಅವರು ಯುದ್ಧಕಾಲದಲ್ಲಿ ತಮ್ಮ ರಾಷ್ಟ್ರದ ಮುಂದಾಳ್ತನ ವಹಿಸಿ ಮೊದಲು ಜಪಾನರೊಡನೆ ಸೇರಿಕೊಂಡು ಬ್ರಿಟಿಶರ ವಿರುದ್ಧ ಹೋರಾಡಿದರು. ಮುಂದೆ ಜಪಾನರ ನಿಜ ಸ್ವರೂಪ ನೋಡಿ ಕಣ್ತೆರೆದು ಕಳೆದುದರಿಂದ ಅವರು ಫ್ಯಾಸಿಸ್ಟ್ ವಿರೋಧಿ ಸಂಘವನ್ನು ಸ್ಥಾಪಿಸಿ ಕೂಟ ಯೋಧರನ್ನು ಸಂಘಟಿಸಿ ಬ್ರಿಟಿಶರ ಪರವಾಗಿ ಜಪಾನರ ವಿರುದ್ಧ ಹೋರಾಡಿದರು. ಬ್ರಹ್ಮದೇಶದ ವಿಮೋಚನೆಯಾದ ಮೇಲೆ ಅವರು ರಾಷ್ಟ್ರದ ಅದ್ವಿತೀಯ ನಾಯಕರಾಗಿದ್ದರು. ಬ್ರಹ್ಮದೇಶದಲ್ಲಿ ನಡುಗಾಲ ಸರಕಾರ ಸ್ಥಾಪಿತವಾದಾಗ ಜವಾಹರಲಾಲರಂತೆ ಅವರು ಗವರ್ನರರ ಕಾರ್ಯಕಾರಿ ಮಂಡಲದ ಉಪಾಧ್ಯಕ್ಷರಾದರು. ಅವರ ಪ್ರಯತ್ನದಿಂದಲೇ ಬ್ರಹ್ಮದೇಶಕ್ಕೊಂದು ಘಟನಾ ಸಮಿತಿ ದೊರೆತು ಅದು ಸ್ವತಂತ್ರ ಬ್ರಹ್ಮದೇಶದ ಘಟನೆಯನ್ನು ಸಿದ್ಧಗೊಳಿಸುವದರಲ್ಲಿ ಮಗ್ನವಾಗಿತ್ತು. ನಾಳೆ ಅಕ್ಟೋಬರದಲ್ಲಿ ಬ್ರಹ್ಮೀಯರ ಕೈಗೆ ಸಂಪೂರ್ಣ ಅಧಿಕಾರವನ್ನು ವರ್ಗಾಯಿಸುವ ಮಸೂದೆಯನ್ನು ಬ್ರಿಟಿಶ ಮಂತ್ರಿಮಂಡಲ ಪಾರ್ಲಮೆಂಟಿನಲ್ಲಿ ತರುವದಿತ್ತೆಂದು ಸುದ್ದಿಯಿತ್ತು. ಈ ಸಂಧಿಯಲ್ಲಿ ಈ ಕಗ್ಗೊಲೆ ನಡೆದುದು ಬ್ರಹ್ಮದೇಶದ ದುರ್ದೈವವೇ ಸರಿ.

ಈ ಕೊಲೆಯ ನಂತರ ರಭಸದಿಂದ ಸ್ಥಿತ್ಯಂತರಗಳಾಗುತಿವೆ:

● ಜನರಲ್ ಅಂಗ್‌ಸಾನರ ಕೊಲೆಯಾದ ನಂತರ ಘಟನಾ ಸಮಿತಿಯ ಅಧ್ಯಕ್ಷರಾದ ಥಾಕಿನ್ ನು ಅವರನ್ನು ಹೊಸ ಕಾರ್ಯಕಾರಿ ಮಂಡಲವನ್ನು ರಚಿಸುವಂತೆ ಗವರ್ನರರು ಕೇಳಿಕೊಂಡಿದ್ದಾರೆ.

● ರಂಗೂನಿನಲ್ಲಿ ಈ ಕೊಲೆಯ ಶೋಧಕ್ಕಾಗಿ ಪ್ರಚಂಡ ಸತ್ರವೊಂದು ಪ್ರಾರಂಭವಾಗಿದೆ. ಇದು ರಾಜಕೀಯ ಹತ್ಯಾಕಾಂಡವೆಂಬಲ್ಲಿ ಸಂದೇಹವೇ ಇಲ್ಲ. ನೂರುಗಟ್ಟಲೆ ಸಂಶಯಾಸ್ಪದರನ್ನು ಬಂಧಿಸಲಾಗಿದೆ.

● ಬಂಧಿಸಲ್ಪಟವರಲ್ಲಿ ಪ್ರಮುಖರೆಂದರೆ ಯು. ಸಾ. ಮತ್ತು ಥಾಕಿನ್-ಬಾ-ಸೀನರು ಪ್ರಮುಖರು. ಯುಸಾ ಅವರು ಯುದ್ಧಪೂರ್ವದಲ್ಲಿ ಬ್ರಹ್ಮೀ ಮಂತ್ರಿಗಳಾಗಿದ್ದು ಮಾತುಕತೆ ನಡೆಸಲು ಇಂಗ್ಲಂಡಿಗೆ ಹೋಗಿ ಮರಳುವಾಗ ಜಪಾನಿ ಪಕ್ಷಪಾತಿಗಳೆಂಬ ಸಂಶಯದಿಂದ ಬಂಧಿಸಲ್ಪಟ್ಟು ಯುದ್ಧ ಮುಗಿಯುವ ವರೆಗೂ ಅಜ್ಞಾತ ಸ್ಥಳದಲ್ಲಿ ಸೆರೆಯಾಗಿದ್ದವರು ಅವರು ಮಯೋಚಿತ ಪಕ್ಷದವರು. ಅವರ ಮನೆಯಲ್ಲಿ ಸ್ಟೆನ್ ಗನ್ ಮೊದಲಾದ ಆಯುಧಗಳು ದೊರಕಿದವಂತೆ. ಯು. ಸಾ. ಅವರೂ ಥಾಕಿನ್ ಬಾ ಸೀನರೂ ಲಂಡನ್ನಿನಲ್ಲಿ ಈ ವರ್ಷದ ಆರಂಭದಲ್ಲಿ ನಡೆದ ಸಂಧಾನದಲ್ಲಿ ಭಾಗವಹಿಸಿದ್ದರು. ಬ್ರಿಟಿಶ ಸರಕಾರದವರು ಸೂಚಿಸಿದ ಕರಾರುಗಳನ್ನು ಒಪ್ಪದೆ ಅವರು ಅಂಗ್‌ಸಾನರ ಮಂತ್ರಿಮಂಡಲದಿಂದ ಹೊರಬಿದ್ದು ಹೋಗಿ ಅವರ ವಿರುದ್ಧ ಚಳವಳಿಯೆಬ್ಬಿಸಿದ್ದರು. ಇವರಲ್ಲದೆ ಬೇರೆ ಅನೇಕ ಜಪಾನಿ ಪಕ್ಷಪಾತಿಗಳನ್ನೂ ಬಂಧಿಸಲಾಗಿದೆ.

● ಮೊದಲೇ ವ್ಯವಸ್ಥಿತಗೊಳಿಸಿದಂತೆಯೋ ಎಂಬಂತೆ ಈ ಕೊಲೆಯ ಬೆನ್ನಿಗೇ ಉತ್ತರ ಬ್ರಹ್ಮದೇಶದಲ್ಲಿ ದಂಗೆಗಳು ಪ್ರಾರಂಭವಾಗಿವೆ. ಪೋಲೀಸರೂ ಅಧಿಕಾರಿಗಳೂ ದಂಗೆಗಾರರನ್ನು ಕೂಡಿಕೊಂಡಿದ್ದಾರಂತೆ.

● ಕೆಲವರು ಈ ಕೊಲೆಗೆ ಈಚೆಗೆ ಅಂಗ್‌ಸಾನರ ಫ್ಯಾಸಿಸ್ಟ್ ವಿರೋಧಿ ಸಂಘದಿಂದ ಹೊರತಳ್ಳಲ್ಪಟ್ಟಿದ್ದ ಕಮ್ಯುನಿಸ್ಟರೇ ಕಾರಣರೆಂದು ಹೇಳುತ್ತಾರೆ. ಆದರೆ ಕಮ್ಯುನಿಸ್ಟ್ ಪ್ರಮುಖ ಥಾಕಿನ್‌ಟಾನ್ ಟನ್ನರು ಅಂಗ್‌ಸಾನರ ಬೀಗರೆಂಬದನ್ನೂ ಈಚೆಗೆ ತಿರುಗಿ ಅಂಗ್‌ಸಾನ-ಕಮ್ಯುನಿಸ್ಟರ ನಡುವೆ ಒಪ್ಪಂದವಾಗುವಂತಾಗಿತ್ತೆಂಬದನ್ನೂ ಮರೆಯಕೂಡದು.

● ಬ್ರಿಟಿಶರ ಕೈಯೂ ಇದರಲ್ಲಿದೆಯೆಂದು ಕಮ್ಯುನಿಸ್ಟರ ಆರೋಪ. ಆದರೆ ಈ ಕೊಲೆಯ ಪರಿಣಾಮವಾಗಿ ಘಟನಾ ಸಮಿತಿಯವರು ಸಿದ್ಧಗೊಳಿಸಿದ ಘಟನೆಯನ್ನು ಜಾರಿಗೆ ತರುವ ತಮ್ಮ ಧೋರಣ ಬದಲಾಗಿಲ್ಲವೆಂದು ಬ್ರಿಟಿಶ ಸರಕಾರ ಸಾರಿದೆ.

● ಪಂ. ಜವಾಹರಲಾಲ ಜಿನ್ನಾಸಾಹೇಬ ಮೊದಲಾದವರನ್ನೊಳಗೊಂಡು ಅನೇಕ ಹಿಂದೀಯರೂ ಇತರ ರಾಷ್ಟ್ರೀಯರೂ ಈ ದುರ್ಘಟನೆಗಾಗಿ ದುಃಖವನ್ನು ವ್ಯಕ್ತಗೊಳಿಸಿದ್ದಾರೆ. ೧೭ ಜನ ಬ್ರಹ್ಮೀ ಕೂಲಿಕಾರ ಮುಂದಾಳುಗಳು ಸರಕಾರಕ್ಕೆ ತಮ್ಮ ನೆತ್ತರಿಂದ ಬರೆದ ಪತ್ರ ಕಳಿಸಿ ಕೊಲೆಗಡಕರ ಸಂಹಾರವಾಗುವ ವರೆಗೆ ತಾವು ವಿಶ್ರಮಿಸುವದಿಲ್ಲೆಂದು ಶಪಥ ತೊಟ್ಟಿದ್ದಾರೆ.

ಇಂಡೋನೇಶಿಯಾದಲ್ಲಿ ಯುದ್ಧ

ತಾ. ೨೧ ಸೋಮವಾರ ನಸುಕಿನಲ್ಲಿ ಇಂಡೋನೇಶಿಯಾದ ಮೇಲೆ ಡಚ್ಚರು ಯುದ್ಧವನ್ನು ಪ್ರಾರಂಭಿಸಿದರು. ಅವರ ವಿಮಾನಗಳು ಅಲ್ಲಲ್ಲಿ ದಾಳಿ ನಡೆಸಿದವು. ಅವರ ಸೈನ್ಯ ಜಾವಾದ ಪೂರ್ವ ಕರಾವಳಿಯಲ್ಲಿ ಇಳಿದವು. ಜೋಗಜಕಾರ್ತಾ, ಬೋಡೆಯೋಂಗ್ ಮೊದಲಾದ ಪ್ರಜಾರಾಜ್ಯ ವಿಮಾನ ಠಾಣೆಗಳೆಲ್ಲ ದಾಳಿಗೆ ಗುರಿಯಾದವು.

● ತಿಂಗಳುಗಟ್ಟಲೆ ನಡೆದ ಸಂಧಾನ ಕೊನೆಗೆ ಚಿಲ್ಲರೆ ವಿಷಯದ ಮೇಲೆ ವಿಫಲವಾದುದರ ಫಲವಾಗಿ ಡಚ್ಚರ ಈ ದಾಳಿ ಪ್ರಾರಂಭವಾಗಿದೆ. ವಿದೇಶ ಸಂಬಂಧ ಮೊದಲಾದ ಹಲವಾರು ಮಹತ್ವದ ವಿಷಯಗಳಲ್ಲಿ ಇಂಡೋನೇಶಿಯನ್ನರು ಡಚ್ಚರ ಬೇಡಿಕೆಗಳಿಗೆ ತಲೆವಾಗಿದರು. ಇಂಡೋನೇಶಿಯಾದಲ್ಲಿ ಹಲವು ಬೇರೆ ಬೇರೆ ರಾಜ್ಯಗಳನ್ನು ಸ್ಥಾಪಿಸುವದಕ್ಕೂ ಒಪ್ಪಿಗೆ ಕೊಟ್ಟರು. ಆದರೆ ಪ್ರಜಾರಾಜ್ಯಕ್ಕೆ ಸೇರಿದ ಆಳಿದುಳಿದ ಭಾಗದಲ್ಲಿ ಅಂತರಿಕ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವದಕ್ಕೂ ಡಚ್—ಇಂಡೋನೇಶಿಯನ್ ಜತೆ ಪೋಲೀಸಪಡೆಯಾಗಬೇಕು, ಅದರಲ್ಲಿಯೂ ಇಂಡೋನೇಶಿಯನ್ನರಿಗೆ ಪೂರ್ತಿ ಸ್ವಾತಂತ್ರ್ಯವಿರತಕ್ಕದ್ದಲ್ಲವೆಂಬ ಅಗ್ರಹವನ್ನು ಡಚ್ಚರು ತೊಟ್ಟದ್ದರಿಂದ ಮುಖ್ಯ ಮಂತ್ರಿ ಶರೀಫುದ್ದೀನರು ಅದನ್ನು ನಿರಾಕರಿಸಿದರು.

● ಪೂರ್ವ ಜಾವಾದ ಅತಿ ಫಲವತ್ತಾದ ಮತ್ತು ಜವಳಿ ಮತ್ತು ಸಕ್ಕರೆ ಕಾರಖಾನೆಗಳುಳ್ಳ ಪ್ರದೇಶಗಳು ಡಚ್ಚರ ಮುಖ್ಯ ಗುರಿಯಾಗಿರುವಂತೆ ಕಾಣಿಸುತ್ತದೆ. ಅಲ್ಲಿ ಘನಘೋರ ಕದನ ನಡೆಯುವಂತೆ ಕಾಣುತ್ತದೆ. ಈಗಾಗಲೆ ಡಚ್ಚರು ಅನೇಕ ಮೈಲು ಮುನ್ನುಗ್ಗಿರುವರಂತೆ ಆದರೆ ಡಚ್ಚರ ಈ ಅವಿವೇಕಿ ದಾಳಿಯನ್ನೆದುರಿಸಲು ಪ್ರಜಾರಾಜ್ಯದ ಮುಖ್ಯ ಸೇನಾಪತಿ ಜ. ಸಹಧರ್ಮನರು ನಿಯುಕ್ತರಾಗಿದ್ದಾರೆ.

● ಡಚ್ಚರು ದಾಳಿಯನ್ನು ಪ್ರಾರಂಭಿಸುವ ಮೊದಲೇ ಬಟೇವಿಯಾದಲ್ಲಿದ್ದ ಇಂಡೋನೇಶಿಯನ್ ಪ್ರಜಾರಾಜ್ಯ ಸರಕಾರದ ಕಟ್ಟಡಗಳನ್ನು ವಶಪಡಿಸಿಕೊಂಡಿದ್ದಲ್ಲದೆ ಡಚ್ಚರಿಗೆ ಪತ್ರವೊಪ್ಪಿಸಲು ಬಂದಿದ್ದ ಪ್ರಜಾರಾಜ್ಯದ ಉಪಪ್ರಧಾನ ಮಂತ್ರಿ ಡಾ. ಗನಿಯವರನ್ನೂ ವಿದೇಶ ಉಪಮಂತ್ರಿ ಡಾ. ಮಹಮದ ಶಾಂಜೀಲರನ್ನೂ ಬಂಧಿಸಿದ್ದಾರೆ.

ಡಚ್ಚರು ಈ ಬಗೆಯಾಗಿ ಕ್ರಮ ತೆಗೆದುಕೊಂಡದ್ದಕ್ಕೆ ಬ್ರಿಟಿಶ ವಿದೇಶಮಂತ್ರಿ ಬೆವಿನ್ನರು ವಿಷಾದ ವ್ಯಕ್ತಗೊಳಿಸಿ ಉಭಯಪಕ್ಷಗಳನಡುವೆ ಮಧ್ಯಸ್ಥಿಕೆ ನಡೆಸಲು ಬ್ರಿಟಿಶ ಸರಕಾರದವರು ಯಾವಾಗಲೂ ಸಿದ್ಧರಿದ್ದಾರೆಂದು ಸಾರಿದ್ದಾರೆ. ಈ ವಿಷಯದಲ್ಲಿ ಅಮೇರಿಕೆಯ ಬೆಂಬಲವೂ ಬ್ರಿಟನಿಗಿದೆ.

● ಇಂಡೋನೇಶಿಯನ್ ಪ್ರಜಾರಾಜ್ಯದ ಹಿಂದಿನ ಮುಖ್ಯಮಂತ್ರಿಗಳೂ ಅಧ್ಯಕ್ಷ ಸೋಕರ್ನೊ ಅವರ ಸಲಹೆಗಾರರೂ ಆದ ಡಾ. ಶಹರೀರರು ಹಿಂದುಸ್ಥಾನಕ್ಕೆ ವಿಮಾನ ಮೂಲಕ ಹೊರಟಿದ್ದಾರೆ. ಇಂಡೋನೇಶಿಯನ್ ಸರಕಾರದವರು ಈ ಅನವಶ್ಯಕ ರಕ್ತಪಾತವನ್ನು ನಿಲ್ಲಿಸಲು ಜಗತ್ತು ನೆರವಾಗಬೇಕೆಂದು ಪ್ರಾರ್ಥಿಸಿದ್ದಾರೆ. ಡಚ್ಚರ ವಿರುದ್ಧ ಅವರು ಯುಕ್ತರಾಷ್ಟ್ರಸಂಘಕ್ಕೆ ಹಿಂದುಸ್ಥಾನ ಸರಕಾರದ ಮೂಲಕ ದೂರುಕೊಡುವರೆಂದು ಹೇಳಲಾಗಿದೆ. ಅದಕ್ಕಾಗಿ ಪಂ. ನೆಹರೂ ಅವರೊಡನೆ ಮಾತಾಡಲು ಶಹರೀರರು ಬರುತ್ತಿರಬಹುದು.

ಡಚ್ಚರ ಕ್ರಿಯೆಯ ಅರ್ಥ

ಬ್ರಿಟಿಶ ಸಾಮ್ರಾಜ್ಯವಾದದಂತೆ ಡಚ್ ಸಾಮ್ರಾಜ್ಯವಾದ ಬೇಗನೆ ಸಾಯಲು ಸಿದ್ಧವಿಲ್ಲ. ಈಸ್ಟ್ ಇಂಡೀಜ (ಇಂಡೋನೇಶಿಯಾ)ದ ಅವರ ಸಾಮ್ರಾಜ್ಯವನ್ನು ಶೋಷಣೆ ಮಾಡದೆ ಅವರು ಹಾಲೆಂಡಿನಲ್ಲಿ ಸೌಖ್ಯದಿಂದ ಬದುಕುವದು ಕಠಿಣ. ಟಿನ್, ಗ್ಯಾಸೊಲಾಯಿನ, ಚಿಮಣಿ ಎಣ್ಣೆ, ರಬ್ಬರ, ಚಹಾ, ಸಕ್ಕರೆ, ಸಿಂಕೋನ, ಕಾಫಿ, ತಂಬಾಕು ಮೊದಲಾದ ಉದ್ಯೋಗಗಳನ್ನು ಡಚ್ಚರು ತಮ್ಮ ಈ ಸಾಮ್ರಾಜ್ಯದಲ್ಲಿ ಸ್ಥಳೀಯ ಜನರ ದುಡಿಮೆಯನ್ನುಪಯೋಗಿಸಿ ಕಟ್ಟಿ ಅದರ ಲಾಭ ಪಡೆಯುತಿದ್ದಾರೆ. ಅಲ್ಲಿ ಅವರ ೨,೬೦,೦೦೦ ಲಕ್ಷ ಗಿಲ್ಡರ (ಡಚ್‌ನಾಣ್ಯ) ಬಂಡವಳವನ್ನು ಅವರು (೧೯೩೯ರ ವರೆಗೆ) ತೊಡಗಿಸಿದ್ದಾರೆ. ಇಷ್ಟೆಲ್ಲ ಹಣ ಅಲ್ಲಿರುವದಲ್ಲದೆ ವ್ಯಾಪಾರ ವ್ಯವಹಾರದಿಂದಲೂ ಡಚ್ ಅಧಿಕಾರಿಗಳ ಸಂಬಳವಿರಾಮವೇತನ ಮೊದಲಾದವುಗಳಿಂದಲೂ ಡಚ್ಚರಿಗೆ ವರ್ಷಕ್ಕೆ ೧೬ ಕೋಟಿ ಡಾಲರ್ಸ್‌ಗಳಿಗಿಂತಲೂ ಮಿಕ್ಕಿ ಲಾಭವಿದೆ. ಒಂದು ಮಾತಿನಲ್ಲಿ ಹೇಳಬೇಕಾದರೆ ೪ ಲಕ್ಷ ಡಚ್ ಜನರ ಜೀವನವೇ ಈ ಸಾಮ್ರಾಜ್ಯದ ಆಳ್ವಿಕೆಯನ್ನು ಅವಲಂಬಿಸಿದೆ. ಸಾಮ್ರಾಜ್ಯ ಕೈಬಿಟ್ಟು ಅದು ಸ್ವತಂತ್ರವಾದರೆ, ತಮ್ಮ ಹಿಂದಿನ ದಾಸರು ಎಷ್ಟೇ ಸವಲತ್ತು ಕೊಟ್ಟರೂ ಹಿಂದಿನ ಲಾಭ ದೊರಕದೆಂದು ಡಚ್ಚರಿಗೆ ಗೊತ್ತಿದೆ. ಅದಕ್ಕಾಗಿ ಸಂಧಾನದ ನೆವದಿಂದ ಸೈನ್ಯ, ವಿಮಾನ, ಹಡಗುಪಡೆಗಳನ್ನು ತರಲು ಸಾಕಷ್ಟು ಸಮಯ ದೊರಕಿಸಿಕೊಂಡು ಮತ್ತು ಇಂಡೋನೇಶಿಯನ್ನರ ಕೈಲಿ ಸಿಕ್ಕಿದ್ದ ಡಚ್ ಜನರನ್ನು ಸಾವೋಪಾಯದಿಂದ ಬಿಡಿಸಿಕೊಂಡು ಈಗ ಹಿಂದಿನ ಸಾಮ್ರಾಜ್ಯವನ್ನು ತಿರುಗಿ ಕೈಸೇರಿಸಿಕೊಳ್ಳಲು ಡಚ್ಚರು ಈ ಕ್ರಮ ತೆಗೆದುಕೊಂಡಿದ್ದಾರೆ.

x x x

ಯುರೋಪಿಗೆ ಸಹಾಯ ನೀಡುವ ಅಮೇರಿಕನ್ ವಿದೇಶ ಮಂತ್ರಿ ಮಾರ್ಶಲ್ಲರ ಯೋಜನೆಯ ಬಗ್ಗೆ ಪ್ಯಾರೀಸಿನಲ್ಲಿ ಸೇರಿದ ಪಶ್ಚಿಮ ಯುರೋಪಿನ ರಾಷ್ಟ್ರಗಳು ಒಂದು ಸಮಿತಿಯನ್ನು ನೇಮಿಸಿ ಯೋಜನೆಯಲ್ಲಿ ಭಾಗವಹಿಸಲಿರುವ ರಾಷ್ಟ್ರಗಳ ಆರ್ಥಿಕ ಅವಶ್ಯಕತೆಯ ವಿಷಯದಲ್ಲಿ ಸೆಪ್ಟಂಬರ ೧ ರೊಳಗೆ ಒಂದು ವರದಿಯನ್ನು ಸಿದ್ಧಗೊಳಿಸಲು ಆ ಸಮಿತಿಗೆ ಆದೇಶ ಕೊಟ್ಟಿವೆ.

× × ×

ಈ ತಲೆಮಾರಿನಲ್ಲಿ ಯುದ್ಧವಾಗುವ ಸಂಭವವಿಲ್ಲವಾದರೂ ಈಗಿನ ಮುಂದಾಳುಗಳು ತಪ್ಪು ಮಾಡಿದರೆ ೩೦-೪೦ ವರ್ಷಗಳಲ್ಲಿ ತಮ್ಮ ಮಕ್ಕಳನ್ನು ವಿನಾಶಕ್ಕೆ ಗುರಿಮಾಡುವ ಯುದ್ಧವಾಗಬಹುದೆಂದು ಬ್ರಿಟಿಶ ವಿದೇಶ ಮಂತ್ರಿ ಬೇವಿನ್ನರು ಅಭಿಪ್ರಾಯಪಟ್ಟಿದ್ದಾರೆ.

ಪಾಕಿಸ್ತಾನ ಹಾಗೂ ಸಂಯಾನುಗಳಲ್ಲಿ ರಾಯಭಾರಿಗಳ ವಿನಿಮಯ ಪ್ರಶ್ನೆಯ ಬಗ್ಗೆ ಸಯಾಮದ ಪ್ರತಿನಿಧಿ ಶ್ರೀ ಮನೂ ಅಮಾತ್ಯರು ಬಂಗಾಲ ಮುಖ್ಯ ಮಂತ್ರಿ ಶ್ರೀ ಸುರ್ಹವರ್ದಿಯವರೊಡನೆ ಮಾತುಕತೆ ನಡೆಸುತಿರುವರು.

ಜೀವನ ಮತ್ತು ವಿಜ್ಞಾನ

ಲೇ- ನೆಂಕೋಬಾಚಾರ್ಯ ಉಪಾಧ್ಯಾಯ

ಲೋಹ ಲವಣಗಳು

(Mineral Salts)

ಶರೀರ ಪೋಷಣೆಗೆ ಬೇಕಾದ ಆಹಾರಾಂಶಗಳಲ್ಲಿ ಲವಣವೂ ಒಂದು. ಶರೀರದ ೧/೨೫ ಭಾಗವು ಈ ಲೋಹ ಲವಣಗಳಿಂದ ಕೂಡಿದೆ. ಇವು ಶರೀರದಲ್ಲಿದ್ದ ಇಪ್ಪತ್ತು ಬೇರೆ ಬೇರೆ ಕರದ ಖನಿಜ ವಸ್ತುಗಳಿಂದ ತಯಾರಾಗುತ್ತವೆ. ಇವುಗಳಲ್ಲಿ ಮುಖ್ಯವಾದವುಗಳು ಕ್ಯಾಲ್ಸಿಯಂ, ಪೊಟೆಸಿಯಂ, ಸೋಡಿಯಂ, ಕಬ್ಬಿಣ, ಮೆಗ್ನೀಸಿಯಂ, ಮೆಂಗನೀಜ್, ಜಿಂಕ್, ತಾಮ್ರ, ಲೀಥಿಯಂ, ಬೇರಿಯಂ, ರಂಜಕ, ಗಂಧಕ, ಕ್ಲೋರೀನ್, ಅಯೋಡೀನ್, ಸಿಲಿಕನ್ ಮತ್ತು ಫ್ಲೋರೀನುಗಳು. ಮೊದಲಿನ ಹತ್ತು ಕ್ಷಾರವನ್ನು ಹುಟ್ಟಿಸುವ ವಸ್ತುಗಳು. ಕ್ಷಾರವನ್ನು ಹುಟ್ಟಿಸುವ ವಸ್ತುಗಳಲ್ಲಿ ಕ್ಯಾಲ್ಸಿಯಂ, ಪೊಟಾಸಿಯಂ, ಸೋಡಿಯಂ, ಕಬ್ಬಿಣ ಮತ್ತು ಮೆಗ್ನೀಸಿಯಂ ಬಹಳ ಮಹತ್ವವುಳ್ಳವುಗಳಾಗಿದ್ದು, ಶರೀರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುತ್ತವೆ. ಆಮ್ಲವನ್ನು ಹುಟ್ಟಿಸುವ ವಸ್ತುಗಳಲ್ಲಿ ರಂಜಕ, ಗಂಧಕ ಮತ್ತು ಕ್ಲೋರಿನ್. ಮುಖ್ಯವಾದವುಗಳು. ಇವೆರಡೂ ವರ್ಗದ ಲೋಹ ಲವಣಗಳು ಸರಿಯಾದ ಪ್ರಮಾಣದಲ್ಲಿದ್ದರೆ ಶರೀರಕ್ಕೆ ಯಾವ ರೋಗವೂ ಉಂಟಾಗುವದಿಲ್ಲ.

ಬಹುತರವಾಗಿ ಲೋಹ ಲವಣಗಳು, ಕಾಯಿಪಲ್ಲೆ, ಹಾಲು, ಹಾಲಿನಿಂದ ತಯಾರಾದ ಪದಾರ್ಥಗಳು, ಹಣ್ಣುಗಳು, ಬೇಳೆ ಮತ್ತು ಮಾಂಸಗಳಲ್ಲಿಯೂ ಹಾಗೂ ಅಕ್ಕಿ, ಗೋದಿ ಮತ್ತು ರಾಗಿ ಮುಂತಾದ ಕಾಳುಗಳ ಹೊರ ಹೊದಿಕೆಯಲ್ಲಿಯೂ ಇರುತ್ತವೆ. ಅಕ್ಕಿಯನ್ನು ಪಾಲಿಷ್ ಮಾಡಿಸುವುದರಿಂದಲೂ ಹಾಗೂ ಗೋದಿಯನ್ನು ಮೈದಾಹಿಟ್ಟಿಗೆ ರೂಪಾಂತರಿಸುವುದರಿಂದಲೂ ಅವರಲ್ಲಿದ್ದ ಲವಣಗಳು ನಷ್ಟವಾಗಿ ಬಿಡುತ್ತವೆ. ಕಾರಣ ಅಕ್ಕಿಯನ್ನು ಪಾಲಿಷ್ ಮಾಡಿಸದೆ ಹಾಗೆಯೇ ಉಪಯೋಗಿಸಿಕೊಳ್ಳುವುದು ಹಿತಕರ. ಇದಲ್ಲದೆ ಸಾಮಾನ್ಯವಾಗಿ ಎಲ್ಲ ಲೋಹ ಲವಣಗಳೂ ನೀರಿನಲ್ಲಿ ಕರಗುವದರಿಂದ, ಕಾಯಿಪಲ್ಲೆ ಬೇಯಿಸುವಾಗ ಅದರಲ್ಲಿದ್ದ ನೀರನ್ನು ಎಂದೂ ಚೆಲ್ಲಕೂಡದು.

ಲವಣಗಳಲ್ಲಿದ್ದ ಕೆಲವೊಂದು ಮುಖ್ಯ ವಸ್ತುಗಳ ಉಪಯೋಗ ಹಾಗೂ ಅವುಗಳನ್ನೊಳಗೊಂಡ ಆಹಾರಾಂಶಗಳ ವಿಷಯವನ್ನು ಕೆಳಗೆ ಸಂಕ್ಷಿಪ್ತವಾಗಿ ವಿವರಿಸಿದೆ.

೧ ಕ್ಯಾಲ್ಸಿಯಂ—ಇದು ರಕ್ತ ಹೆಪ್ಪುಗಟ್ಟುವ ದಕ್ಕೂ ಹಲ್ಲು ಮತ್ತು ಎಲುವುಗಳ ಬೆಳವಣಿಗೆಗೂ ತುಂಬಾ ಅವಶ್ಯಕ. ಶರೀರದಲ್ಲಿ ಇದು ಶರೀರ ತೂಕದ ನೂರಕ್ಕೆ ೨ ರಂತೆಯೂ ಹಲ್ಲು ಮತ್ತು ಎಲವುಗಳಲ್ಲಿ ನೂರಕ್ಕೆ ೯೬ ರಂತೆಯೂ ಇರುತ್ತದೆ. ಒಂದು ವೇಳೆ ಕ್ಯಾಲ್ಸಿಯಂ, ಶರೀರದಲ್ಲಿ ಕಡಮೆಯಾದರೆ 'ರಿಕೆಟ್ಸ್' ಎಂಬ ಎಲುಬಿನ ರೋಗ ಬರುತ್ತದೆ. ಹೆಚ್ಚಿನ ಪ್ರಮಾಣದಲ್ಲಿ 'ಕ್ಯಾಲ್ಸಿಯಂ'ದಿಂದ ಕೂಡಿದ ಆಹಾರಾಂಶಗಳೆಂದರೆ- ಹಾಲು, ಮಜ್ಜಿಗೆ, ಗಿಣ್ಣು, ಬೇಳೆ, ಸೊಪ್ಪು ಮತ್ತು ಹಣ್ಣುಗಳು. ಇವೆಲ್ಲವುಗಳಲ್ಲಿ ಹಾಲಿನಲ್ಲಿದ್ದಷ್ಟು ಕ್ಯಾಲ್ಸಿಯಂ, ಮತ್ಯಾವ ಪದಾರ್ಥದಲ್ಲಿಯೂ ಇಲ್ಲ. ಇದಲ್ಲದೆ ಇದು ಹಾಲನ್ನು ಕಾಯಿಸುವುದರಿಂದಾಗಲಿ, ಒಣಗಿಸುವುದರಿಂದಾಗಲೀ ನಷ್ಟವಾಗುವದಿಲ್ಲ. ಕಾರಣ ಹಾಲು ಉಪಯೋಗಿಸದೆ ಶರೀರ ಪೋಷಣೆಗೆ ಬೇಕಾದ 'ಕ್ಯಾಲ್ಸಿಯಂ' ದೊರಕಿಸಿಕೊಳ್ಳುವುದು ಬಹಳ ಕಠಿನ.

೨. ರಂಜಕ— ಇದು ಹಲ್ಲು ಮತ್ತು ಎಲುವುಗಳಲ್ಲಿ "ಕ್ಯಾಲ್ಸಿಯಂ, ಫಾಸ್ಫೇಟ್" ಎಂಬ ಲವಣದ ರೂಪದಲ್ಲಿ ಇರುತ್ತದೆ. ರಕ್ತ ಹೆಪ್ಪುಗಟ್ಟುವುದಕ್ಕೆ 'ಕ್ಯಾಲ್ಸಿಯಂ" ಜೊತೆಗೆ ಇದು ಬೇಕೇ ಬೇಕು. ಆಹಾರದಲ್ಲಿ ರಂಜಕವು ಕಡಮೆಯ ಪ್ರಮಾಣದಲ್ಲಿದ್ದರೆ ಎಲುವುಗಳು ಹಾಗೂ ಹಲ್ಲುಗಳು ಕೆಟ್ಟು ಹೋಗುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ರಂಜಕದಿಂದ ಕೂಡಿದ ಆಹಾರಾಂಶಗಳೆಂದರೆ— ಹಾಲು, ಮಜ್ಜಿಗೆ, ತತ್ತಿ, ಸೋಯಾಬೀನ್, ಬೇಳೆ, ಗೋದಿ, ಮಾಂಸ ಮತ್ತು ಮೀನುಗಳು.

೩. ಕಬ್ಬಿಣ— ಶರೀರದ ರಚನೆಗೆ ಬೇಕಾದ ಲವಣಗಳಲ್ಲಿ ಕಬ್ಬಿಣವು ಬಹಳ ಮುಖ್ಯವಾದದ್ದು. ಕಬ್ಬಿಣದಿಂದಲೇ ರಕ್ತಕ್ಕೆ ಕೆಂಪು ಬಣ್ಣ ಬರುತ್ತದೆ. ಇದಲ್ಲದೆ ಮಾಂಸ ಖಂಡಗಳು ಕಬ್ಬಿಣದ ಸಹಾಯದಿಂದ ಆಮ್ಲಜನಕವನ್ನು ಹೀರಿಕೊಳ್ಳುತ್ತವೆ. ಒಂದು ವೇಳೆ ಆಹಾರದಲ್ಲಿ ಕಬ್ಬಿಣವು ಬಹಳ ಕಡಮೆ ಪ್ರಮಾಣದಲ್ಲಿದ್ದರೆ, ರಕ್ತಕ್ಷಯ ಬರುತ್ತದೆ.

ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣದಿಂದ ಕೂಡಿದ ಆಹಾರಾಂಶಗಳೆಂದರೆ— ಮಾಂಸ, ತತ್ತಿ, ತರಕಾರಿ, ಹಣ್ಣುಗಳು, ಬೇಳೆ, ಈರುಳ್ಳಿ ಮತ್ತು ಟೊಮ್ಯಾಟೊ ಮುಂತಾದವುಗಳು.

೪. ಉಪ್ಪು— ಇದರ ರಾಸಾಯನಿಕ ಹೆಸರು 'ಸೋಡಿಯಂ ಕ್ಲೋರಾಯಿಡ್'. ಇದು ರಕ್ತಕ್ಕೆ ಸರಿಯಾದ ರಚನೆ ಕೊಡುವುದರಲ್ಲಿಯೂ ಹಾಗೂ ದೇಹದ ಬೇರೆ ಬೇರೆ ಇಂದ್ರಿಯಗಳು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದರಲ್ಲಿಯೂ ಸಹಾಯವಾಗುತ್ತದೆ. ಸಸ್ಯ ವರ್ಗದಿಂದ ದೊರೆಯುವ ಆಹಾರ ಪದಾರ್ಥಗಳಲ್ಲಿ 'ಸೋಡಿಯಂ' ಕಡಮೆಯ ಪ್ರಮಾಣದಲ್ಲಿದ್ದುದರಿಂದ ಸಸ್ಯಾಹಾರಿಗಳು ತಮ್ಮ ಆಹಾರದಲ್ಲಿ ಉಪ್ಪು ಹೆಚ್ಚು ಸೇವಿಸುತ್ತಾರೆ. ಆದರೆ ಹೀಗೆ ಸೇವಿಸುವುದು ದೇಹಕ್ಕೆ ಬಹಳ ಹಾನಿಕರ.

೫. ಕ್ಲೋರೀನ್:—ರಕ್ತದ ರಚನೆಗೂ ಮತ್ತು ಆಹಾರವನ್ನು ಜೀರ್ಣ ಮಾಡುವುದಕ್ಕೆ ಬೇಕಾಗುವ "ಹೈಡ್ರೊಕ್ಲೋರಿಕ್" ಆಮ್ಲವನ್ನು ಹುಟ್ಟಿಸುವುದಕ್ಕೂ ಇದು ಅವಶ್ಯಕ. ಕ್ಲೋರೀನ್‌ದಿಂದ ಕೂಡಿದ ಆಹಾರಾಂಶಗಳೆಂದರೆ— ಟೊಮ್ಯಾಟೊ, ಅನನಾಸ್, ಉತ್ತತ್ತಿ, ಹಾಲ್ಕೂಲಂಗಿ, ಹಲಸಿನ ಹಣ್ಣು ಮತ್ತು , ಸೊಪ್ಪು ಮುಂತಾದವುಗಳು.

೬ ಅಯೊಡೀನ್:— ಇದು ಸಸ್ಯ ವರ್ಗದಿಂದ ದೊರೆಯುವ ಆಹಾರ ಪದಾರ್ಥಗಳಲ್ಲಿ ಹೆಚ್ಚು ಸಿಕ್ಕುತ್ತದೆ. ಆಹಾರದಲ್ಲಿ ಇದು ಕಡಮೆಯಾದರೆ, ಗಂಟಲು ಉಬ್ಬುವುದಕ್ಕೆ ಪ್ರಾರಂಭವಾಗುತ್ತದೆ. ಹೆಚ್ಚಾದರೆ ತುಂಬಾ ಹಾನಿ. ಅಯೊಡೀನ್‌ದಿಂದ ಕೂಡಿದ ಆಹಾರಾಂಶಗಳೆಂದರೆ— ಮೀನು, ಮೀನಿನ ಎಣ್ಣೆ, ಸೊಪ್ಪು ಮತ್ತು ಹಣ್ಣುಗಳು.

ಒಟ್ಟಿನ ಮೇಲೆ ಹೇಳಬೇಕಾದರೆ, ಯೋಗ್ಯ ಆಹಾರದಲ್ಲಿ ಮೇಲೆ ತಿಳಿಸಿದ ಎಲ್ಲ ಲವಣಗಳು ಸರಿಯಾದ ಪ್ರಮಾಣದಲ್ಲಿ ಕೂಡಿಕೊಂಡಿರುತ್ತವೆ. ವಿಶೇಷವಾಗಿ ಹಾಲಿನಲ್ಲಿ ಈ ಎಲ್ಲ ವಸ್ತುಗಳು ಕೂಡಿಕೊಂಡದ್ದರಿಂದ, ಆಹಾರ ಶಾಸ್ತ್ರಜ್ಞರು ಹಾಲನ್ನು "ಸಂಪೂರ್ಣ ಆಹಾರ" ವೆಂದು ಕರೆದಿದ್ದಾರೆ.

ಜಗತ್ತಿನಲ್ಲಿಯೆ ಅಪೂರ್ವವಾದ ಗಾಜಿನ ಸಸ್ಯಗಳ ವಸ್ತು ಪ್ರದರ್ಶನಾಲಯ

ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ

(ಶ್ರೀ ನಾಡಿಗ ಕೃಷ್ಣಮೂರ್ತಿಯವರು ಕೊಲಂಬಿಯ)

ಕನ್ನಡನಾಡಿನ ತರುಣ ಸಾಹಿತಿಗಳಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಪತ್ರಿಕೋದ್ಯಮದಲ್ಲಿ ಹೆಚ್ಚಿನ ಶಿಕ್ಷಣ ಹೊಂದಲು ಅಮೇರಿಕೆಗೆ ಹೋಗಿರುವರಷ್ಟೆ. ಇವರು 'ಕರ್ಮವೀರ'ಕ್ಕಾಗಿ ಆಗಾಗ ವಿಶೇಷ ಲೇಖನಗಳನ್ನು ಬರೆಯುವರು. ಮೊದಲನೆಯ ಲೇಖವನ್ನು ಕೆಳಗೆ ಕೊಟ್ಟಿದೆ.

ಅಮೇರಿಕದ ೬೦೦ ವಿಶ್ವವಿದ್ಯಾನಿಲಯಗಳಲ್ಲಿ ಬೋಸ್ಟನ್ ನಗರದಲ್ಲಿರುವ ಹಾರ್ವರ್ಡ್ ವಿಶ್ವವಿದ್ಯಾನಿಲಯವು ಪ್ರಪಂಚದ ಹೆಸರಾಂತ ವಿದ್ಯಾಪೀಠಗಳಲ್ಲೊಂದು. ಬೋಸ್ಟನ್ ನಗರದ ಅಂದಕ್ಕೆ ಈ ವಿದ್ಯಾಪೀಠವು ಕಳೆಕೊಡುತ್ತಿದೆ. ಹಾರ್ವರ್ಡ ಮಹಾಶಯನ ಹೆಸರಿನಿಂದ ಸ್ಥಾಪಿತವಾದ ಈ ವಿದ್ಯಾಪೀಠದ ಮಹಾದ್ವಾರದಲ್ಲಿ ಅವನ ಪ್ರತಿಮೆಯನ್ನು ನಿರ್ಮಿಸಿದ್ದಾರೆ. ಹಾರ್ವರ್ಡದ ಗಾಜಿನ ಸಸ್ಯಗಳ ವಸ್ತುಪ್ರದರ್ಶನಾಲಯದ ಕಥೆಯನ್ನೇ ನಾನು ಇಲ್ಲಿ ಬರೆಯುತ್ತಿರುವುದು.

ಇದು ಬರಿಯ ವಸ್ತು ಪ್ರದರ್ಶನಾಲಯವಲ್ಲ. ಜೀವಂತ ಸಸ್ಯಗಳೇ ಇಲ್ಲಿರುವುವೋ ಎಂಬಂತೆ ಭಾಸವಾಗುವುದು. ಜರ್ಮನಿ ದೇಶದ ಲಿಯೊಪಾಲ್ಡ್ ಮತ್ತು ರುಡಾಲ್ಫ್ ಬ್ಲಾಸ್ಕ ಎಂಬಿಬ್ಬರು ಪರಿಶ್ರಮ, ಕೈ ಚಳಕದ ಫಲವೇ, ಈ ಸಂಗ್ರಹಾಲಯ. ನೈಜತೆ ಹಾಗೂ ವೈಜ್ಞಾನಿಕ ಸ್ಪಷ್ಟತೆ ಎದ್ದು ಕಾಣುವದಿಲ್ಲ. ೫೦ ವರ್ಷಗಳ ಸತತವಾದ ದುಡಿತದ ಫಲವಾಗಿ ಈ ಜ್ಞಾನ ಭಾಂಡಾರ ಇಂದು ಹಾರ್ವರ್ಡದ ಸೊತ್ತಾಗಿದೆ. ಪ್ರಪಂಚದ ಇನ್ನಾವ ಸಂಗ್ರಹಾಲಯದಲ್ಲಿಯೂ ಸಿಕ್ಕದ ಈ ವಸ್ತುಗಳು ತಂದೆ ಮಕ್ಕಳಿಬ್ಬರಿಂದಲೇ, ಒಂದೇ ಪ್ರಯೋಗ ಮಂದಿರದಲ್ಲಿ ಮಾಡಿದಂತಹವು. ಬ್ಲಾಸ್ಕ ಮಹನೀಯರು ಬರಿಯ ಕೆಲಸಗಾರರು ಮಾತ್ರವಾಗಿರಲಿಲ್ಲ. ಸಸ್ಯಶಾಸ್ತ್ರ ಪ್ರಾಣಿಶಾಸ್ತ್ರಗಳಲ್ಲಿ ಪಂಡಿತರಾಗಿದ್ದರು. ಸಸ್ಯಗಳ ಚಿತ್ರಗಳನ್ನು ತಯಾರಿಸುವುದಕ್ಕಿಂತ ಮುಂಚೆ ಪ್ರಾಣಿಗಳ ಬೊಂಬೆಗಳನ್ನು ತಯಾರಿಸಿ ಹೆಸರುವಾಸಿಯಾಗಿದ್ದರು.

ಹಾರ್ವರ್ಡದ ಪ್ರೊಫೆಸರ್ ಜಾರ್ಜ ಲಿಂಕನ್ ಗೋಡೆಲ್ ಎಂಬವರು ೧೮೮೬ರಲ್ಲಿ ಈ ತೆರನಾದ ಸಂಗ್ರಹಾಲಯವನ್ನು ತೆರೆಯಲು ನಿರ್ಧರಿಸಿದರು. ೧೮೯೦ ರಲ್ಲಿ ಕೆಲವು ಮಟ್ಟಿಗೆ ಹಣ ಶೇಖರಿಸಿ ಪ್ರಾಣಿಶಾಸ್ತ್ರದ ಸಂಗ್ರಹಾಲಯದ ನಿವೇಶನದಲ್ಲಿಯೇ ಸಣ್ಣದಾಗಿ ಸಸ್ಯಗಳನ್ನು ಪ್ರದರ್ಶಿಸಿದರು. ಗಾಜಿನಲ್ಲಿ ತಯಾರಿಸಿದ ಪ್ರಾಣಿಗಳ ನೈಜತೆಯನ್ನು ಕಂಡು, ಸಸ್ಯಗಳಲ್ಲಿಯೂ ಏಕಾಗಕೂಡದೆಂದು ತರ್ಕಿಸಿ ಗಾಜಿನ ಪ್ರಾಣಿಗಳನ್ನು ತಯಾರಿಸಿದ ಮಹನೀಯರನ್ನು ಕಂಡು ಹಿಡಿಯಲಾಗಿ ಅವರು ಜರ್ಮನೀ ದೇಶದ ಡ್ರೆಸಡೆನ್ ನಗರದ ಲಿಯೋಪಾಲ್ಡ ಮತ್ತು ರುಡಾಲ್ಫ ಬ್ಲಾಸ್ಕ ಎಂದು ತಿಳಿಯಿತು. ನಾನು ಈ ಸಸ್ಯಗಳ ಮಾದರಿಯನ್ನು ನೋಡಿದಾಗ ಅವು ಗಾಜಿನವೆಂದು ನಂಬಲಾರದೆ ಹೋದೆ. ಕಣ್ಣಿಗೆ ಎಷ್ಟು ಅಂದವೋ ಅಷ್ಟು ಜ್ಞಾನಪ್ರಬೋಧಕವಾಗಿಯೂ ಇವೆ.

ಪ್ರೊ. ಗೋಡೆಲ್ಲರು ೧೮೮೬ ರಲ್ಲಿ ಜರ್ಮನಿಗೆ ತೆರಳಿ, ಬ್ಲಾಸ್ಕ ಮಹನೀಯರನ್ನು ಕಂಡು ಸಸ್ಯಗಳ ಮಾದರಿ ತಯಾರಿಸುವ ವಿಷಯ ಚರ್ಚಿಸಿದರು. ಲಿಯೋಪಾಲ್ಡರು, ಪ್ರಾಣಿಗಳ ಮಾದರಿಯನ್ನು ಮಾಡುವುದರಲ್ಲಿ ಎತ್ತಿದ ಕೈಯಾಗಿದ್ದರು. ಸಸ್ಯಗಳ ಮಾದರಿ, ಜಯಪ್ರದವಾಗುತ್ತದೋ ಇಲ್ಲವೋ ಎಂಬ ಹೆದರಿಕೆಯಿದ್ದರೂ ಕೊನೆಗೆ ಅವನ್ನು ತಯಾರಿಸಲು ಒಪ್ಪಿಕೊಂಡರು.

ಲಿಯೋಪಾಲ್ಡರು, ೧೮೮೭ರಲ್ಲಿ ಕೆಲವು ಮಾದರಿಗಳನ್ನು ತಯಾರಿಸಿ ಅಮೇರಿಕಕ್ಕೆ ಕಳುಹಿಸಿದರು. ದುರದೃಷ್ಟವಶಾತ್ ನ್ಯೂಯಾರ್ಕಿನ ಸುಂಕದ ಕಚೇರಿಯಲ್ಲಿ ಅವೆಲ್ಲವೂ ಕೆಟ್ಟು ಹೋದವು ಅಂಥವುಗಳನ್ನೇ ಹಾರ್ವರ್ಡಿಗೆ ತೆಗೆದುಕೊಂಡು ಹೋಗಿ ಪ್ರದರ್ಶಿಸಲಾಯಿತು. ಆದರೂ ಅವುಗಳ, ಅಂದ ಚೆಂದ, ಸ್ಪಷ್ಟತೆ, ಯೋಗ್ಯತೆ, ಒಡೆದ ಕನ್ನಡಿಯಲ್ಲಿಯೇ ಕಂಡು ಬಂದುವು. ಇಂತಹ ಸಸ್ಯಗಳ ಮಾದರಿಯನ್ನು ಬಹುದೊಡ್ಡ ಪ್ರಮಾಣದಲ್ಲಿ ತಯಾರಿಸಬೇಕೆಂದು ಅಭಿಪ್ರಾಯ ಬಂದಾಗ, ಕೇಂಬ್ರಿಜ್ಜದ ಶ್ರೀಮತಿ ಎಲಿಜಬೆತ್ ಸಿ. ವೇರ್ ಮತ್ತು ಆಕೆಯ ಮಗಳು ಕುಮಾರಿ ಮೇರಿ ಲಿ ವೇರ್ ಹಣ ಸಹಾಯ ಮಾಡಲು ಮುಂದೆ ಬಂದರು. ಅವರ ಉದಾರ ದಾನದ ಫಲವೇ ಇಂದಿನ ಸಂಗ್ರಹಾಲಯ.

ಬಣ್ಣದ ಗಾಜಿನಲ್ಲಿ ಸಸ್ಯಗಳ ಮಾದರಿಯನ್ನು ತಯಾರಿಸುವ ಕಲೆಯನ್ನು ಕಂಡು ಹಿಡಿದ ಲಿಯೋಪಾಲ್ಡ ಬ್ಲಾಸ್ಕರು ೧೮೨೨ನೆಯ ಇಸ್ವಿ ಮೇ ೨೨ನೆಯ ತಾರೀಖು ಉತ್ತರ ಬೋಹಿಮಿಯಾದ ಅಚಿಯಾ ಎಂಬ ಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಜೋಸೆಫ್ ಬ್ಲಾಸ್ಕ ಎಂಬವರು ವಿದ್ಯುಚ್ಛಕ್ತಿಯ ಮತ್ತು ಗಾಜಿನ ಕಾರಖಾನೆಯಲ್ಲಿ ಯಂತ್ರಕುಶಲರಾಗಿದ್ದರು. ಈ ಮನೆತನದ ಜೀವನವೇ ಈ ತೆರನಾದ ಕಲೆಗೆ ಹೆಸರುವಾಸಿಯಾಗಿತ್ತು. ಲಿಯೋಪಾಲ್ಡರು ಅಭ್ಯಾಸ ಮುಗಿಸಿ ಕೆಲಸ ಪ್ರಾರಂಭಿಸಿದ ನಂತರ ಗಾಜಿನ ಕಲೆಯಲ್ಲಿ ಉದ್ಯುಕ್ತರಾದರು. ಚಿನ್ನ, ಮತ್ತು ಇತರ ಲೋಹದ ಕೆಲಸವನ್ನೂ ಮಾಡುತ್ತಿದ್ದರು. ಮುಖ್ಯವಾಗಿ ಗಾಜಿನ ಕಲ್ಲುಗಳನ್ನು ಕೊರೆಯುವದೇ ಅವರ ಕೆಲಸ ಆಗಿತ್ತು.

೧೮೫೫ ರಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೆ ತೆರಳಿ, ಅಲ್ಲಿಯ ಸಸ್ಯ ಭಾಂಡಾಗಾರವನ್ನು ನೋಡಿ ಅವುಗಳನ್ನು ಗಾಜಿನಲ್ಲಿ ಕೊರೆದು ಡ್ರೆಸ್‌ಡನ್ ನಗರದ ಸಂಗ್ರಹಾಲಯದಲ್ಲಿ ಪ್ರದರ್ಶಿಸಿದಾಗ ಜನ ಅವನ್ನು ಮೆಚ್ಚಿದರು. ಈ ಕಲೆ ಪ್ರಸಿದ್ಧಿಯಾಗುತ್ತ ಬಂದ ಹಾಗೆ, ಅದು ಕೇವಲ ಇಬ್ಬರ ಸೊತ್ತೇ ಆಯಿತು. ತಂದೆ ಮಗ ಇಬ್ಬರೇ ಅದರ ಸರ್ವಾಧಿಕಾರಿಯಾದರು.

ಲಿಯೋಪಾಲ್ಡನ ಒಬ್ಬನೇ ಮಗ ರುಡಾಲ್ಫ. ಈತ ಹುಟ್ಟಿದ್ದು ೧೮೫೭ ನೆಯ ಜೂನ ೧೭ ರಲ್ಲಿ ಇವನು ಹೆಚ್ಚು ಜ್ಞಾನ ಪಡೆಯಲು ಅಮೇರಿಕಕ್ಕೆ ತೆರಳಿದನು. ಬಣ್ಣಗಳ ವಿಚಾರದಲ್ಲಿ ಪರಿಶ್ರಮ ಹೊಂದಿ, ಅನೇಕ ಹೊಸ ಸಸ್ಯಗಳ ಮತ್ತು ಹೂವುಗಳನ್ನು ಚಿತ್ರಿಸಿಕೊಂಡು ಜಮೇಕ, ಪೆಸಿಫಿಕ್ ತೀರ, ದಕ್ಷಿಣ ಅಮೇರಿಕಗಳಲ್ಲಿ ಪ್ರವಾಸ ಮಾಡಿದನು. ವರ್ಜಿನಿಯಾದಲ್ಲಿ ಕೆಲವು ವಸ್ತುಗಳನ್ನು ಸಂಗ್ರಹಿಸುತ್ತಿರುವಾಗ ತಂದೆಯ ಮರಣವಾರ್ತೆಯನ್ನು ಕೇಳಿ ಜರ್ಮನಿಗೆ ಹಿಂತಿರುಗಿದನು.

ಈ ಸಂಗ್ರಹಾಲಯದಲ್ಲಿ ೧೬೪ ವಿವಿಧ ಜಾತಿಯ, ಅಂತರ್ಜಾತಿಯ ಸಸ್ಯಗಳಿವೆ. ಹೂವಿನ ಛಾಯಾ ರೇಖೆಗಳದೆಷ್ಟು ! ಸಸ್ಯಗಳಿಗೂ ಜೀವವಿದೆಯೆಂದು ಭಾರತೀಯ ವಿಜ್ಞಾನಿಗಳಾದ ಜಗದೀಶಚಂದ್ರ ಬೋಸರು ತೋರಿಸಿಕೊಟ್ಟಿದ್ದಾರಲ್ಲಾ ! ಆ ಜೀವಕಳೆ ಇಲ್ಲಿ ತುಂಬಿಬಂದಿದೆ. ೧೮೯೫ ರಲ್ಲಿ ತಂದೆ ಲಿಯೋಪಾಲ್ಡನು ತೀರಿಕೊಂಡನಂತರ ರುಡಾಲ್ಫನು ೧೯೩೨ ರ ವರೆಗೆ ಒಂಟಿಯಾಗಿ ಕೆಲಸಮಾಡಿದ. ಫಂಗಸ್ ಎಂಬ ರೋಗದ ಪರಿಣಾಮವಾಗಿ ಹುಟ್ಟಿದ ರೋಸಸ್ ಹಣ್ಣುಗಳ ಜಾತಿಯ ಗಿಡಗಳ ಚಿತ್ರವೇ ರುಡಾಲ್ಫನ ಕೊನೆಯ ಚಿತ್ರವಾಯಿತು. ರುಡಾಲ್ಫನು ೧೯೩೯ ನೆಯ ಇಸ್ವಿ ಮೇ ೧ ನೆಯ ತಾರೀಖು ತೀರಿಕೊಂಡನು.

ಲಿಯೋಪಾಲ್ಡ್ ಮತ್ತು ರುಡಾಲ್ಫರು ತಯಾರಿಸಿದ ಸಸ್ಯಗಳ ಮತ್ತು ಹೂವುಗಳ ಮಾದರಿ ಎಲ್ಲವೂ ಹಾರ್ವರ್ಡ್ ವಿಶ್ವವಿದ್ಯಾಲಯದ ಸಂಗ್ರಹಾಲಯಕ್ಕೆ ಬಂದಿವೆ. ಪ್ರಪಂಚದ ಇನ್ನಾವ ಸ್ಥಳದಲ್ಲಿಯೂ ಈ ತೆರನಾದ ಗಾಜಿನ ಸಸ್ಯಗಳ ಮಾದರಿ ಸಿಕ್ಕಲಾರದು. ೧೮೩೪ ನೆಯ ಇಸ್ವಿಯಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಡಾ॰ ಚಾರ್ಲ್ಸ್ ಇಲಿಯಟ್ ವೇರ್ ಮತ್ತು ಮಗಳು ಕುಮಾರಿ ಮೇರಿ ಲಿ ವೇರ್ ಉದಾರ ದಾನದ ಫಲ. ಈ ಅದ್ಭುತವಾದ ಮತ್ತು ಚಮತ್ಕಾರವಾದ ವಸ್ತುಸಂಗ್ರಹಾಲಯ.

ನಾನು ಬೋಸ್ಟನ್ನಿಗೆ ಹೋದಾಗ ಆಗ ತಾನೆ ಚಳಿಗಾಲ ಮರೆಯಾಗಿ ವಸಂತಮಾಸ ತಲೆದೋರಿತ್ತು. ಜನಗಳು ವಿಹಾರಾರ್ಥವಾಗಿ ಬೋಸ್ಟನ್ನಿಗೆ ಬಂದುಹೋಗುತ್ತಿದ್ದರು. ಸಂಗ್ರಹಾಲಯದ ಹಾಜರಿ ಪುಸ್ತಕದಲ್ಲಿ ನನ್ನ ರುಜು ಬಿದ್ದಾಗ ಆ ದಿನ ಸಂಗ್ರಹಾಲಯವನ್ನು ಸಂದರ್ಶಿಸಿದವರ ಸಂಖ್ಯೆ ೫೦೫ ನಾನು ೫೦೬ ನೆಯವನಾಗಿದ್ದೆ.

ಬೋಸ್ಟನ್, ನ್ಯೂಯಾರ್ಕಿನಿಂದ ರೈಲ್ವೆದಲ್ಲಿ ೫ ಘಂಟೆಗಳ ಪ್ರವಾಸ. ಈ ದೇಶದಲ್ಲಿ ರೈಲ್ವೆ ತುಂಬಾ ದುಬಾರಿ. ರೈಲ್ವೆದರ ನ್ಯೂಯಾರ್ಕ್‌ನಿಂದ ಬೋಸ್ಟನ್ನಿಗೆ ೬ ಡಾಲರು ೨೫ ಸೇಂಟ್ಸ (ಸುಮಾರು ೨೦ ರೂ.) ಬಸ್ಸಿನ ಪ್ರಯಾಣ ೯ ಘಂಟೆಗಳು ತೆಗೆದುಕೊಳ್ಳುವುದು. ದರ ೩ ಡಾಲರು ೫೦ ಸೇಂಟ್ಸ. ಬೋಸ್ಟನದಲ್ಲಿ ಮೂವರು ಭಾರತೀಯರು ನೆಲೆಸಿದ್ದಾರೆ. ಡಾ. ಎಡ್ಡಿ ಅಶೀರ್ವಾದಂ ರವರು ಬೋಸ್ಟನ್ ವಿಶ್ವವಿದ್ಯಾಲಯದಲ್ಲಿ ರಾಜನೀತಿಯ ಅಧ್ಯಾಪಕರಾಗಿದ್ದರು. ವಿವೇಕಾನಂದರು ಜಯಭೇರಿ ಹೊಡೆದು ರಾಮಕೃಷ್ಣ ಮಠವನ್ನು ಸ್ಥಾಪಿಸಿದ್ದಾರೆ. ಅದರ ಪೂಜಾರಿಯಾಗಿ ಇಂದು ಸ್ವಾಮಿ ಅಖಂಡಾನಂದರು ಅಮೇರಿಕನ್ನರಿಗೆ ಹಿಂದು ಧರ್ಮದ ಸಾರವನ್ನು ತಿಳಿಸುತ್ತಿದ್ದಾರೆ. ಮೂರನೆಯವರು ಡಾ. ಆನಂದಕುಮಾರ ಸ್ವಾಮಿಯವರು. ಈ ದೇಶದಲ್ಲಿ ೩೫ ವರ್ಷಗಳಿಂದ ನೆಲೆಸಿದ್ದಾರೆ. ಬೋಸ್ಟನ್ ಪುಸ್ತಕಭಂಡಾರದ ಕ್ಯೂರೇಟರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಬೋಸ್ಟನ್ ನಗರ ಕೈಗಾರಿಕೆಯಲ್ಲಿ ಅಭಿವೃದ್ಧಿಯನ್ನು ಪಡೆದಿದ್ದರೂ ಸುಂದರವಾಗಿದೆ.

ಕನ್ನಡ ಕಾಲವು ಬರಲಿಹುದು

ಕನ್ನಡ ನಾಡೊಂದಾಗುವದು
'ಕನ್ನಡಿ' ಜ್ಯೋತಿಯು ಬೆಳಗುವದು ॥
ಕನ್ನಡ, ಕನ್ನಡ, ಹಾ! ಸವಿಗನ್ನಡ
ಕನ್ನಡ ಹೊಂದೇರಿಳಿಯುವರು ॥೧॥

ಕನ್ನಡ ಕಾಲವು ಬರಲಿಹುದು
ಕನ್ನಡ ಬಾವುಟ ನಿಲಲಿಹದು ॥
ಕನ್ನಡ ರಾಜ್ಯದಿ ಕರುನಾಡೊಡತಿಯು
ರಾಜಾಸನದಲಿ ಮೆರೆಯುವಳು ॥೨॥

ಕನ್ನಡ ಕಸ್ತುರಿ ಕಮನಿಪುದು
ಕನ್ನಡಿಗರ ಸಿರಿ ಮೆರೆಯುವದು ॥
ಕರ್ನಾಟಕದಲಿ ಕನ್ನಡವೇ ನುಡಿ
ಅನ್ಯರ ನುಡಿ ತಾ ಅದರಡಿಯು ॥೩॥

ಪಂಪ ಮುದ್ದಣರು ಪುಟ್ಟಿಹರು
ಕನ್ನಡ ಕಂಪನು ಬೀರುವರು ॥
ಕನ್ನಡ ಬನದಲಿ ಕವಿಕೋಗಿಲೆಗಳ
ಕನ್ನಡ ಕೂ ಕೂ ಕೇಳುವದು ॥೪॥

ಕನ್ನಡ ಕನ್ನಡಿ ಬೆಳಗುವದು
ಕನ್ನಡ ಕಳಸವು ಹೊಳೆಯುವದು ॥
ಕನ್ನಡ ನಾಡಿನ ಗುಡಿಗೋಪುರಗಳು
ಮಿಂಚುಗಳಂದದಿ ಮಿರುಗುವವು ॥೫॥

—ಶ್ರೀ. "ಕುಮಾರ ರಾಮ"

ಕರ್ಮವೀರ ಹರಿಜನ ಪುರವಣಿ

ಸಮರ್ಥನೆ

(ಮೋ. ಕ. ಗಾಂಧಿಯವರಿಂದ)

ಮೊನ್ನೆ ಒಂದು ದಿನ ಒಬ್ಬ ಪತ್ರಲೇಖಕನ ಪತ್ರದಿಂದ ನಾನು ಕೆಲ ಅಂಶಗಳನ್ನು ಉದ್ಧರಿಸಿ ಕೊಟ್ಟಿದ್ದನ್ನೆಲ್ಲ ಅವನು ಹೀಗೆ ಬರೆಯುತ್ತಾನೆ:

“ಹನ್ನೊಂದು ವರ್ಷಗಳ ಕೆಳಗೆ ನಾನು ನಿಮಗೆ ಬರೆದಿದ್ದ ಪತ್ರದಲ್ಲಿ ಪ್ರತಿಪಾದಿಸಿದ ವಿಷಯಗಳನ್ನು ಕುರಿತು ನೀವು ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೂ ಅದರಂತೆ ಆಚರಿಸುವ ಎದೆಗಾರಿಕೆ ನನಗಿರಲಿಲ್ಲ. ನಾನು ಎಷ್ಟೋ ವೇಳೆ ನನಗೇ ಕೇಳಿಕೊಳ್ಳುತಿದ್ದೆ: ‘ಈ ಅಂಧಕೂಪ ಹೋಗಬೇಕಾದರೂ ಏಕೆ?’ ನೀವು ನಿಮ್ಮ ಕಲ್ಪನೆಯ ಆದರ್ಶ ಮನುಷ್ಯನ ಪ್ರತೀಕವನ್ನು ಸಮಾಜದ ಮುಂದೆ ಮಂಡಿಸಿ, ಮಾನವನ ಕುಲ ಸ್ವಹಿತಕ್ಕಾಗಿಯೇ ಅದನ್ನನುಸರಿಸಬೇಕೆಂದು ಹೇಳುವದು ಯೋಗ್ಯವಾಗಿದ್ದರೂ ಅನುಭವಶಾಲಿಗಳಾದ ಹಿರಿಯರು ಹಾಕಿಕೊಟ್ಟ ನಿಯಮ ಸಂಯಮಗಳನ್ನು ಪರಿಪಾಲಿಸಿದರೇನೇ ಆ ಹಿತ ಹೆಚ್ಚು ಸಾಧ್ಯವಾದೀತೆಂದು ನನಗೆ ತೋರುತ್ತದೆ. ಲಿಂಗಾಧ್ಯಾಸವನ್ನು (ಅಂದರೆ ತಾನು ಸ್ತ್ರೀ ಅಥವಾ ಪುರುಷನೆಂಬರಿವಿನಿಂದಾಗುವ ಭಾವ ವಿಕಾರವನ್ನು) ತಿತ್ತೊಗೆಯಬೇಕೆಂಬುದು ನಿಜ. ಅದೇ ಪ್ರಕಾರ ಸ್ತ್ರೀಯರ ಮೇಲೆ ಪುರುಷರ ಒಡೆತನದ ಭಾವನೆಯನ್ನೂ ದೂರಮಾಡಬೇಕೆಂಬುದೂ ನಿಜ. ಆದರೆ ಈ ಮೂಲತತ್ವಗಳನ್ನು ಪ್ರಚುರಗೊಳಿಸುವ ನೆವದಿಂದ ಜನರು ಸಮಾಜಕ್ಕೆ ಬಹಳ ಹಾನಿಯೊದಗಿಸಿದ ದೃಷ್ಟಾಂತಗಳುಂಟು. ಇದು ಅಪಾಯಕರವೆಂದು ನನಗೆ ತೋರುತ್ತದೆ. ‘ಕ’ ನ ಅಭಿಪ್ರಾಯದಲ್ಲಿ ಸ್ತ್ರೀಯೊಡನೆ ಒಂದೇ ಚಾಪೆಯ ಮೇಲೆ ಕುಳಿತುಕೊಳ್ಳುವದು ಕೂಡ ವರ್ಜ್ಯ. ಪೂರ್ವಿಕರ ಜ್ಞಾನದಲ್ಲಿ ಕಣ್ಮುಚ್ಚಿ ವಿಶ್ವಾಸವಿಟ್ಟವರಲ್ಲಿ ಅವನು ಒಬ್ಬನಾಗಿರಬಹುದು. ಆದರೂ ಈ ವಿಚಾರವನ್ನು ಒಮ್ಮೆಲೇ ತಡೆಗಣಿಸುವಂತಿಲ್ಲ.

ಯದ್ಯದಾಚರತಿ ಶ್ರೇಷ್ಠಃ
ತತ್ತದೇವೇತರೋ ಜನಃ ॥

(ಹಿರಿಯರು ಹೋದ ದಾರಿಯಲ್ಲೇ ಉಳಿದವರು ಸಾಗುವರು) ಎಂಬ ಗೀತಾವಾಕ್ಯದ ವಿವೇಕ ಮರೆಯಲಾರದ್ದು. ಅದುದರಿಂದ ಉನ್ನತಾವಸ್ಥೆಯನ್ನು ಮುಟ್ಟಿದವರು ಇನ್ನೂ ನಿಮ್ನಾವಸ್ಥೆಯಲ್ಲಿರುವವರ ಯೋಗ್ಯತೆಯ ಅಳವು ಮೀರದಂತೆ ಆಚರಿಸುವದೇ ಶ್ರೇಮಸ್ಕರವೆಂದು ನಾನು ಭಾವಿಸುತ್ತೇನೆ. ಇಲ್ಲದೆ ಹೋದರೆ ಕೆಳಮಟ್ಟದ ಜನರು ಮೇಲಿನವರನ್ನು ಹಿಂದೆಮುಂದೆ ನೋಡದೆ ಅನುಕರಿಸುವ ಅಪಾಯವುಂಟು ಆದರೂ ನಿಮ್ಮ ನಿಲುಮೆಯನ್ನು ಸಮರ್ಥಿಸುವ ಒಂದು ವಾದದ ಬಲವನ್ನು ಮಾತ್ರ ನಾನು ಅಲ್ಲಗಳೆಯಲಾರೆ. ಉನ್ನತಾವಸ್ಥೆಯನ್ನು ಮುಟ್ಟುವದು ಮನುಷ್ಯ ಸಾಧ್ಯವೆಂದು ದೃಷ್ಟಾಂತಕ್ಕೆ ತಂದುಕೊಡುವವರಾರೂ ಇಲ್ಲದೆ ಹೋದರೆ ಅಂಥ ಅವಸ್ಥೆಯಲ್ಲಿ ಸಮಾಜಕ್ಕೆ ಎಂದೆಂದೂ ವಿಶ್ವಾಸ ಹುಟ್ಟಲಾರದು. ಅದುದರಿಂದ ಆ ಉಚ್ಚಾವಸ್ಥೆಯನ್ನು ಮುಟ್ಟುವದು ಮನುಷ್ಯಸಾಧ್ಯವೆಂಬುದನ್ನು ಯಾರಾದರೊಬ್ಬನು ಆಚರಣೆಯಿಂದ ತೋರಿಸಿಕೊಡಲೇಬೇಕಾಗುತ್ತದೆ. ಪ್ರತಿಯೊಬ್ಬ ವಿಭೂತಿಯೂ ಪೂರ್ವಾಪರಗಳನ್ನು ಸರಿಯಾಗಿ ತೂಗಿ ನೋಡಿಯೆ ತನ್ನ ಆಚರಣೆಯನ್ನು ರೂಪಿಸಬೇಕೆಂದು ಇದರಿಂದ ನಿಷ್ಪನ್ನವಾಗುವದೆಂದು ನನ್ನ ನಂಬಿಕೆ.”

ಮೇಲಿನ ವಿವೇಚನೆಯನ್ನು ನಾನು ಒಪ್ಪುತ್ತೇನೆ. ಪ್ರತಿಯೊಬ್ಬನೂ ತನ್ನತನ್ನ ದೌರ್ಬಲ್ಯವನ್ನು ಅರಿತುಕೊಳ್ಳಲು ಕಲಿಯಬೇಕು, ತನ್ನ ದೌರ್ಬಲ್ಯವನ್ನು ಅರಿತೂ ಬಲಿಷ್ಠರನ್ನು ಅನುಕರಿಸಹೊರಟವನು ಪತಿತನಾಗುವದು ಖಂಡಿತ. ಅದುದರಿಂದಲೇ ಪ್ರತಿಯೊಬ್ಬನೂ ತನ್ನದೇ ಆದ ನಿಯಮಸಂಯಮಗಳನ್ನು ಹಾಕಿಕೊಳ್ಳಬೇಕೆಂದು ನಾನು ವಾದಿಸುವದು.

ಸ್ತ್ರೀಯರೊಡನೆ ಒಂದೇ ಚಾಪೆಯಲ್ಲಿ ಕುಳಿತುಕೊಳ್ಳುವದನ್ನು ನಿಷೇಧಿಸುವಷ್ಟು ಅತಿರೇಕಕ್ಕೆ “ಕ”ನು ಹೋಗುವನೆಂದು ನನಗನಿಸುವದಿಲ್ಲ. ನಿಮ್ಮ ಹೇಳಿಕೆ ಸತ್ಯವೆಂದು ಸಿದ್ಧವಾದರೆ ನನಗೆ ಆಶ್ಚರ್ಯವಾಗದಿರದು. ಅಂಥ ನಿಷೇಧವನ್ನು ನಾನು ಎಂದೂ ಮನಗಾಣಲಾರೆ. ಅವನು ಹಾಗೆ ಪ್ರತಿಪಾದಿಸಿದುದನ್ನು ನಾನೆಂದೂ ಕಂಡಿಲ್ಲ.

ಸ್ತ್ರೀಯನ್ನು ಅಂಧಕೂಪಕ್ಕೆ ಹೋಲಿಸುವದು ಅಜ್ಞಾನ ಮೂಲವೆಂದಿಷ್ಟೇ ನಾನು ಹೇಳಬಲ್ಲೆ. ಇಂಥ ಕಲ್ಪನೆಯೆ ಸ್ತ್ರೀಪುರುಷರಿಬ್ಬರಿಗೂ ಅವಮಾನಕರ. ತಾಯಿಯ ಮಗ್ಗುಲಲ್ಲಿ ಮಗನು ಕುಳಿತುಕೊಳ್ಳಕೂಡದೆ? ಗಾಡಿಯಲ್ಲಿ ಅಣ್ಣನು ತಂಗಿಯೊಡನೆ ಒಂದೇ ಬೆಂಚಿನ ಮೇಲೆ ಕೂಡುವದು ನಿಷಿದ್ಧವೆ? ಇಂಥ ಸಾನ್ನಿಧ್ಯದಿಂದ ಚಾಂಚಲ್ಯಕ್ಕೆ ಒಳಗಾಗುವವರು ನಿಜವಾಗಿ ಅನುಕಂಪನೀಯ.

ಸಾಮಾಜಿಕ ಹಿತಕ್ಕಾಗಿ ವ್ಯಕ್ತಿ ಎಷ್ಟೋ ವಸ್ತುಗಳನ್ನು ತ್ಯಜಿಸಬೇಕೆಂದು ನಾನು ನಂಬುತ್ತೇನೆ. ಆದರೆ ಅಂಥ ನಿಯಮ ಸಂಯಮಗಳನ್ನು ಪಾಲಿಸುವದರಲ್ಲಿಯೂ ವಿವೇಕದಿಂದ ಅವಶ್ಯಾನಾವಶ್ಯ ಭೇದ ಮಾಡಲು ಎಡೆಯುಂಟೆಂದು ಭಾವಿಸುವೆ. ಯುರೋಪಿನಲ್ಲಿ ಮನುಷ್ಯ ಬಟ್ಟಬತ್ತಲೆಯಾಗಿರಬೇಕೆಂದು ಪ್ರತಿಪಾದಿಸುವ ಒಂದು ಪಥವುಂಟು. ಆ ಸಂಘವನ್ನು ಸೇರಲು ನನಗೆ ಕೇಳಿಕೊಂಡರು. ನಾನು ನಿರಾಕರಿಸಿದೆ. ಒಂದಳವಿನ ಆತ್ಮಸಂಯಮ ಸರ್ವಸಾಧಾರಣವಾಗಿ ದೃಢಸ್ಥಾಪಿತವಾಗುವ ವರೆಗೆ ನಗ್ನತೆಯನ್ನು ಪ್ರದರ್ಶಿಸುವದು ಅನಪೇಕ್ಷಣೀಯವಾದುದರಿಂದ ಇಡೀ ವಿಚಾರವೇ ಅಸಹನೀಯವಾಗಿದೆಯೆಂಬುದೇ ನನ್ನ ಆಕ್ಷೇಪವಾಗಿತ್ತು. ತತ್ವದೃಷ್ಟಿಯಿಂದ ಸ್ತ್ರೀ-ಪುರುಷರಿಬ್ಬರೂ ಪೂರ್ಣ ಬತ್ತಲೆಯಾಗಿ ಅಡ್ಡಾಡುವದರಲ್ಲಿ ಏನೇನೂ ಹಾನಿಯಿಲ್ಲವೆಂದು ನಂಬಿದ್ದರೂ ನಾನು ಮೇಲಿನಂತೆ ಹೇಳಿದೆ. ನಿಷ್ಕಲ್ಮಷ ಚಿತ್ತಸ್ಥಿತಿಯಲ್ಲಿದ್ದಾಗ ಆದಾಮನೂ ಹವ್ವಾಳೂ ಮಾನವನ್ನು ಮುಚ್ಚಿಕೊಳ್ಳಲು ಒಂದು ದೊಡ್ಡ ಎಲೆಯನ್ನು ಕೂಡ ಉಪಯೋಗಿಸುತಿದ್ದಿಲ್ಲವಂತೆ. ಆದರೆ ಅವರಿಗೆ ತಮ್ಮ ನಗ್ನತೆಯ ಅರಿವು ಬಂದೊಡನೆ ಅವಸರದಿಂದ ಮಾನವನ್ನು ಮುಚ್ಚಿಕೊಳ್ಳತೊಡಗಿದರು ಮತ್ತು ಅದಕ್ಕಾಗಿ ನಂದನವನದಿಂದ ಕೆಳಗೆ ಒಗೆಯಲ್ಪಟ್ಟರು. ಈ ಅಧಃಪತಿತಾವಸ್ಥೆಯಲ್ಲಿಯೇ ನಾವಿನ್ನೂ ಇಲ್ಲವೆ? ಇದನ್ನು ನಾವು ಮರೆತರೆ ನಮಗೆ ಹಾನಿಯಾಗುವದು ಖಂಡಿತ. ಸಾಮಾಜಿಕ ಹಿತಕ್ಕಾಗಿ ನಿಯಮ ಸಂಯಮಗಳನ್ನು ಪಾಲಿಸಬೇಕೆಂಬುದಕ್ಕೆ ಇದೊಂದು ಉದಾಹರಣೆಯೆಂದು ನಾನೆನ್ನುವೆ.

ತದ್ವಿರುದ್ಧವಾಗಿ, ಗುಣವಂತರೆಂದು ಕೀರ್ತಿ ಪಡೆದವರಲ್ಲಿ ಕೂಡ ಅಸ್ಪೃಶ್ಯತೆಯ ಆಚರಣೆ ರೂಢವಾಗಿದ್ದರೂ ಅದನ್ನು ತಿತ್ತೊಗೆಯುವದು ಸಾಮಾಜಿಕ ಹಿತಕ್ಕೆ ಅವಶ್ಯವಾಗಿದೆ. ಒಂಭತ್ತು ವರ್ಷದ ಹುಡುಗಿಯರನ್ನು ಮದುವೆ ಮಾಡಿ ಕೊಡುವದೂ ಸಾಮಾಜಿಕ ಹಿತಕ್ಕಾಗಿಯೆ ಎಂದು ಸಮರ್ಥಿಸಿಕೊಳ್ಳುವವರುಂಟು. ಸಮುದ್ರ ಪ್ರಯಾಣದ ನಿಷೇಧದ ಮಾತೂ ಹೀಗೆಯೆ. ಇಂಥ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಆದರೆ ಪ್ರತಿಯೊಂದು ರೂಢಿಯನ್ನೂ ಅದರದರ ಗುಣಾವಗುಣಗಳ ಮೇಲೆಯೇ ಒರೆದು ನೋಡಬೇಕು.

ನಿಯಮನಿಷೇಧಗಳಾದರೂ ಲಿಂಗಾಧ್ಯಾಸವನ್ನು ಶಾಶ್ವತಗೊಳಿಸುವಂಥವಿರಬಾರದು. ನಮ್ಮ ದೈನಂದಿನ ಜೀವನದ ಸಂಪರ್ಕದಲ್ಲಿ ಅಂಥ ಅಧ್ಯಾಸವಿರುವದಿಲ್ಲ. ಅಂಥ ಸಂದರ್ಭ ಬರುವ ಪ್ರಸಂಗವೊಂದೇ ಒಂದಿದೆಯೆಂದು ನನ್ನ ತಿಳುವಳಿಕೆ. ಆ ಅಧ್ಯಾಸವೇ ದಿನವಿಡೀ ಜಾಗ್ರತವಾಗಿದ್ದರೆ ಅಂಥ ಮನಸ್ಸು ವಿಕೃತವಾಗಿದೆಯೆಂದು ಹೇಳಬೇಕಾಗುತ್ತದೆ. ವಿಕೃತ ಮನಸ್ಸು ಸಮಾಜಕ್ಕೆ ಹಿತಕಾರಿಯಲ್ಲ. ಹಳ್ಳಿಗರು ಹಗಲೆಲ್ಲ ಲಿಂಗಾಧ್ಯಾಸದಿಂದ ಪೀಡಿತರಾಗಿದ್ದರೆ ಅವರು ತಮ್ಮ ಮತ್ತು ಸಮಾಜದ ಪ್ರಗತಿಗೆ ನಿಷ್ಪ್ರಯೋಜಕರಾಗುವರು.

(ಮೂಲ ಗುಜರಾತಿಯಿಂದ)

ಹೊಸದಿಲ್ಲಿ ೨೦—೭—೪೭

ಭಾರತ ವಿಭಜನೆಯ ಮೂಲಕಾರಣ

ಬಹಳ ಜನರು ಗಾಂಧೀಜಿಯ ಸನಿಹಕ್ಕೆ ಬಂದು ಭಾರತ ವಿಭಜನೆಯ ಮೇಲೆ ತಮಗಿರುವ ಅಸಂತೋಷವನ್ನು ವ್ಯಕ್ತಮಾಡುತ್ತಾರೆ. ಗಾಂಧೀಜಿಯು ಯಾವಾಗಲೂ ಅದರ ವಿರುದ್ಧವಿದ್ದವರೆಂದು ಅವರಿಗೆ ಗೊತ್ತು. ಹಾಗಾದರೆ ಗಾಂಧೀಜಿಯೇಕೆ ತಮ್ಮ ವಿರೋಧಕ್ಕೆ ಮೂರ್ತಸ್ವರೂಪ ಕೊಡುವದಿಲ್ಲ? ಎಂದು ಅವರು ಕೇಳುತ್ತಾರೆ. ಗಾಂಧೀಜಿಯು ಶಕ್ತಿಗುಂದಿದ ಗುಂಡು, ದೇಶವು ಅವರಿಗೆ ಬೆಂಬಲಗೊಡುವದಿಲ್ಲ—ಎಂದು ಹೇಳುವದು ತಪ್ಪು. “ನಮಗೆ ಮಾರ್ಗದರ್ಶನ ಮಾಡಿರಿ, ಆಗ ನೋಡಬಹುದು ದೇಶವು ನಿಮ್ಮ ಬೆಂಬಲಕ್ಕಿದೆಯೋ ಇಲ್ಲವೋ ಎಂಬುದನ್ನು” ಎಂಬ ಮಾತನ್ನು ಕೇಳಿದಾಗ ಗಾಂಧೀಜಿಗೆ ನಗೆ ಬರುತ್ತದೆ. ಯಾರ ವಿರುದ್ಧವಾಗಿ ಗಾಂಧೀಜಿಯು ಜನರನ್ನೆತ್ತಿಕಟ್ಟಬೇಕು? ದೇಶವನ್ನು ಇಬ್ಭಾಗ ಮಾಡಿದವರು ಬ್ರಿಟಿಶರಲ್ಲ. ಮನಸ್ಸಿಲ್ಲದ ಮನಸ್ಸಿನಿಂದಾದರೂ ಕಾಂಗ್ರೆಸ್ಸು ಅದಕ್ಕೆ ಒಪ್ಪಿಗೆಯಿತ್ತಿದೆ. ಈ ದುರಂತವನ್ನು ತಪ್ಪಿಸಲು ಧೀರ ಅಹಿಂಸಾ ವ್ರತವೊಂದೇ ಮಾರ್ಗವಿತ್ತು. ಆದರೆ ಜನರು ಒಂದೇ ಸಲ ಅದನ್ನು ತಮ್ಮೊಳಗೆ ಹೇಗೆ ಬೆಳೆಸಿಕೊಳ್ಳಬಲ್ಲರು? ತಮ್ಮೊಬ್ಬ ಗೆಳೆಯರೊಡನೆ ಈ ವಿಷಯವಾಗಿ ಮಾತಾಡುತ್ತಿದ್ದಾಗ ಜನನಾಯಕರು ಗತ್ಯಂತರವಿಲ್ಲದೆ ವಿಭಜನೆಗೊಪ್ಪಿದರೆಂದು ಗಾಂಧೀಜಿಯು ಹೇಳಿದರು. ತಾವು ತಪ್ಪುಮಾಡಿದೆವೆಂದು ಅವರಿಗೆನಿಸಲಿಲ್ಲ. ಇಡಿಯ ದೇಶವನ್ನು ದುಃಸ್ಥಿತಿಗೀಡುಮಾಡುವುದಕ್ಕಿಂತ ದೇಶಕ್ಕೆ ಅತ್ಯಗತ್ಯವಾದ ವಿರಾಮವನ್ನು ಒದಗಿಸುವುದು ಲೇಸೆಂದು ವಿಭಜನೆಗೆ ಅವರು ಒಪ್ಪಿದರು. ಆದರೆ ಗಾಂಧೀಜಿಯ ಮತ ಬೇರೆಯದಿತ್ತು: ಇಡಿಯ ದೇಶವೇ ಬೂದಿಯಾದರೂ ಅಡ್ಡಿಯಿಲ್ಲ, ಹಿಂಸಾಕೃತ್ಯಗಳಿಗೆ ಒಂದಂಗುಲದಷ್ಟು ಕೂಡ ಬಗ್ಗಬಾರದು—ಎಂದು ಅವರು ಹೇಳುತ್ತಿದ್ದರು. ಅಹಿಂಸೆಯು ಅವರ ಧರ್ಮನೀತಿಸಿತ್ತು. ಆದರೆ ಕಾಂಗ್ರೆಸ್ಸಿನ ದೃಷ್ಟಿಯಿಂದ ಅದು ಹಾಗಿದ್ದಿಲ್ಲ. ಅಹಿಂಸೆಯೊಂದು ಧೋರಣವೆಂದು ಕಾಂಗ್ರೆಸ್ಸು ಅದನ್ನು ಸ್ವೀಕರಿಸಿತ್ತು. ಅಹಿಂಸೆಯೊಂದು ಧರ್ಮವೆಂದು ನಂಬಿದ ಒಬ್ಬರೇ ಒಬ್ಬ ಮುಖಂಡರೆಂದರೆ ಬಾದಶಹಖಾನರು. ಅವರಾದರೂ ಸಂಪೂರ್ಣವಾಗಿ ಆ ತತ್ವವನ್ನು ಅರಗಿಸಿಕೊಂಡಿದ್ದಾರೆಂದು ಹೇಳಬರುವಂತಿಲ್ಲ.

ಗಾಂಧೀಜಿ ಹೇಳಿದರು— “ನನ್ನ ತಪ್ಪನ್ನು ನಾನು ಒಪ್ಪಿಕೊಂಡಿದ್ದೇನೆ. ಅಹಿಂಸೆಯನ್ನೇ ನಮ್ಮ ಹೋರಾಟ ಆಧರಿಸಿತ್ತೆಂದು ನಾನು ತಿಳಿದೆ; ಆದರೆ ವಸ್ತುತಃ ಅದು ನಿಷ್ಕ್ರಿಯ ಪ್ರತೀಕಾರಕ್ಕಿಂತ ಹೆಚ್ಚಿನದಾಗಿದ್ದಿಲ್ಲ. ಅದೊಂದು ದುರ್ಬಲರ ಆಯುಧವೇ ಸರಿ. ಅದು ಸ್ವಾಭಾವಿಕವಾಗಿ ಸಾಧ್ಯವಿದ್ದಾಗಲೆಲ್ಲ ಸಶಸ್ತ್ರ ಪ್ರತಿಭಟನೆ ಮಾಡುವಲ್ಲಿಗೆ ಜನರನ್ನೊಯ್ಯುತ್ತದೆ. ದ. ಆಫ್ರಿಕದಲ್ಲಿ ನನ್ನ ಸಭೆಯ ಆಂಗ್ಲಾಧ್ಯಕ್ಷರಾಗಿದ್ದ ದಿವಂಗತ ಹೊಸ್ಕೆನ್ನರು ನಾನು ದುರ್ಬಲರ ಉದ್ಧಾರಕ್ಕಾಗಿ ಹೋರಾಡುತ್ತಿದ್ದೇನೆಂದು ಹೇಳಿದರು; ಅದರಿಂದಲೇ ನಾನು ನಿಷ್ಕ್ರಿಯ ಪ್ರತೀಕಾರವನ್ನು ಕೈಕೊಳ್ಳಬೇಕಾಯಿತೆಂದೂ ಅಭಿಪ್ರಾಯಪಟ್ಟರು. ಆದರೆ ನಾನು ಅದನ್ನು ಅಲ್ಲಗಳೆದೆ. ತಾವು ಹೇಳಿದ ಅರ್ಥದಲ್ಲಿ ಅವರು ದುರ್ಬಲರಲ್ಲವೆಂದು ಅಧ್ಯಕ್ಷರಿಗೆ ಹೇಳಿದೆ. ಟ್ರಾನ್ಸವಾಲಿನ ಹೋರಾಟ ನಿಷ್ಕ್ರಿಯ ಪ್ರತೀಕಾರವಲ್ಲ. ಅದು ಅಹಿಂಸೆಯನ್ನು ಆಧರಿಸಿದ್ದಾಗಿತ್ತು. ಅದರ ಸಾಮರ್ಥ್ಯದ ಆಕರವು ಆತ್ಮಬಲವಲ್ಲದೆ ದೇಹಬಲವಾಗಿದ್ದಿಲ್ಲ.

“ದ. ಆಫ್ರಿಕದ ವಿಜಯದಿಂದ ಮತ್ತನಾಗಿ ನಾನು ಭಾರತಕ್ಕೆ ಬಂದೆ. ಇಲ್ಲಿಯೂ ನಮ್ಮ ಹೋರಾಟ ಫಲಿಸಿತು. ಆದರೆ ಇದು ಅಹಿಂಸೆಯನ್ನವಲಂಬಿಸಿಲ್ಲವೆಂದು ನನಗೆ ಮನವರಿಕೆಯಾಯಿತು. ಆಗಲೇ ನನಗೆ ಇದು ತಿಳಿದಿದ್ದರೆ ನಾನು ಹೋರಾಟವನ್ನು ಪ್ರಾರಂಭಿಸುತ್ತಲೇ ಇರಲಿಲ್ಲ. ಆದರೆ ಆ ಕೆಲಸವನ್ನು ನನ್ನಿಂದ ಮಾಡಿಸಬೇಕೆಂದು ದೈವೇಚ್ಛೆಯಿತ್ತು. ಹಾಗಾಗಿ ದೇವರು ನನ್ನ ದೃಷ್ಟಿಯನ್ನು ಮಂದಗೊಳಿಸಿದನು. ಇಲ್ಲಿಯ ಹೋರಾಟ ಅಹಿಂಸಾನಿಷ್ಠವಲ್ಲವಾದುದರಿಂದಲೇ ಇಂದು ನಮ್ಮ ಜನರು ಕೊಲೆಸುಲಿಗೆಗಳನ್ನು ನೋಡಬೇಕಾಗಿ ಬಂದಿದೆ.”

ಸಾರ್ವತ್ರಿಕ ಸೈನ್ಯ ಶಿಕ್ಷಣ

ಭಾರತದ ಯುವಕರಿಗೆ ಒತ್ತಾಯವಾಗಿ ಸೈನಿಕ ಶಿಕ್ಷಣ ಕೊಡುವುದರಿಂದ ಅವರಲ್ಲಿ ಶಿಸ್ತು ಸಂಘಟನೆಗಳು ಹುಟ್ಟುವುವು ಹೇಗೆ?[illegible] ಎಂದು ಗೆಳೆಯರೊಬ್ಬರು ಹೀಗೆ ಕೇಳಿದ್ದರು. ಭಾರತವು ತನ್ನ ಕಾಲ ಮೇಲೆ ತಾನು ನಿಲ್ಲಬೇಕಾದರೆ ಶಿಸ್ತು ಸಂಘಟನೆಗಳು ಅತ್ಯವಶ್ಯವೆಂದು ಗಾಂಧೀಜಿಯೊಪ್ಪಿದರು. ಉಚ್ಚ ನೀತಿಯಿಂದ ಬೇಡವಳಿಯದೇಕು. ಆದರೆ ಸೈನಿಕ ವರ್ಗಗಳಲ್ಲಿ ಹಾಗಿರುವುದೇನು? ಸಾಮಾಜಿಕ ಸಮ್ಮೇಳನಗಳ ಬೆಳವಣಿಗೆಗೆ ಸೈನಿಕ ಶಿಕ್ಷಣ ಬೇಕಾಗುವುದೆಂದು ತಮಗೆ ಗೊತ್ತಿಲ್ಲವೆಂದರು ಗಾಂಧೀಜಿ.

ಆ ಗೆಳೆಯರು ಆರ್ಯುಜದ ಹಿಂದ ಫೌಜನ್ನು ಉದಾಹರಿಸಿದರು. ನೇತಾಜಿಯ ಸೈನಿಕರಿಗೆ ಯುದ್ಧ ಮಾಡುವಾಗ ಅವರು ಜಾತೀಯ ಸಮಸ್ಯೆಗಳನ್ನು ತೃಪ್ತಿಕರವಾಗಿ ಬಿಡಿಸಿದರಲ್ಲವೆ? ಮೊದಲಿನಿಂದ ಕಡೆತನಕ, ಆದ್ಯಿಯಿಂದ ತುದಿವರೆಗೆ ಅವರೆಲ್ಲರೂ ಭಾರತೀಯರಾಗಿದ್ದರು. ಅದಕ್ಕೆ ಸಂಕಟಬಂದಾಗ ವೆಂಕಟರಮಣನೆಂದು ಅವರು ಆ ಕಾಲದಲ್ಲಿ ಹಾಗೆ ನಡೆದುಕೊಂಡರೆಂದರು ಗಾಂಧೀಜಿ. ಆದರೆ ಭಾರತಕ್ಕೆ ಹಿಂದಿರುಗಿದ ಬಳಿಕ ಅವರಿಗೆ ತಮ್ಮ ಆದರ್ಶಾನುಸಾರವಾಗಿ ಇರಲಾಯಿತೆ? ಬ್ರಿಟಿಷ ಸೈನ್ಯ ಪದ್ಧತಿಯಲ್ಲಿ ಗುರ್ಖರು, ಪಠಾಣರು ರಜಪೂತರು, ಸೀಖರು ಮತ್ತು ಮುಸಲ್ಮಾನರನ್ನು ಪರಸ್ಪರವಾಗಿ ದೂರ ಇಟ್ಟಿದ್ದರು. ಸೈನ್ಯ ಪಕ್ಷದವರು ಹೇಳಿದ್ದೆಲ್ಲ ನಿಜವಾದರೆ ನಾವು ನೋಡಿದಂಥ ಕೆಟ್ಟ ಯುದ್ಧಗಳೇ ಸಂಭವಿಸುತ್ತಿರಲಿಲ್ಲ. ಸೈನ್ಯ ಶಿಕ್ಷಣದ ಬಗ್ಗೆ ಎಷ್ಟು ಕಡಿಮೆ ಮಾತಾಡಿದರೆ ಅಷ್ಟು ಉತ್ತಮ. ಶಿಸ್ತು ಇಬ್ಬರಿಗೂ ಸಾಮಾನ್ಯ. ಎಂದಿಗಾದರೂ ಶಾಂತಿಯ ವಿಜಯಗಳು ಯುದ್ಧದ ವಿಜಯಗಳಿಗಿಂತ ಮೇಲೇ ಸರಿ.

— ಸುಶೀಲಾ ನಯ್ಯರ

ಸಹನೆಗಾಗಿ ಬಿನ್ನಹ

ಕಳೆದವಾರ ಹುಚ್ಚನೊಬ್ಬನು ಪ್ರಾರ್ಥನಾಸಭೆಯಲ್ಲಿ ಗೊಂದಲವೆಬ್ಬಿಸಿದನು. ಅವನನ್ನು ಮೆಲ್ಲಗೆ ಆ ಸ್ಥಳದಿಂದ ಹೊರಗೆ ಹಾಕಲಾಯಿತು. ಇಟಲಿಯ ಡಾ. ಲಾಂಬ್ರೋಸೋರವರೆಂದಂತೆ ಇಡಿಯ ಜಗತ್ತೇ ಒಂದು ಹುಚ್ಚರಾಸ್ಪತ್ರೆಯೆಂದೂ ಅದರಲ್ಲಿ ಕೆಲವರು ಹುಚ್ಚರು, ಮತ್ತು ಉಳಿದವರು ಸ್ವಲ್ಪ ಕಡಿಮೆ ಹುಚ್ಚರೆಂದೂ ಗಾಂಧೀಜಿ ನುಡಿದರು. ಎಲ್ಲರೂ ಪರಸ್ಪರರ ನ್ಯೂನತೆಗಳನ್ನು ಸಹಿಸಬೇಕೆಂದು ಗಾಂಧೀಜಿ ನುಡಿದರು. ದುರ್ಬಲ ಮನಸ್ಕರೊಡನೆ ಸ್ನೇಹದಿಂದಿದ್ದರೆ ಪ್ರೀತಿಯು ಅವರನ್ನು ಸಮಾಧಾನ ಪಡಿಸಿ ಅವರ ಹುಚ್ಚನ್ನು ಕಡಿಮೆಮಾಡುತ್ತದೆಂದು ಸಹನಶೀಲರಿಗೆ ತಾನಾಗಿ ತಿಳಿದು ಬರುತ್ತದೆ. ಕ್ರೋಧ ಮತ್ತು ಕ್ರೂರ ಕಾರ್ಯಾಚರಣೆಯಿಂದ ದೌರ್ಬಲ್ಯವು ಮತ್ತಷ್ಟು ಹೆಚ್ಚುತ್ತದೆ.

—ಸುಶಿಲಾ ನಯ್ಯರ

ದುರ್ಬಲರದ್ದಾದರೂ ನಮ್ಮ ಹೋರಾಟವು ಅಹಿಂಸಾಧಾರದಿಂದಲೇ ನಡೆಯುತ್ತಿದೆಯೆಂದು ಗಾಂಧೀಜಿಯು ಹೇಳುತ್ತಿದ್ದರೆಂದು ಗೆಳೆಯರೊಬ್ಬರು ನಡುವೆ ಬಾಯಿ ಹಾಕಿದರು. ಅದಕ್ಕೆ ಗಾಂಧೀಜಿಯು—“ನೀವು ಹೇಳಿದ್ದು ತಪ್ಪು. ದುರ್ಬಲರ ಅಹಿಂಸೆಯೆಂಬಂಥ ವಸ್ತುವೇ ಇಲ್ಲ. ಅಹಿಂಸೆ ಮತ್ತು ದೌರ್ಬಲ್ಯಗಳು ಪರಸ್ಪರ ವ್ಯಾಘಾತ ಪದಗಳು. ನನಗೆ ಇಂದಿನವರೆಗೆ ನಿರಾ[illegible]ತೆಯ ಕಗ್ಗತ್ತಲು ಎಂದೂ ಕವಿದಿದ್ದಿಲ್ಲ. ನಾನು ಹುಟ್ಟುಯೋಧನು; ನನಗೆ ಅಪಜಯವೆಂದರೇನೆಂದು ಗೊತ್ತಿಲ್ಲ. ಆದರೆ ಇಂದು ನಾನು ಕತ್ತಲಲ್ಲಿ ತಡವರಿಸುತ್ತಿದ್ದೇನೆ” ಎಂದರು.

“ಆದರೆ ನೀವೇಕೆ ನಿರಾಶರಾಗಬೇಕು?” ಎಂದು ಗೆಳೆಯರು ಕೇಳಿದರು. ಅದಕ್ಕೆ— “ದೇಶವನ್ನು ಅಹಿಂಸೆಯತ್ತ ತಿರುಗಿಸಲಾಗದಿದ್ದರೆ ಅದರಿಂದ ಅದಕ್ಕೂ ಜಗತ್ತಿಗೂ ಕೇಡು ಸಂಭವಿಸುವುದೆಂದು ನನಗೆ ಸ್ಪಷ್ಟವಾಗಿ ತೋರುತ್ತದೆ. ಸ್ವಾತಂತ್ರ್ಯಕ್ಕೆ ತಲೆಮುಟ್ಟೆದಂತೆಯೇ ಸರಿ—ಅದರ ಅರ್ಥ. ಅದೊಂದು ಸೈನಿಕ ಸರ್ವಾಧಿಕಾರಿತ್ವವೆನಿಸಿದರೂ ಎನಿಸಬಹುದು. ಧೀರ ಅಹಿಂಸಾ ವ್ರತವನ್ನು ಹೇಗೆ ಆಚರಣೆಗೆ ತರಬೇಕೆಂಬುದನ್ನು ಹಗಲೂ ರಾತ್ರಿಯೂ ನಾನು ಯೋಚಿಸುತ್ತಿದ್ದೇನೆ” ಎಂದು ಗಾಂಧೀಜಿಯು ಉತ್ತರ ಕೊಟ್ಟರು.

ಅವರು ಮುಂದುವರಿಸಿದರು—“ಹಿಂದುಸ್ಥಾನದ ಅಹಿಂಸೆಯು ಜಗತ್ತಿಗೆಲ್ಲ ಪರಿಮಳಿಸುತ್ತಿದೆ ಎಂಬುದಾಗಿ ಅಂತರೀಕ್ಷದ ಶಕ್ತಿಯಲ್ಲಿ ನಾನು ಹೇಳಿದೆ. ಆದರೆ ಆ ಸಂದರ್ಭ ಕಾರ್ಯಗತವಾದೀತೆ? ಎಂದು ನಾನು ಈಗ ಪಡೇ ಸಂದೇಹ ಪಡುತ್ತೇನೆ.”

—ಸುಶೀಲಾ ನಯ್ಯರ.

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳ ಸಾರ

ಜಿನ್ನಾ ಸಾಹೇಬರ ಆಶ್ವಾಸನ

ಹೊಸದಿಲ್ಲಿ ೧೩—೭—೪೭

ಜಿನ್ನಾ ಸಾಹೇಬರು ಪತ್ರಿಕಾ ಪರಿಷತ್ತಿನಲ್ಲಿ ಕೊಟ್ಟ ಹೇಳಿಕೆಯ ಸಂಕ್ಷಿಪ್ತ ವರದಿಯನ್ನು ನಾವು ಓದಿರುವುದಾಗಿ ಗಾಂಧೀಜಿ ಹೇಳಿದರು. ಪಾಕಿಸ್ತಾನದಲ್ಲಿ ವಾಸಿಸುತ್ತಿರುವ ಎಲ್ಲ ಅಲ್ಪಸಂಖ್ಯಾತರಿಗೆ ಧರ್ಮದ ಮತ್ತು ಧಾರ್ಮಿಕ ಪೂಜೆಯ ಪೂರ್ಣ ಸ್ವಾತಂತ್ರ್ಯ, ಹಾಗು ವಿತ್ತ ಜೀವಿತಗಳ ಪೂರ್ಣ ಭದ್ರತೆಯ ಆಶ್ವಾಸನವನ್ನು ಜಿನ್ನಾ ಸಾಹೇಬರು ಆ ಪರಿಷತ್ತಿನಲ್ಲಿ ಕೊಟ್ಟದ್ದನ್ನೋದಿ ತಮಗೆ ಸಂತೋಷವಾಗಿದೆ. ಯಾವನೊಬ್ಬ ಧುರೀಣನು ಏನಾದರೊಂದು ಮಾತು ಹೇಳಬಹುದು. ಪ್ರಾಮಾಣಿಕ ರೀತಿಯಿಂದಲೆ ಹೇಳಬಹುದು. ಆದರೆ ಇಷ್ಟರಿಂದಲೆ ಅನುಯಾಯಿಗಳು ಅದರಂತೆ ನಡೆಯುವರೆಂದು ಹೇಳಲಿಕ್ಕೆ ಬರಲಾರದು. ದೇಶವಿಭಜನೆಯಾಗಿ ಹೋಗಿದ್ದರೂ ಇರಿತ, ಕೊಲೆ, ಸುಲಿಗೆ ಮತ್ತು ಕೊಳ್ಳಿಯ ಸುದ್ದಿಗಳು ಎಲ್ಲ ಭಾಗಗಳಿಂದಲೂ ಬರುತ್ತಿರುವುದು ವಿಷಾದಕರವಾಗಿದೆ. ಇನ್ನು ಮುಂದೆ ತಮಗೆ ಅಲ್ಲಿರುವದು ಶಕ್ಯವಿಲ್ಲೆಂದು ಎಣಿಸಿದ್ದರಿಂದ ನನ್ನ ಅನೇಕ ಸಿಂಧೀ ಹಿಂದೂ ಮಿತ್ರರು ಮನೆಮಾರುಗಳನ್ನು ಬಿಟ್ಟು ಹೊರಡುತ್ತಿರುವರು. ಈಗ ಕರಾಚಿಯು ಪಾಕಿಸ್ತಾನದ ಮುಖ್ಯ ನಗರವಾಗಹತ್ತಿದೆ. ಸಿಂಧದಲ್ಲಿಯ ಹಿಂದುಗಳಿಗೆ ರಕ್ಷಣೆ ಕೊಡುವದಕ್ಕಾಗಿ ಅಗಷ್ಟ ೧೫ರ ವರೆಗೆ ದಾರಿ ನೋಡುವಿರೊ ಎಂದು ಜಿನ್ನಾ ಸಾಹೇಬರನ್ನು ನಾವು ಕೇಳಬಯಸುತ್ತೇವೆ. ಅನ್ಯಾಯದ ಅಂಜಿಕೆಯಿಂದ ಪಾಕಿಸ್ತಾನದಲ್ಲಿಯ ತನ್ನ ಮನೆಯನ್ನು ಬಿಟ್ಟು ಯಾವನೊಬ್ಬ ಹಿಂದುವು ಹೊರಹೊರಟಿದ್ದಾದರೆ ಜಿನ್ನಾ ಸಾಹೇಬರ ಸ್ಥಳದಲ್ಲಿ ನಾವು ಇದ್ದರೆ ತಮಗೆ ಅತೀವ ದುಃಖವಾಗುತ್ತಿದ್ದಿತು. ನಾಯದೇ ಅಜಂದು ಪಾಕಿಸ್ತಾನದ ಗವರ್ನರಜನರಲ್‌ರಾಗುವವರಿದ್ದರೂ ತಮ್ಮ ಮಂತ್ರಿಗಳ ಸಲಹೆಯನ್ನು ಕೇಳದೆ ಅವರು ಏನನ್ನೂ ಮಾಡಲಾರರೆಂಬುದು ನಿಜ. ಆದರೂ ಲೀಗಿನ ಮೇಲೆ ಇರುವ ತಮ್ಮ ಅಧಿಕಾರವನ್ನು ಅವರು ಬಿಟ್ಟುಗೊಡುವರೆಂದು ಇದರ ಅರ್ಥವಲ್ಲ; ತದ್ವಿರುದ್ಧವಾಗಿ ಅವರ ರಾಜಕೀಯ ಅಧಿಕಾರ ಮತ್ತಷ್ಟು ಹೆಚ್ಚಿದೆ. ಅದುದರಿಂದ ನಾವು ಯಾವ ವಿಭಾಗದ ಗವರ್ನರಜನರಲ್‌ರಾಗಿ ಬರಲಿ ಆ ವಿಭಾಗದಲ್ಲಿ ಸಿಂಧದಲ್ಲಿ ಅಥವಾ ಬೇರೆ ಯಾವ ಭಾಗದಲ್ಲಿಯೂ ಈಗ ನಡೆಯುತ್ತಿವೆಯೆಂದು ಹೇಳಲಾಗುತ್ತಿರುವ ಘಟನೆಗಳನ್ನು ನಿಲ್ಲಿಸುವದು ಅವರ ಕರ್ತವ್ಯವಾಗಿದೆ. ಯಾವನೊಬ್ಬ ಮನುಷ್ಯನ ಇಲ್ಲವೆ ಸರಕಾರದ ಪರೀಕ್ಷೆ ಕೃತಿಗಳಿಂದಲೆ ಆಗತಕ್ಕದ್ದು. ಹಿಂದುಸ್ತಾನಕ್ಕೂ ಇದೇ ಮಾತು ಅನ್ವಯಿಸುತ್ತದೆ. ಇನ್ನು ಮುಂದೆ ನಾವು ಅಲ್ಲಿರಬಲ್ಲೆವೋ ಎಂಬ ಬಗ್ಗೆ ಸಂಯುಕ್ತಪ್ರಾಂತದಲ್ಲಿಯ ಕೆಲ ಮುಸಲ್ಮಾನರಿಗೆ ಭಯವುಂಟಾಗಿದೆ. ಸಂಯುಕ್ತಪ್ರಾಂತದಲ್ಲಿಯೆ ನೀವು ಯಾವಾಗಲೂ ಇರಬಲ್ಲಿರಿ. ಅಲ್ಲಿ ಯಾವದೇ ಬಗೆಯ ಅಂಜಿಕೆ ಅಳುಕುಗಳಿಗೆ ಅವಕಾಶವಿಲ್ಲ ಎಂಬುದಾಗಿ ಯುಕ್ತಪ್ರಾಂತದಲ್ಲಿಯ ಮುಸಲ್ಮಾನರಿಗೆ ಎಲ್ಲ ವಿಧದ ಆಶ್ವಾಸನ ಕೊಡುವದು ಆ ಸರಕಾರದ ಕರ್ತವ್ಯವಾಗಿದೆ. ಬ್ರಿಟಿಷರು ಒಡಕು ಹುಟ್ಟಿಸಿ ಆಳುವ ತಮ್ಮ ಧೋರಣದಿಂದಲೆ ಅಷ್ಟು ಕಾಲವನ್ನು ಸಾಗಿಸಿದರು. ಆದರೆ ಅವರ ಅಧಿಕಾರದೀಗ ಕೊನೆಗೊಂಡಿದ್ದು ಆ ಪಕ್ಷಪಾತ ಧೋರಣದ ಕೊನೆಯೂ ಆದಂತಾಯಿತು. ಎಲ್ಲಿಯಾದರೂ ಅಲ್ಪಸಂಖ್ಯಾತರಿಗೆ ನೌಕರಿಯಲ್ಲಿ ಇಲ್ಲವೆ ಅಧಿಕಾರಸ್ಥಳಗಳಲ್ಲಿ ಸ್ವಲ್ಪ ಹೆಚ್ಚು ಪಾಲು ದೊರೆತದ್ದಾದರೆ ಹಾನಿಯೇನು? ಅಲ್ಪಸಂಖ್ಯಾತರಿಗೆ ಸಂಪೂರ್ಣ ನ್ಯಾಯ ಸಿಕ್ಕಲಿಕ್ಕೆ ಬೇಕು. ಯೋಗ್ಯತೆ ಮತ್ತು ಕಾರ್ಯಕ್ಷಮತೆ ಒರೆಗಲ್ಲಾಗಿರಬೇಕು. ತಮ್ಮ ಸ್ವಾರ್ಥಸಾಧನೆಗಾಗಿ ಬ್ರಿಟಿಷರು ಅನೇಕ ವರುಷಗಳ ವರೆಗೆ ಅಲ್ಪಸಂಖ್ಯಾತರಿಗೆ ಕೊಡುತ್ತ ಬಂದ ಅಧಿಕಾರಸ್ಥಳಗಳಿಗಾಗಿ ಇನ್ನು ಯಾರೂ ಮೋಹಿತರಾಗಲಾರರು. ಇದೆಲ್ಲ ಒಂದು ಬಗೆಯ ಲಂಚವಾಗಿದ್ದಿತೆಂದು ಅವರೆಲ್ಲ ತಿಳಿದುಕೊಳ್ಳತಕ್ಕದ್ದು. ಏನೇ ಆದರೂ ಬ್ರಿಟಿಷರು ಅಸ್ಪೃಶ್ಯತೆಯನ್ನು ಹೋಗಲಾಡಿಸಲಿಲ್ಲ. ದಕ್ಷಿಣ ಹಿಂದುಸ್ತಾನದಲ್ಲಿಯ ಎಲ್ಲ ಪ್ರಾಚೀನ ದೇವಾಲಯಗಳನ್ನು ಹರಿಜನರಿಗೆ ಮುಕ್ತ ಮಾಡಿದವರು ಹಿಂದುಗಳೇ. ಅಸ್ಪೃಶ್ಯತೆಯ ಕಲಂಕವನ್ನು ಹೋಗಲಾಡಿಸಿದ ಹೊರತು ಹಿಂದು ಧರ್ಮವು ಶಾಶ್ವತವಾಗಿ ಬಾಳಬಲ್ಲದೆಂದು ತಮಗೆನಿಸಿದ್ದರಿಂದ ಮೇಲಿನ ಸಂಗತಿಯಿಂದ ತಮಗೆ ಸಂತೋಷವಾಗಿದೆ. ಹೊಸ ಹಿಂದುಸ್ತಾನದಲ್ಲಿ ಯಾರಿಗೂ ಯಾವದೇ ಬಗೆಯ ವಿಶಿಷ್ಟ ಹಕ್ಕನ್ನು ಕೊಡತಕ್ಕದ್ದಲ್ಲ. ದೀನ ದರಿದ್ರರು ಪತ್ತಿಕ್ಕಲ್ಪಟ್ಟವರು ಮತ್ತು ಅಶಕ್ತರಿಗಾಗಿಯೇ ಎಲ್ಲ ಬಗೆಯ ಗಮನವನ್ನು ಕೊಡತಕ್ಕದ್ದು. ಹರಿಜನರಿಗಾಗಿ ಹೆಚ್ಚು ಹಣ ವೆಚ್ಚ ಮಾಡಲ್ಪಟ್ಟರೆ ಬ್ರಾಹ್ಮಣರು ಹೊಂದುಕೊಳ್ಳಬಾರದು(?). ಅದೇ ಕಾಲಕ್ಕೆ ಬ್ರಾಹ್ಮಣನಿರುವನೆಂದು ಅವನನ್ನು ಕೆಳಗೆ ದಬ್ಬಲು ಯಾವ ಬಗೆಯಿಂದಲೂ ಪ್ರಯತ್ನಿಸಲಾಗದು. ನಿಜವಾಗಿಯೂ ಬ್ರಾಹ್ಮಣರು ಅತ್ಯಲ್ಪಸಂಖ್ಯಾತರು. ಪಾಕಿಸ್ತಾನ ಮತ್ತು ಹಿಂದುಸ್ತಾನಗಳೆರಡರಲ್ಲಿಯೂ ವಿಶುದ್ಧ ಮತ್ತು ಪೂರ್ಣ ನ್ಯಾಯ ಸಿಕ್ಕಬೇಕಾದುದು ಅವಶ್ಯವಾಗಿದೆ.

ಸೈನ್ಯ ವಿಭಜನೆ

ಗಾಂಧೀಜಿಯವರು ಸೈನ್ಯವಿಭಜನೆಯ ಬಗ್ಗೆ ತೀವ್ರ ಭಾವನೆಯಿಂದ ಮತ್ತೆ ಉಲ್ಲೇಖ ಮಾಡಿದರು. ಪರಕೀಯ ದಾಳಿಯನ್ನೆದುರಿಸಲು ನಾವೆಲ್ಲ ಐಕ್ಯದಿಂದ ಏಕೆ ಇರಬಾರದೆಂಬುದೇ ತಿಳಿಯದಾಗಿದೆ. ಸದ್ಯದಲ್ಲಿ ನಡೆದ ಸೈನ್ಯ ವಿಭಜನೆಯ ರೀತಿಯಿಂದ ಎರಡೂ ಸೈನ್ಯಗಳಲ್ಲಿ ಅಂತರಿಕ ಹೋರಾಟವೂ ಪ್ರಾರಂಭವಾಗಬಹುದು. ಇವೆರಡೂ ಸೈನ್ಯಗಳು ಪರಸ್ಪರ ಶತ್ರುಗಳೆಂದೇ ಭಾವಿಸಬಲ್ಲವು; ಹಾಗಾದರೆ ಅದೊಂದು ಅತ್ಯಂತ ದುಃಖದ ಸಂಗತಿಯಾಗಬಹುದು. ಸೈನ್ಯ ವಿಭಜನೆಯಿಂದ ಸಂರಕ್ಷಕ ಸೈನ್ಯದ ಶಕ್ತಿ ಕುಗ್ಗುವದು. ಈ ಬಗ್ಗೆ ಆಳವಾಗಿ ವಿಚಾರ ಮಾಡುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಕಳೆದ ೩೦ ವರ್ಷಗಳಲ್ಲಿ ನಾವು ಅಹಿಂಸಾ ಪಾಠವನ್ನು ಕಲಿತಿರದಿದ್ದರೂ ಬ್ರಿಟಿಶರ ಗುಲಾಮರಷ್ಟೇ ಅಲ್ಲ ಬೇರೆ ಯಾರ ಗುಲಾಮರಾಗಿಯೂ ಉಳಿಯಲಾರೆವೆಂಬುದನ್ನು ಕಲಿತಿದ್ದುಂಟು. ಅದನ್ನು ಕಲಿತಿದ್ದರೆ ಎಲ್ಲಿಯೂ ಸೈನ್ಯಗಳ ಅವಶ್ಯಕತೆಯೇಕೆ? ನವಖಾಲಿಯಲ್ಲಿಯ ಹಿಂದುಗಳಿಗೆ ಮತ್ತು ಬಿಹಾರದಲ್ಲಿಯ ಮುಸಲ್ಮಾನರಿಗೆ ಈ ಪಾಠವನ್ನೆ ಕಲಿಸಲು ಪ್ರಯತ್ನಿಸುತ್ತಿರುವೆವು. ನಮ್ಮಲ್ಲಿ ಅಷ್ಟು ಧೈರ್ಯವಿದ್ದರೆ ದಾಳಿಯನ್ನು ಹಿಂಸಾಮಾರ್ಗದಿಂದ ಎದುರಿಸಿದರೂ ತಮ್ಮದೇನು ಅಡ್ಡಿಯಿಲ್ಲ. ಅಹಿಂಸೆಯಿಂದಲೆ ದಾಳಿಯನ್ನೆದುರಿಸಬೇಕೆಂದು ನಾವು ಪ್ರತಿಪಾದಿಸುವದು ಸ್ವಾಭಾವಿಕ. ಏಕೆಂದರೆ ಇದರಲ್ಲಿ ಪರಮಾತ್ಮನೇ ತಮ್ಮ ಸರ್ವರಕ್ಷಕನೆಂಬ ಭಾವನೆಯಿದೆ. ಆದರೆ ಹಿಂಸಾತ್ಮಕ ಪ್ರತೀಕಾರದಲ್ಲಿ ಖಡ್ಗದ ಬಲುಮೆಗೇ ಹೆಚ್ಚು ಮಹತ್ವ. ನಿಜವಾಗಿ ಅದು ಸಂರಕ್ಷಣೆಗೆ ತೀರ ನಿರುಪಯುಕ್ತವಾದ ಅಸ್ತ್ರ.

ಮೂಲಭೂತ ಮತಭೇದ

ಹೊಸದಿಲ್ಲಿ ೧೪—೭—೪೭

ನನ್ನ ಭಾಷಣಗಳು ಇತ್ತೀಚೆ ಬಹಳ ನಿರಾಶಾಜನಕವಾಗಿವೆಯೆಂದು ಹೇಳಲಾಗುತ್ತದೆ. ನಾನು ಮಾತಾಡಲೇಬಾರದೆಂದು ಕೆಲವರು ಸೂಚಿಸುತ್ತಿರುವರು. ತನ್ನ ಚಿತ್ರವನ್ನು ತನ್ನ ಅಂಗಡಿಯಲ್ಲಿ ಗಾಜು ಇಲ್ಲದ ಒಂದು ಕಪಾಟಿನಲ್ಲಿ ತಮಗೆ ಸರಿದೋರದ ಭಾಗವನ್ನು ತೋರಿಸಬೇಕೆಂದು ಹೇಳಿ ಇಟ್ಟ ಚಿತ್ರಕಾರನೊಬ್ಬನ ಕತೆ ಈ ಸಲಹೆಗಾರರ ಸಲಹೆಯಿಂದ ನನ್ನ ಸ್ಮರಣೆಗೆ ಬರುತ್ತಿದೆ. ಪರಿಣಾಮವೇನಾಯಿತು? ಚಿತ್ರವೆಲ್ಲ ಸಾರಿಸಲ್ಪಟ್ಟಂತಾಯಿತು. ಎಲ್ಲ ಪಕ್ಷಪಂಗಡಗಳನ್ನು ಸಂತೋಷಪಡಿಸಬೇಕೆಂದು ನಿರರ್ಥಕವಾಗಿ ಅವನು ಪ್ರಯತ್ನ ಮಾಡಿದಂತಾಯಿತು. ಅದು ಅಶಕ್ಯವೂ ಎಂದೆನಿಸಿತು. ಅದುದರಿಂದ ನಾನು ಒಳ್ಳೆಯ ಚಿತ್ರವನ್ನೆ ತೆಗೆದಿರುವದಾಗಿ ಅವನಿಗೆ ಸಮಾಧಾನವೆನಿಸಿತು. ತನ್ನ ಕಲಾತ್ಮಕ ದೃಷ್ಟಿಗೆ ಸರಿಹೋಗುವ ಚಿತ್ರವನ್ನು ತೆಗೆಯುವದಷ್ಟೇ ಅವನ ಕರ್ತವ್ಯ. ತಮ್ಮದೂ ಅದೇ ಬಗೆಯ ಕರ್ತವ್ಯವೆಂದು ಗಾಂಧೀಜಿ ನುಡಿದರು. 'ಮಾತಾಡಬೇಕೆಂದು ನಾನು ಎಂದೂ ಮಾತಾಡುವದಿಲ್ಲ. ಜನತೆಗೆ ಏನಾದರೂ ಹೇಳಲೇಬೇಕಾಗಿದೆಯೆಂದು ನನಗೆ ಎನಿಸಿದಾಗಲೆ ನಾನು ಮಾತಾಡುವೆ. ನನ್ನ ಅತಿ ಆಪ್ತ ಸ್ನೇಹಿತರು ಮಾಡಿದ ಮತ್ತು ಮಾಡುತ್ತಿರುವದಕ್ಕೆ ನನ್ನ ಒಪ್ಪಿಗೆಯಿಲ್ಲವೆಂಬುದು ನಿಜ. ನಾನು ದಿಲ್ಲಿಯಲ್ಲಿರುವಾಗ ಸುತ್ತು ನಡೆಯುತ್ತಿರುವ ಘಟನೆಗಳ ಬಗ್ಗೆ ನನ್ನ ಅಭಿಪ್ರಾಯ ವ್ಯಕ್ತಪಡಿಸಬೇಕಾದಾಗ ಅದನ್ನು ವ್ಯಕ್ತಪಡಿಸದೆ ನಾನಿರಲಾರೆ. ಮತಭೇದಗಳಾದರೂ ಯಾವುವು? ಅವುಗಳನ್ನು ಪೃಥಕ್ಕರಿಸಿ ನೋಡಿದ್ದಾದರೆ ಒಂದೇ ಮೂಲಭೂತ ಮತಭೇದವಿರುವದೆಂದು ಗೊತ್ತಾಗುವದು. ಉಳಿದವುಗಳೆಲ್ಲ ಅದರಲ್ಲಿ ಸಮಾವಿಷ್ಟವಾಗುವವು. ಅಹಿಂಸೆ ನನ್ನ ಧ್ಯೇಯ. ಕಾಂಗ್ರೆಸ್ಸಿನ ಧ್ಯೇಯ ಅದೆಂದೂ ಆಗಿರಲಿಲ್ಲ. ಕಾಂಗ್ರೆಸ್ಸು ಅಹಿಂಸೆಯನ್ನು ಧೋರಣವೆಂದೇ ಯಾವಾಗಲೂ ಇಟ್ಟುಕೊಂಡಿದೆ. ಆ ಧೋರಣ ಎಲ್ಲಿಯ ವರೆಗೆ ಉಳಿಯುವದೊ ಅಲ್ಲಿಯ ವರೆಗೆ ಮಾತ್ರ ಅದು ಧ್ಯೇಯವಾಗಿ ಪರಿಣಮಿಸುವದು. ಅನಂತರ ಉಳಿಯಲಾರದು. ಅವಶ್ಯವೆನಿಸಿದಾಗ ಕಾಂಗ್ರೆಸ್ಸು ಆ ಧೋರಣೆಯನ್ನು ಬದಲು ಮಾಡಿಕೊಳ್ಳಬಲ್ಲದು. ಧ್ಯೇಯದಲ್ಲಿ ಎಂದಿಗೂ ಬದಲಾವಣೆಯಾಗಲಾರದು. ಕಾಂಗ್ರೆಸ್ ಘಟನೆಯನ್ನು ಯ ಧೋರಣೆಯಲ್ಲಿ ಬದಲಾವಣೆಯಾಗಿರದಿದ್ದರೂ ಆಚರಣೆಯಲ್ಲಿ ಮಾತ್ರ ಆ ಧೋರಣೆ ಬದಲಾಗಿ ಹೋಗಿದೆ. ತಂತ್ರಜ್ಞರು ಯಾವುದಾದರೊಂದು ಮಾತಿನ ಬಗ್ಗೆ ವಾದಿಸಬಹುದು. ನೀವು ನಾವು ಹಾಗೆ ಮಾಡಲಾರೆವು, ಮಾಡತಕ್ಕದ್ದಲ್ಲ. ಸದ್ಯದ ಕಾಂಗ್ರೆಸ ನಿರ್ಮಾಪಕರು ತಮ್ಮ ಧೋರಣೆಯಲ್ಲಿ ಬದಲಾವಣೆಯೇಕೆ ಮಾಡಬಾರದು? ಕಾಯದೆ ತನ್ನ ಕ್ರಮವನ್ನು ತೆಗೆದುಕೊಳ್ಳಬಹುದು. ಕಾಂಗ್ರೆಸ ಘಟನೆಯಲ್ಲಿ ಶಾಂತಮಾರ್ಗದಿಂದ ಎಂಬ ಶಬ್ದವಿದೆ ಅಹಿಂಸೆಯಿಂದ ಎಂಬ ಶಬ್ದವಿಲ್ಲೆಂಬುದನ್ನೂ ಈ ಸಮಯದಲ್ಲಿ ಲಕ್ಷಿಸತಕ್ಕದ್ದು.

ಮುಂಬಯಿಯಲ್ಲಿ ೧೯೩೪ರಲ್ಲಿ ಕಾಂಗ್ರೆಸ ಅಧಿವೇಶನ ಕೂಡಿದಾಗ ಶಾಂತತೆ ಶಬ್ದದ ಬದಲು ಅಹಿಂಸೆ ಎಂಬ ಶಬ್ದವನ್ನು ಸೇರಿಸಬೇಕೆಂದು ಪ್ರಯತ್ನಿಸಿದೆ. ಆದರೆ ಯಶಸ್ವಿಯಾಗಲಿಲ್ಲ. ಅದುದರಿಂದ ಶಾಂತತೆ ಎಂಬ ಶಬ್ದಕ್ಕೆ ಅಹಿಂಸೆ ಎಂಬ ಶಬ್ದಕ್ಕಿಂತ ಕಡಿಮೆ ಅರ್ಥವನ್ನು ಕದಾಚಿತ್ ಕೊಡಬಹುದಾಗಿದೆ. ನನಗೇನು ಹಾಗೆ ತೋರುವದಿಲ್ಲ. ಆದರೆ ನನ್ನ ಅಭಿಪ್ರಾಯ ಅಪ್ರಾಸಂಗಿಕವಾಗಿದೆ. ಆ ಶಬ್ದಗಳಲ್ಲಿ ಏನಾದರೂ ಭೇದವಿದ್ದರೆ ಅದನ್ನು ನಿರ್ದಿಷ್ಟಪಡಿಸುವದು ತಜ್ಞರ ಕೆಲಸ. ಕಾಂಗ್ರೆಸು ಇಂದು ಆಚರಿಸುತ್ತಿರುವದು ಅಹಿಂಸೆಯ ಶಬ್ದಕ್ಕೆ ಯಾವ ಅರ್ಥವನ್ನು ಭಾವಿಸಲಾಗುತ್ತಿದೆಯೊ ಅಂತಹದಾಗಿರುವದಿಲ್ಲೆಂಬುದನ್ನು ನೀವೂ ನಾವೂ ತಿಳಿದುಕೊಳ್ಳುವದು ಅವಶ್ಯವಾಗಿದೆ. ಕಾಂಗ್ರೆಸ್ಸು ಅಹಿಂಸೆಯ ಧೋರಣಕ್ಕೆ ಬದ್ಧವಾಗಿದ್ದರೆ ಅದಕ್ಕೆ ಬೆಂಬಲಿಸುವಂಥ ಸೈನ್ಯದ ಅವಶ್ಯಕತೆಯುಳಿಯಲಾರದು. ಆದರೆ ಅದು ಸೈನ್ಯವನ್ನಿಟ್ಟುಕೊಳ್ಳಬಯಸುತ್ತದೆ. ಜನತೆ ನನ್ನ ಮಾತು ಕೇಳದಿದ್ದರೆ ಅದು ಅಧಿಕಾರಿಗಳನ್ನು ಹಿಂದಕ್ಕಿಟ್ಟು ಹಿಂದುಸ್ತಾನದಲ್ಲಿ ಪಂಡಿನಾಳಿಕೆಯನ್ನು ಪ್ರಸ್ಥಾಪಿಸಬಹುದು. ನನ್ನ ಮಾತನ್ನು ಅವರು ಎಂದಿಗೂ ಕೇಳಲಾರರೆಂಬ ಆಶೆಯನ್ನೆ ನಾನು ಬಿಟ್ಟುಗೊಡಬೇಕೇ? ನನ್ನಲ್ಲಿ ಉಸಿರಿರುವವರೆಗೆ ನಾನು ಆ ಆಶೆಯನ್ನು ಬಿಟ್ಟುಗೊಡಲಾರೆ. ಜನರು ನನ್ನ ಅಹಿಂಸಾ ಶೋಕಗೀತವನ್ನು ಕೇಳಲು ಬಯಸದಿದ್ದರೆ ಸಾರ್ವಜನಿಕರಿಗಾಗಿ ಮಾತಾಡುವದರಿಂದ ಯಾವ ನನ್ನ ಟೀಕಾಕಾರನೂ ನನ್ನನ್ನು ಪರಾವೃತ್ತ ಮಾಡಲಾರನು.

ಒಂದು ಮಾತನ್ನು ನಾನು ಸ್ಪಷ್ಟ ಮಾಡಬಯಸುವೆ. ಕಳೆದ ಮೂವತ್ತು ವರುಷಗಳಿಂದಲೂ ನಾವು ಆಚರಿಸುತ್ತ ಬಂದುದು ಅಹಿಂಸಾತ್ಮಕ ಪ್ರತೀಕಾರವಲ್ಲ ಆದರೆ ಕೇವಲ ನಿಷ್ಕ್ರಿಯ ಪ್ರತೀಕಾರ. ಸಶಸ್ತ್ರ ಪ್ರತೀಕಾರ ಮಾಡಲು ನಮ್ಮ ಇಚ್ಛೆಯಿಲ್ಲೆಂದು ನಾವು ಅದನ್ನು ಆಚರಿಸಲಿಲ್ಲೆಂದಲ್ಲ ಆದರೆ ಅದಕ್ಕೆ ನಮ್ಮ ಶಕ್ತಿಯಿರಲಿಲ್ಲೆಂದು ನಾವು ನಿಷ್ಕ್ರಿಯ ಪ್ರತೀಕಾರವನ್ನು ವಹಿಸಿದೆವು. ಕೇವಲ ವಜ್ರಹೃದಯಿಗಳು ಆಚರಿಸಬಲ್ಲ ಅಹಿಂಸೆಯ ಉಪಯೋಗ ನಮಗೆ ಗೊತ್ತಿದ್ದರೆ ಸ್ವತಂತ್ರ ಹಿಂದುಸ್ತಾನದ ತೀರ ಭಿನ್ನವಾದ ಚಿತ್ರವನ್ನೇ ಜಗತ್ತಿಗೆ ತೋರಿಸುತ್ತಿದ್ದೆವು. ಸದ್ಯದಂಥ ಹಿಂದುಸ್ತಾನವನ್ನು ಎರಡು ಹೋಳು ಮಾಡಿ ಒಂದು ತುಂಡು ಮತ್ತೊಂದು ತುಂಡಿನ ಬಗ್ಗೆ ತೀರ ಸಂಶಯವೃತ್ತಿಯನ್ನು ತಾಳಿದ್ದು, ಉಪವಾಸ ಬಳಲುತ್ತಿರುವ ಕೋಟ್ಯವಧಿ ನಗ್ನ ಜನರ ಆಹಾರ ಮತ್ತು ಬಟ್ಟೆಗಳ ಬಗ್ಗೆಯೂ ಸಮಾಧಾನಕರ ರೀತಿಯಿಂದ ವಿಚಾರ ಮಾಡಲು ಸಮರ್ಥರಾಗದಷ್ಟು ಪರಸ್ಪರ ತಿಕ್ಕಾಟದಲ್ಲಿ ಬಿದ್ದಿರುವರು. ಈ ಕೋಟ್ಯವಧಿ ಜನರಾದರೆ ಜೀವನಕ್ಕೆ ಬೇಕಾಗುವ ಅವಶ್ಯಕತೆಗಳ ರೂಪದಲ್ಲಿ ಕಾಣುತ್ತಿರುವ ಏಕಮೇವ ಪರಮಾತ್ಮನ ಧರ್ಮದ ಹೊರತು ಬೇರೆ ಯಾವ ಧರ್ಮವನ್ನೂ ಅರಿಯರು. ಒಬ್ಬರ ಕತ್ತನ್ನು ಮತ್ತೊಬ್ಬರು ಹೀಗೆ ಪರಿಣಾಮಕಾರಕ ರೀತಿಯಲ್ಲಿ ಕೊಯ್ಯಬಲ್ಲರೆಂಬ ಸಿನೇಮಾದಲ್ಲಿಯ ಚಿತ್ರಗಳಂತಹ ರಕ್ತಮಯ ಹೋರಾಟ ಅವರಿಗಾಗಿ ಇರುವದಿಲ್ಲ.

ಬಂಗಾಲ ಸಮಸ್ಯೆ

ಹೊಸದಿಲ್ಲಿ ೧೫—೭—೪೭

ಬಂಗಾಲಿ ಮಿತ್ರರು ಹಾಕಿದ ಕೆಲ ಪ್ರಶ್ನೆಗಳನ್ನು ಗಾಂಧೀಜಿ ಉಲ್ಲೇಖಿಸಿದರು. ಬಂಗಾಲವು ಈಗ ಇಬ್ಭಾಗವಾಗಿಬಿಟ್ಟದ್ದರಿಂದ ಪಶ್ಚಿಮ ಬಂಗಾಲದಲ್ಲಿಯ ಹಿಂದುಗಳು ತಮ್ಮನ್ನು ಮರೆತುಬಿಡುವರು. ಮತ್ತು ಪೂರ್ವ ಬಂಗಾಲದಲ್ಲಿಯ ಹಿಂದುಗಳು ಅಶಕ್ತರಾಗಿರುವರೆಂದು ಪೂರ್ವಬಂಗಾಲದಲ್ಲಿಯ ಹಿಂದುಗಳಿಗೆ ಅಂಜಿಕೆ. ಇಂಥ ಭೀತಿಗಳ ಅರ್ಥ ತಮಗೆಂದೂ ತಿಳಿಯದೆಂದು ಗಾಂಧೀಜಿ ಹೇಳಿದರು. ಎಲ್ಲರೂ ಎಂತೆಂದಿಗೂ ಹಿಂದೀಯರೇ. ಅವರು ಎಲ್ಲಿಯೇ ಇರಲಿ, ಯಾವದೇ ಧ್ಯೇಯವನ್ನು ಅವರು ಇಟ್ಟುಕೊಂಡಿರಲಿ. ಯಾವ ವರ್ಗ ಇಲ್ಲವೆ ಪ್ರಾಂತಕ್ಕೆ ಅವರು ಸಂಬಂಧಿಸಿರಲಿ ಎಲ್ಲರೂ ಭಾರತೀಯರೇ. ಧರ್ಮವೆಂಬುದು ಕೇವಲ ವೈಯಕ್ತಿಕ ವಿಷಯ. ಪ್ರತಿಯೊಬ್ಬನೂ ತನಗೆ ಸರಿದೋರುವ ರೀತಿಯಿಂದ ಪರಮಾತ್ಮನನ್ನು ಮುಟ್ಟಬಲ್ಲನು. ಆದರೆ ವಿಭಜನೆಯ ವಿಷವು ದೇಶದಲ್ಲಿ ಆಳವಾಗಿ ಬೇರೂರಿದೆ. ನಾವು ನವಖಾಲಿಯಲ್ಲಿರುವಾಗ ಬೇರೆ ಕಡೆಯಲ್ಲಿಯಂತೆ ಅಲ್ಲಿಯೂ ಮನೆಯಲ್ಲಿದ್ದಂತೇ ಇದ್ದೆವು. ಉದಾಹರಣೆಗಾಗಿ ಪೂರ್ವ ಬಂಗಾಲದಲ್ಲಿಯ ಮುಸಲ್ಮಾನರು ಮತ್ತು ಬಿಹಾರದಲ್ಲಿಯ ಹಿಂದುಗಳು ಯಾವಾಗಲೂ ಹುಚ್ಚಮನುಷ್ಯನಂತೆ ನಡೆಯುವರೇ? ಇಂಥ ಅಂಜಿಕೆ ನನ್ನಲ್ಲಿ ಸ್ವಲ್ಪೂ ಇರುವದಿಲ್ಲ. ವಿಭಜನೆ ತಮಗೆ ಸೇರದಿದ್ದರೂ ಅದೀಗ ಬಂದುಬಿಟ್ಟದ್ದರಿಂದ ಅದನ್ನು ಸ್ವಾಗತಿಸಬೇಕೆಂದು ನಾವು ಒತ್ತಿ ಹೇಳಬೇಕಾಗಿದೆ. ಒಳ್ಳೆಯ ನಡತೆಯಿಂದ ಅನಿಷ್ಟವನ್ನು ಕಡಿಮೆ ಮಾಡುವದು ಮತ್ತು ಆ ಅನಿಷ್ಟದಿಂದಲೆ ಕೊನೆಗೆ ಇಷ್ಟವನ್ನು ಪಡೆಯುವದು ಯಾವಾಗಲೂ ಶಕ್ಯವಿದೆ. ವಿಭಜನೆಯಾದ ಬಳಿಕವೂ ಪೂರ್ವ ಮತ್ತು ಪಶ್ಚಿಮ ಬಂಗಾಲಗಳಲ್ಲಿಯ ಜನರು ಬಂಗಾಲಿಗಳಾಗಿಯೇ ಉಳಿಯುವರು ಮತ್ತು ಅದೇ ಭಾಷೆಯನ್ನಾಡುವರು. ಪಶ್ಚಿಮ ಬಂಗಾಲದಲ್ಲಿಯ ಹಿಂದುಗಳು ಅಲ್ಲಿನ ಮುಸಲ್ಮಾನರ ಗೂಡ ಮಿತ್ರರಂತೆ ಇರಲಿಕ್ಕೆ ಬೇಕು. ಅವರು ಹಾಗೆ ನಡೆದುಕೊಂಡದ್ದಾದರೆ ಪೂರ್ವ ಬಂಗಾಲದಲ್ಲಿಯ ಮುಸಲ್ಮಾನರು ಅಲ್ಲಿನ ಹಿಂದು ಬಾಂಧವರಗೂಡ ಅದೇ ಬಗೆಯ ಮಿತ್ರತ್ವದಿಂದ ನಿಶ್ಚಿಂತವಾಗಿ ಇರಬಲ್ಲರು. ಯಾರೂ ಎರಡನೆಯವರು ತಮ್ಮ ಶತ್ರುವೆಂದು ತಿಳಿಯಬಾರದು. ಈ ರೀತಿ ಆಚರಿಸುವದರಿಂದಲೆ ಅಂಜಿಕೆಯನ್ನು ಹಾರಿಸಿಬಿಡಬಹುದಾಗಿದೆ. ಪಶ್ಚಿಮ ಬಂಗಾಲ ಸರಕಾರ ತಮ್ಮ ಕೈಯಲ್ಲಿರುವದರಿಂದ ಪಶ್ಚಿಮ ಬಂಗಾಲದಲ್ಲಿಯ ಹಿಂದುಗಳು ಪೂರ್ವ ಬಂಗಾಲದಲ್ಲಿಯ ಹಿಂದುಗಳಿಗೆ ಹೆಚ್ಚು ಸಹಾಯ ಮಾಡಲು ಸಮರ್ಥರಾಗಬಲ್ಲರು. ಬಂಗಾಲ ಪ್ರಾಂತಿಕ ಕಾಂಗ್ರೆಸ್ ಸಮಿತಿಯನ್ನೂ ಎರಡೂ ಭಾಗಗಳನ್ನಾಗಿ ವಿಭಜಿಸಲಾಗುವದೇ ಎಂದು ಕೇಳಲಾಗುತ್ತಿದೆ. ಸ್ಪಷ್ಟ ನಕಾರಾತ್ಮಕ ಉತ್ತರ ತಮ್ಮದಾಗಿದೆ. ಅಲ್ಲಿನ ಕಾಂಗ್ರೆಸ್ ಸಮಿತಿಯು ಬಂಗಾಲದ ವಿಭಜನೆಯಾಗಿದೆಯೆಂದು ಎಂದಿಗೂ ತಿಳಿದುಕೊಳ್ಳಬಾರದು. ಬಂಗಾಲ ಪ್ರಾಂತಿಕ ಕಾಂಗ್ರೆಸ ಸಮಿತಿಯು ಹಿಂದಿನಂತೆಯೆ ಕೆಲಸ ಮಾಡಬಲ್ಲದು. ಈ ಕೇಂದ್ರ ಸಮಿತಿಯ ಕಕ್ಷೆಯಲ್ಲಿ ಎರಡು ಉಪಸಮಿತಿಗಳನ್ನು ರಚಿಸಬಹುದು. ಕಾಂಗ್ರೆಸ್ಸು ರಾಷ್ಟ್ರೀಯ ಸಂಸ್ಥೆ. ಅದನ್ನು ಸೇರಬಯಸುವ ಪ್ರತಿಯೊಬ್ಬ ಭಾರತೀಯನಿಗೆ ಅದರಲ್ಲಿ ಮುಕ್ತದ್ವಾರ. ಪೂರ್ವ ಬಂಗಾಲದ ಪ್ರಫುಲ್ಲ ಬಾಬು ಮತ್ತು ಸುರೇಶ ಬಾಬುಗಳು, ಪೂರ್ವ ಬಂಗಾಲದಲ್ಲಿಯ ತಮ್ಮ ಬಾಂಧವರನ್ನು ಬಿಟ್ಟುಗೊಟ್ಟು ಪಶ್ಚಿಮ ಬಂಗಾಲದಲ್ಲಿ ಮಂತ್ರಿತ್ವವನ್ನು ಏಕೆ ವಹಿಸಿದರೆಂದೂ ಕೇಳಲಾಗುತ್ತಿದೆ. ಪಶ್ಚಿಮ ಭಾಗದಲ್ಲಿ ಅವರೇಕೆ ಸೇವೆ ಸಲ್ಲಿಸಲಾರರೆಂಬುದರ ಕಾರಣ ತಮಗೆ ಗೊತ್ತಾಗಲೊಲ್ಲದು. ಇದರಿಂದ ತಮ್ಮ ಮನೆ ಮಾರುಗಳನ್ನು ಅವರು ಬಿಟ್ಟಂತಾಗಲಿಲ್ಲ. ನಿಜವಾಗಿ ಅವರು ಎರಡೂ ವಿಭಾಗಗಳಿಗೆ ಕೊಂಡಿಯಂತೆ ಉಳಿದು ಎರಡೂ ಪ್ರಾಂತಗಳ ಬಾಂಧವ್ಯವನ್ನು ಬಲಪಡಿಸಲು ಸಹಾಯ ಮಾಡಬಲ್ಲರು.

ಎಲ್ಲೆಲ್ಲಿಯೂ ಕೇಡನ್ನೇ ಕಾಣಬೇಡಿರೆಂದು ಗಾಂಧೀಜಿ ಅವರಿಗೆ ಹೇಳಿದರು. ಎಲ್ಲ ಹಿಂದುಗಳು ದುಷ್ಟರಿರದಂತೆ ಎಲ್ಲ ಮುಸಲ್ಮಾನರೂ ದುಷ್ಟರಿರುವದಿಲ್ಲ. ದೋಷಿಗಳೆ ಸಾಮಾನ್ಯವಾಗಿ ಎರಡನೆಯವರಲ್ಲಿ ದೋಷವನ್ನು ಕಾಣುವರು. ಸದ್ಗುಣವನ್ನು ಕಂಡು ಅಂಜಿಕೆಯನ್ನು ಬಿಟ್ಟುಗೊಡುವದು ಕರ್ತವ್ಯವಾಗಿದೆ.

ಹೊಸದಿಲ್ಲಿ ೧೬—೭—೪೭

ಸಾಯಂಕಾಲದ ಭಜನೆಯನ್ನುಲ್ಲೇಖಿಸುತ್ತ ಗಾಂಧೀಜಿ ಇಂದಿನ ಪ್ರಾರ್ಥನೋತ್ತರ ಚರ್ಚೆಯನ್ನು ಪ್ರಾರಂಭಿಸಿದರು. ಮೊದಲು ಅವರು ಶಾಲೆಯ ವಿದ್ಯಾರ್ಥಿಯಂತೆ ಅದನ್ನು ಚರ್ಚಿಸಿದರು.

ಶರೀರವು ಬೂದಿಯಾಗಿ ಹುಳಹುಪ್ಪಡಿಗಳಿಂದ ತಿನ್ನಲ್ಪಡುವದಾದ್ದರಿಂದ ಅದರ ಬಗ್ಗೆ ಮತ್ತು ಜಗತ್ತಿನಲ್ಲಿಯ ಇತರ ಪದಾರ್ಥಗಳ ಬಗ್ಗೆ ಸಂತೋಷ ಸಾಗರದಲ್ಲಿ ಮುಳುಗುವದರಲ್ಲಿ ಏನೂ ಅರ್ಥವಿಲ್ಲೆಂದು ಮೊದಲನೆಯ ಸಾಲಿನಲ್ಲಿ ಹೇಳಿದ್ದು ಯಥಾರ್ಥವಾಗಿದೆ. ಆದರೆ

—ಕಡೇ ಪುಟಕ್ಕೆ

ಗಾಂಧೀಜಿಯ ಭಾಷಣ ಸಾರ

(೫ನೇ ಪುಟದಿಂದ)

ಕೊನೆಯ ಸಾಲು ಮಾತ್ರ ನನಗೆ ಸರಿಯೆನಿಸಲಿಲ್ಲ. ಈ ಗೀತ ರಚಿಸಿದ ಕವಿ ಕಬೀರನು ಒಬ್ಬನ ಶರೀರ ನಾಶವಾದ ಕೂಡಲೆ ಜಗತ್ತೆ ನಾಶವಾಗುವದೆಂದು ಏಕೆ ಹೇಳಿದರೋ? ಕೋಟ್ಯವಧಿ ಶರೀರಗಳು ನಾಶವಾದರೂ ಜಗತ್ತು ಉಳಿಯತಕ್ಕದ್ದೇ ಎಂಬುದು ನಮಗೆಲ್ಲ ಗೊತ್ತಿದೆ. ನಾವು ಜಗತ್ತಿನಲ್ಲಿ ಬಾಳಿ ಅದನ್ನು ಹೆಚ್ಚು ಸುಸಂಪನ್ನ ಮಾಡುವದು ಮಾನವರ ಕರ್ತವ್ಯ. ಕಬೀರ ಹುಟ್ಟಿ ಬಾಳಿದ್ದರಿಂದ ಜಗತ್ತು ಹೆಚ್ಚು ಶ್ರೇಷ್ಠವಾಗಿಲ್ಲವೆ? ಮನುಷ್ಯರು ಸಾಯಲು ಒಪ್ಪದಿದ್ದರೆ ಜಗತ್ತು ಉಸುರುಗಟಿ ಸಾಯಬಹುದು.

ದ್ರವಿಡಸ್ತಾನ

ಅನಂತರ ಗಾಂಧೀಜಿ ದ್ರವಿಡಸ್ತಾನ ಚಳವಳಿಯನ್ನುಲ್ಲೇಖಿಸಿದರು. ತೆಲಗು, ತಮಿಳ, ಮಲಯಾಳ ಮತ್ತು ಕನ್ನಡ ಈ ನಾಲ್ಕು ದ್ರಾವಿಡ ಭಾಷೆಗಳನ್ನಾಡುವ ಹಿಂದುಸ್ತಾನದ ವಿಭಾಗವು ಹಿಂದುಸ್ತಾನದಿಂದ ಪ್ರತ್ಯೇಕ ಏಕಾಗಬೇಕು? ಈ ಭಾಷೆಗಳೆಲ್ಲ ಹೆಚ್ಚಾಗಿ ಸಂಸ್ಕೃತ ಭಾಷೆಯಿಂದ ತಮ್ಮ ಭಾಷೆಯನ್ನು ಸಂವರ್ಧಿಸಿಕೊಂಡಿದ್ದರಿಂದ ಅವು ಹೆಚ್ಚು ಸಮೃದ್ಧವಾಗಿರುವದಿಲ್ಲವೆ? ಈ ನಾಲ್ಕು ಪ್ರಾಂತಗಳನ್ನು ನಾವು ಸಂಚರಿಸಿದ್ದುಂಟು. ಅವುಗಳಲ್ಲಿ ಮತ್ತು ಉಳಿದ ಪ್ರಾಂತಗಳಲ್ಲಿ ಯಾವದೇ ಭೇದ ನಮಗೆ ಕಾಣಲಿಲ್ಲ. ವಿಂಧ್ಯ ಪರ್ವತದ ಕೆಳಗಿರುವ ಜನರು ಅನಾರ್ಯರು ಮತ್ತು ಅದರ ಉತ್ತರಕ್ಕಿರುವವರು ಆರ್ಯರು ಎಂದು ಹೇಳುವದು ಕೇವಲ ಕಟ್ಟುಕತೆ. ಹಿಂದೆ ಅವರು ಯಾರೇ ಆಗಿದ್ದರೂ ಈಗ ಹಿಂದುಸ್ತಾನ ಎರಡು ತುಂಡುಗಳಾಗಿದ್ದರೂ ಕಾಶ್ಮೀರದಿಂದ ಕೇಪಕಾಮೋರಿನದ ವರೆಗೆ ಎಲ್ಲರೂ ಒಂದೇ ಜನಾಂಗ ಆಗಿರುವರು. ಪರಸ್ಪರರ ಸಮ್ಮಿಲನ ಇಂತು ಆಗಿದೆ. ಇಷ್ಟು ವಿಭಾಗಗಳನ್ನು ಮಾಡುವದು ಮೂರ್ಖತನ. ಈ ವಿಭಜನೆಯನ್ನು ಇಲ್ಲಿಗೇ ನಿಲ್ಲಿಸದಿದ್ದರೆ ಸ್ವತಂತ್ರ ಸಾರ್ವಭೌಮ ರಾಜ್ಯಗಳಿಗೆ ಕೊನೆಯೆ ಇರಲಾರದು. ಹಿಂದುಸ್ತಾನದ ಮತ್ತು ಜಗತ್ತಿನ ಹಿತದೃಷ್ಟಿಯಿಂದ ಇದು ನಿರುಪಯುಕ್ತ. ಭಾರತೀಯರು ಪರಕೀಯ ದಾಸ್ಯದಲ್ಲಿ ಮಾತ್ರ ಒಂದೇ ರಾಜಕೀಯ ಆಡಳಿತದಲ್ಲಿರಬಲ್ಲರು, ಸ್ವತಂತ್ರರಾದರೆ ಕಾಡು ಜನರಂತೆ ತಮಗೆ ಸರಿದೋರಿದಷ್ಟು ಗುಂಪುಗಳಾಗಿ ಅವರು ಒಡೆದು ಹೋಗುವರು. ಪ್ರತಿಯೊಂದು ಗುಂಪು ತನಗೆ ಸರಿದೋರಿದ ರೀತಿಯಲ್ಲಿಯೆ ವರ್ತಿಸುವದು ಎಂದು ಮುಂತಾಗಿ ಕರೆಯಿಸಿಕೊಳ್ಳುವದು ಬೇಡ. ಇಲ್ಲವೆ ದಾಸ್ಯದಲ್ಲಿಡುವಷ್ಟು ಪ್ರಚಂಡ ಸೈನ್ಯವನ್ನಿಟ್ಟುಕೊಂಡ ಏಕತಂತ್ರಾಧಿಕಾರದ ಆಡಳಿತದಲ್ಲಿ ಭಾರತೀಯರು ಇರಬಲ್ಲರೋ? ಅಂತರ್‌ರಾಷ್ಟ್ರೀಯ ವಾಣಿಜ್ಯ ಮತ್ತು ರಾಯಭಾರಕ್ಕೆ ತಕ್ಕುದಾದ ಇಂಗ್ಲಿಶ್ ಭಾಷೆಯ ಗುಲಾಮಗಿರಿಯನ್ನು ಬಿಟ್ಟುಬಿಡಲು ಇವರಿಂದ ವಿಶೇಷತಃ ದಕ್ಷಿಣ ಹಿಂದುಸ್ತಾನದಲ್ಲಿಯ ಜನರಿಂದ ಪ್ರತಿಜ್ಞೆ ಮಾಡಿಸಿಕೊಳ್ಳಬಯಸುತ್ತೇನೆ. ಹಿಂದುಸ್ತಾನದಲ್ಲಿಯ ಕೋಟ್ಯವಧಿ ಜನತೆಯ ಭಾಷೆ ಅದೆಂದಿಗೂ ಆಗಲಾರದು. ಬ್ರಿಟಿಶರು ಇಲ್ಲಿ ಒಂದು ಶತಮಾನಕ್ಕಿಂತ ಹೆಚ್ಚು ಅವಧಿಯ ವರೆಗೆ ರಾಜ್ಯಮಾಡಿದರೂ ಈ ಹಿಂದುಸ್ತಾನದ ಪ್ರಜಾಸಾಗರದಲ್ಲಿ ಕೆಲ ದಶಲಕ್ಷ ಜನ ಮಾತ್ರ ಇಂಗ್ಲೀಶ ಭಾಷೆಯನ್ನಾಡಬಲ್ಲರು. ಈ ಬಗ್ಗೆ ಲೆಕ್ಕವನ್ನು ತೆಗೆದವ್ರಾದರೆ ಹೆಚ್ಚು ಬಹುಸಂಖ್ಯಾಕ ಭಾರತೀಯರು ದೇವನಾಗರಿ ಇಲ್ಲವೆ ಉರ್ದು ಲಿಪಿಯಲ್ಲಿ ಬರೆದ ಹಿಂದೀ ಇಲ್ಲವೆ ಉರ್ದುವಿನ ಮಿಶ್ರಣವಾದ ಹಿಂದುಸ್ತಾನಿಯನ್ನು ಮಾತಾಡಬಲ್ಲರೆಂಬುದು ಕಂಡು ಬರದಿರಲಾರದು. ಸಂಸ್ಕೃತ ಮಿಶ್ರಿತ ಹಿಂದೀ ಇಲ್ಲವೆ ಪರ್ಶಿಯನ್ ಮಿಶ್ರಿತ ಉರ್ದು ತೀರ ಕೆಲ ಜನರಿಗೆ ಮಾತ್ರ ಮೀಸಲು. ತಮ್ಮ ಪ್ರಾಂತಿಕ ಲಿಪಿಯಲ್ಲಿಯೆ ಹಿಂದುಸ್ತಾನಿಯನ್ನು ಕಲಿಯಬಹುದೇ ಎಂದು ಕೇಳಲಾಗುತ್ತದೆ. ನನ್ನದೇನು ಅದಕ್ಕೆ ಆಕ್ಷೇಪವಿಲ್ಲ. ಅದನ್ನು ಕಲಿಯಲು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ದಕ್ಷಿಣ ಭಾರತದಲ್ಲಿಯ ಹುಡುಗರಿಗೆ ಅಪ್ಪಣೆ ಕೊಟ್ಟಿದ್ದಾರೆ. ಹಿಂದುಗಡೆ ಅವರು ಎರಡೂ ಲಿಪಿಗಳನ್ನು ಕಲಿತರು. ಅದರಿಂದ ಉತ್ತರದಲ್ಲಿಯ ಸಾಹಿತ್ಯವನ್ನು ಸಹಜವಾಗಿ ತಿಳಿದುಕೊಳ್ಳಬಲ್ಲರು. ದೇಶಾಭಿಮಾನವು ಅವರಿಂದ ಇಷ್ಟನ್ನು ಅಪೇಕ್ಷಿಸಬಲ್ಲದು. ತೀರ ಸಂಕುಚಿತ ಪ್ರಾಂತಾಭಿಮಾನಕ್ಕೆ ಬಲಿಬೀಳುವ ಗಂಡಾಂತರ ಉಂಟು. ಎಲ್ಲಕ್ಕೂ ಸಂಕುಚಿತ ಭಾವನೆಯನ್ನು ತಾಳಿದ್ದಾದರೆ ತಮ್ಮ ಪ್ರೀತಿಯ ಹಿಂದುಸ್ತಾನ ಎಲ್ಲಿಗೆ ಮುಟ್ಟಬಲ್ಲದು? ದಕ್ಷಿಣ ಹಿಂದುಸ್ತಾನದವರು ಹಿಂದುಸ್ತಾನಿಯನ್ನು ಕಲಿಯುವದು ಅನಿಷ್ಟವಾದರೆ ಒಳ್ಳೆ ಸಾಹಿತ್ಯವುಳ್ಳ ದಕ್ಷಿಣದ ಸಾಹಿತ್ಯಗಳನ್ನು ಉತ್ತರದವರು ಏಕೆ ಕಲಿಯಬೇಕು? ಹಿಂದೀ ಸಭಿಕರಿದ್ದಲ್ಲಿ ಇಂಗ್ಲಿಶ್ ಭಾಷೆಬೇಕೆಂದು ದಕ್ಷಿಣದ ಜನರು ಎಂದೂ ಕೇಳಬಾರದು. ಅಂದರೇನೇ ಅವರು ಹಿಂದುಸ್ತಾನಿಯನ್ನು ಬೇಗ ಕಲಿಯಬಲ್ಲರು. ಹಿಂದುಸ್ತಾನ ನೈತಿಕ ಸರಕಾರವನ್ನು ಸ್ವೀಕರಿಸಿದ್ದಾದರೆ ಸ್ವತಂತ್ರ ಹಿಂದುಸ್ತಾನ ಒಂದೇ ಆಗಿ ಪರಿಣಮಿಸಬಲ್ಲದೆಂಬುದನ್ನು ಸ್ಮರಣೆಗೆ ತಂದುಕೊಳ್ಳಬೇಕು. ಗುಲಾಮಗಿರಿಯ ವಿರುದ್ಧ ಹೋರಾಡುತ್ತಿರುವ ಕಾಂಗ್ರೆಸ್ಸು ನೈತಿಕ ತಳಹದಿಯಿಂದ ಬದ್ಧವಾಗಿದೆ, ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸುತ್ತಿರುವ ಈ ಸಮಯದಲ್ಲಿ ಅದು ಇದಕ್ಕಿಂತ ಬೇರೆಯಾಗತಕ್ಕದ್ದೋ?

ದಕ್ಷಿಣೆ ಅಫ್ರಿಕೆಯಲ್ಲಿ ಹಿಂದೀಯರು

ಹೊಸದಿಲ್ಲಿ, ೧೭-೭-೪೭

ಇಂದು ಗಾಂಧೀಜಿ ಪ್ರಾರ್ಥನೋತ್ತರ ಭಾಷಣದಲ್ಲಿ, ದಕ್ಷಿಣ ಅಫ್ರಿಕೆಯಲ್ಲಿ ಈಚೆಗೆ ಹಿಂದೀಯರ ವಿರುದ್ಧ ಪ್ರಾರಂಭವಾಗಿರುವ ಸತ್ರದ ಮಾತೆತ್ತಿದರು. ಯುರೋಪಿಯನ್ನರು ಹಿಂದೀ ವ್ಯಾಪಾರಿಗಳನ್ನು ಬಹಿಷ್ಕರಿಸುತ್ತಿರುವರಲ್ಲದೆ ಹಿಂಸಾಚಾರದ ಬೆದರಿಕೆಯನ್ನೂ ತೋರಿಸುತ್ತಿದ್ದಾರೆ. ದಕ್ಷಿಣ ಅಫ್ರಿಕೆಯಲ್ಲಿ ೨೦ ವರ್ಷ ಆಯುಸ್ಸನ್ನು ಸವೆದ ತಮಗೆ ಅಲ್ಲಿಯ ಹಿಂದೀಯರ ಸಮಸ್ಯೆಯಲ್ಲಿ ವಿಶೇಷ ಆಸ್ಥೆಯುಂಟೆಂದು ಗಾಂಧೀಜಿ ಹೇಳಿದರು. ಬೋಅರರೊಡನೆ ಹಿಂದೀಯರು ಸ್ಪರ್ಧಿಸುವದಿಲ್ಲ. ಹೀಗಿರುವಾಗ ಹಿಂದೀಯರ ಮೇಲೆ ಹಿಂಸೆಯ ಬೆದರಿಕೆ ಬಂದಿರುವದರಲ್ಲಿ ಅವರ ಕೈವಾಡವಿದ್ದರೆ ತಮಗೆ ನೋವೂ ಆಶ್ಚರ್ಯವೂ ಆದೀತು. ನಾವು ಹೆಚ್ಚು ಕಡಿಮೆ ಎರಡು ಸಾವಿರ ಹಿಂದೀಯರನ್ನೊಡಗೊಂಡು ಟ್ರಾನ್ಸವಾಲದೊಳಗಿಂದ ಕೂಚು ಮಾಡುತ್ತಿದ್ದಾಗ ಪೂರ್ಣ ಅಹಿಂಸಕರಾದ ತಮ್ಮ ಗಳ ಮೇಲೆ ಬೋಅರರು ಯಾವಾಗಲೂ ದಯೆ ತೋರಿಸುತ್ತಿದ್ದುದನ್ನು ಗಾಂಧೀಜಿ ನೆನೆದುಕೊಂಡರು. ಈ ಹಿಂಸಾಭಯಪ್ರದರ್ಶನದ ಹಿಂದೆ ಕಿಡಿಗೇಡಿಗಳ ಕೈವಾಡವಿದೆಯೆಂದು ಅವರು ಸಂಶಯಪಟ್ಟರು. ಈ ಸುದ್ದಿಗಳು ತೀರ ಅತಿಶಯೋಕ್ತಿಯವಾಗಲೆಂದು ಹಾರೈಸೋಣ. ಈಗ ಹಿಂದುಸ್ತಾನವೂ ತಮ್ಮಷ್ಟೇ ಸ್ವತಂತ್ರವೂ ಸದ್ಯಕ್ಕೆ ಅದೇ ಬ್ರಿಟಿಶ ಸಾಮಂತ ಮಂಡಲದ ಒಂದು ಘಟಕವೂ ಆಗಿದೆಯೆಂದು ಫೀಲ್ಡ ಮಾರ್ಶಲ ಸ್ಮಟ್ಸರಿಗೂ ದಕ್ಷಿಣ ಅಫ್ರಿಕೆಯ ಬಿಳಿಯರಿಗೂ ಗೊತ್ತಿದೆ. ತಮ್ಮ ಸಹಭಾಗಿಗಳನ್ನೇ ಅವರು ಕೆಟ್ಟರೀತಿ ನಡೆಸಿಕೊಳ್ಳುವದು ನ್ಯಾಯವೆ? ಯುಕ್ತರಾಷ್ಟ್ರ ಸಂಘದಲ್ಲಿ ಶ್ರೀಮತಿ ಪಂಡಿತರು ಪಡೆದ ಗೆಲವನ್ನು ನಿರರ್ಥಕಗೊಳಿಸಬೇಕೆ? ಸಮಾಜದಲ್ಲಿರುವ ಪುಂಡರನ್ನು ಹಿಡಿತದಲ್ಲಿಡುವದು ಕೈಲಾಗದಿದ್ದರೆ ರಾಜೀನಾಮೆ ಕೊಡುವದು ಸ್ಮಟ್ಸರ ಕರ್ತವ್ಯ. ಪಂಡಿತನೆಹರೂ ಅವರೂ ಜಿನ್ನಾಸಾಹೇಬರೂ ಸೇರಿ ಒಂದು ಜತೆ ತಂತಿಯನ್ನು ಸ್ಮಟ್ಸರಿಗೆ ಕಳಿಸಿ, ಹಿಂದುಸ್ತಾನವಿಂದು ಸ್ವತಂತ್ರವಾಗಿರುವದರಿಂದ ದಕ್ಷಿಣ ಅಫ್ರಿಕೆಯಲ್ಲಿರುವ ಹಿಂದೀಯರಿಗೆ ಸಮಾನ ಹಕ್ಕುಗಳನ್ನೂ ಸಂರಕ್ಷಣೆಯನ್ನೂ ಕೊಡುವದು ದಕ್ಷಿಣ ಅಫ್ರಿಕಾ ಸರಕಾರದ ಕರ್ತವ್ಯವೆಂದು ತಿಳಿಸಬೇಕು. ಗಾಂಧೀಜಿ ಸೂಚಿಸಿದರು.

ಬ್ರಿಟಿಶ ಕಾಮನ್ಸ ಸಭೆಯ ಭಾಷಣಗಳಲ್ಲಿ ಸಾಮಂತ ಸ್ವರಾಜ್ಯವೆಂದರೆ ಸ್ವಾತಂತ್ರ್ಯಕ್ಕಿಂತಲೂ ಮಿಗಿಲಾದುದೆಂದು ಹೇಳಲಾಯಿತು. ಅದರೆ ಅಂಗೈ ನೋಡಲು ಕನ್ನಡಿಯೇಕೆ? ಸಾಮಂತ ಸ್ವರಾಜ್ಯವೆಂದರೆ ಸಾಮ್ರಾಜ್ಯದಲ್ಲಿರುವ ಎಲ್ಲ ಸಾಮಂತರೂ ಸಮಾನರೆಂದು ಅರ್ಥವೆ? ಅದರೆ ಆಡಿದ ಮಾತಿನ ಬೆಲೆ ಸಾಮ್ರಾಜ್ಯದಲ್ಲೆಲ್ಲ ಹಾಗೆ ಮಾಡಿ ತೋರಿಸಿದಾಗಲೇ ಗೊತ್ತು.

ಲಾರ್ಡ ಮೌಂಟಬ್ಯಾಟನ್ನರು ಇನ್ನೂ ವ್ಹಾಯಿಸರಾಯರಾಗಿದ್ದಾರೆ. ಅವರು ಮಹಾ ನೌಕಾಪತಿ, ರಾಜಕುಲ ಸಂಭೂತ. ದಕ್ಷಿಣ ಅಫ್ರಿಕೆಯ ಹಿಂದೀಯರಿಗೆ ನ್ಯಾಯವನ್ನು ದೊರಕಿಸಿಕೊಡಲು ಅವರು ತಮ್ಮ ವರ್ಚಸ್ಸನ್ನು ಉಪಯೋಗಿಸಲಿ. ಇತ್ತ ದಕ್ಷಿಣ ಅಫ್ರಿಕೆಯಲ್ಲಿರುವ ಹಿಂದೀಯರು ಒಗ್ಗಟ್ಟಾಗಿರಬೇಕು. ಅವರಲ್ಲಿ ಒಡಕು ಇರಕೂಡದು. ಸಂಪನ್ನರು ಬಡವರನ್ನು ಕಡೆಗಣಿಸದಿರಲಿ.

ಮಂದಿರ ಪ್ರವೇಶ ಮತ್ತು ಅಸ್ಪೃಶ್ಯತೆ

ಮುಂದೆ ಗಾಂಧೀಜಿ ಅಸ್ಪೃಶ್ಯತೆಯ ಪ್ರಶ್ನೆಯನ್ನು ಪ್ರಸ್ತಾವಿಸಿದರು. ಕೊಚ್ಚಿಯನ್ನು ಬಿಟ್ಟು ಇಡೀ ದಕ್ಷಿಣ ಹಿಂದುಸ್ತಾನವೇ ಈ ವಿಷಯದಲ್ಲಿ ಬಹಳ ಮುನ್ನಡೆದಿದೆ. ತಿರ್ವಾಂಕೂರಿನ ಎಲ್ಲ ದೇವಸ್ಥಾನಗಳನ್ನು ಹರಿಜನರಿಗೆ ತೆರೆದಿಳ್ಳಲು ಮಹಾರಾಜರಿಗೆ ಸಲಹೆಕೊಟ್ಟ ಸರ್ ಸಿ. ಪಿ ಯವರನ್ನು ಅವರು ಅಭಿನಂದಿಸಿದರು. ಈಗ ಆಂಧ್ರ ದೇಶವೂ ತಮಿಳುನಾಡೂ ಬ್ರಿಟಿಶ ಕೇರಳವೂ ಅದೇ ದಾರಿ ಹಿಡಿದಿವೆ. ಇದು ಸಂತೋಷದ ಸುದ್ದಿಯೇ ಸರಿ. ಅದರೆ ಕಾಶಿ ವಿಶ್ವನಾಥ ಹರಿದ್ವಾರ ಮತ್ತು ಹಿಂದುಸ್ತಾನದಲ್ಲೆಲ್ಲ ಇರುವ ಅನೇಕ ದೇವಸ್ಥಾನಗಳ ಮಾತೇನು? ಎಷ್ಟೋ ಹರಿಜನರು ಆರ್ಥಿಕ ಉದ್ಧಾರವನ್ನೂ ಶಿಕ್ಷಣ ಸೌಕರ್ಯವನ್ನೂ ಅಪೇಕ್ಷಿಸುತ್ತಿರುವರೆಂದು ತಮಗೆ ಗೊತ್ತಿದೆಯೆಂದರು ಗಾಂಧೀಜಿ. ಇದಕ್ಕೆ ಅವರು ಅರ್ಹರೆ ಇದ್ದಾರೆ. ಅದರೆ ಹಿಂದುಗಳು ತಮ್ಮ ಹಿತದೃಷ್ಟಿಯಿಂದಲೇ ಮಂದಿರ ಪ್ರವೇಶದ ಕಾರ್ಯ ಪೂರ್ಣವಾದ ಹೊರತು ಸಂತುಷ್ಟರಾಗಕೂಡದು. ಹಿಂದೂ ದೇವಸ್ಥಾನಗಳಲ್ಲಿ ಪ್ರತಿಯೊಬ್ಬ ಹಿಂದುವಿಗೂ ಏನೇನೂ ಭೇದವಿಲ್ಲದೆ ಅತ್ಯುಚ್ಚ ಜಾತಿಯವನ ಸರಿಸನಾಗಿ ಆರಾಧಿಸುವ ಅವಕಾಶ ದೊರೆಯುವವರೆಗೂ ಆ ದೇವಸ್ಥಾನಗಳು ಪರಿಶುದ್ಧವೆನಿಸಲಾರವು. ಶುದ್ಧ ಹಿಂದೂ ಧರ್ಮದಲ್ಲಿ ಭೇದಗಳಿಗೆಡೆಯಿಲ್ಲ. ದೇವರ ಮುಂದೆ ಎಲ್ಲರೂ ಸಮಾನರು. ಜಗತ್ತಿನಲ್ಲಿರುವ ಧರ್ಮಗಳೆಲ್ಲಕ್ಕೂ ಇಂದು ಪರೀಕ್ಷಾಕಾಲವೊದಗಿದೆ. ಅದರಲ್ಲಿ ಹಿಂದೂ ಧರ್ಮ ಕೂದಲು ಕೊಂಕದಂತೆ ತೇರ್ಗಡೆಹೊಂದಿ ಬರಬೇಕೆಂದು ಗಾಂಧೀಜಿ ಬಯಸಿದರು.

ಆಪದ್ಬಾಂಧವ

ಹೊಸದಿಲ್ಲಿ ೧೮-೭-೪೭

ಇಂದಿನ ಭಜನೆಯ ಕಡೆಗೆ ಜನರ ಗಮನವನ್ನು ಸೆಳೆದು ಗಾಂಧೀಜಿ ಹೇಳಿದ್ದು: ‘‘ಈ ಭಜನಪದ ಮೀರಾಳದೋ ಅಲ್ಲವೋ ನಾನರಿಯೆ. ಅದರ ರಾಗ ಮೀರಾಬಾಯಿಯ ಸಾಮಾನ್ಯ ರಾಗಕ್ಕಿಂತ ಬೇರೆಯಾಗಿದೆ. ಅದರೆ ಅದರ ಭಾವ ಮಾತ್ರ ನಿಸ್ಸಂಶಯವಾಗಿ ಅವಳದೆ. ಪರಮಾತ್ಮನೊಬ್ಬನೇ ಆಪದ್ಬಾಂಧವನೆಂದು ಅದು ಸಾರುತ್ತದೆ. ಇಂದು ಹಿಂದುಸ್ತಾನ ಮಹಾ ಆಪತ್ತಿನಲ್ಲಿ ಸಿಲುಕಿದೆ. ದೇಶವನ್ನು ಅದರಿಂದ ಪಾರು ಮಾಡಲು ನಾವು ದೇವರನ್ನು ನಂಬಬೇಕೋ ಮನುಷ್ಯನ ಮುಖ ನೋಡಬೇಕೋ? ಈ ಭಜನೆಯಲ್ಲಿ ನಮ್ಮ ವಿಶ್ವಾಸವಿದ್ದರೆ ದೇವರನ್ನಲ್ಲದೆ ನಾವು ಬೇರಾರನ್ನೂ ನಂಬಬಾರದು. ಅಂದರೆ ನಾವು ಸಂಪೂರ್ಣ ಸುರಕ್ಷಿತರಾಗಿರುವೆವು. ಹಿಂದೀ ಸ್ವಾತಂತ್ರ್ಯ ಮಸೂದೆ ನಾಳೆ ಕಾಯಿದೆಯಾಗುವದು. ಅದರ ಮೇರೆಗೆ, ಇನ್ನು ಈ ವರೆಗಿನಂತೆ ಗವರ್ನರ ಜನರಲ್ಲರು ಹೊರಗಿಂದ ನಮ್ಮ ಮೇಲೆ ಹೊರಿಸಲ್ಪಡದೆ ನಾವೆ, ಹಿಂದೀ ಜನರೆ, ಅವರನ್ನು ನೇಮಿಸುವೆವು. ಅದರಿಂದ ಒಬ್ಬ ಸಾಮಾನ್ಯ ಆಳಿನಂತೆ ಲಾರ್ಡ ಮೌಂಟಬ್ಯಾಟನ್ನರೂ ನಮ್ಮಿಂದಲೇ ನೇಮಿಸಲ್ಪಟ್ಟವರಾಗುವರು. ಇದು ನಿಂದಾವ್ಯಂಜಕವಲ್ಲ. ಹಿಂದೀ ಒಕ್ಕೂಟದ ಸೇವೆಗೆ ಹಿಂದೀ ಜನರಿಂದ ನೇಮಿಸಲ್ಪಡಲೊಪ್ಪಿದ ಮೌಂಟಬ್ಯಾಟನ್ನರು ನಿಜವಾಗಿ ಪ್ರಶಂಸಾರ್ಹರು. ಇನ್ನೂ ಅನೇಕರು ಹಚ್ಚಿಕೊಂಡಿರುವ ಶಂಕೆಗಳನ್ನು ದೂರೀಕರಿಸಲು ಈ ಮಾತು ಹೇಳುವ ಅವಶ್ಯಕತೆ ಬಿತ್ತು.

‘ಡಾನ’ ಸಂಪಾದಕನಿಗೆ

ಇಂದಿನ ‘‘ಡಾನ’’ ಪತ್ರಿಕೆಯಲ್ಲಿ ಅದರ ಸಂಪಾದಕನು ಗಾಂಧೀಜಿಗೆ ಬರೆದ ಬಹಿರಂಗ ಪತ್ರದ ಬಗ್ಗೆ ಮುಂದೆ ಅವರು ನಾಲ್ಕು ಮಾತು ಹೇಳಿದರು. ‘‘ಡಾನ’’ ಪತ್ರಿಕೆ ಜಿನ್ನಾ ಸಾಹೇಬರ ಮುಖಪತ್ರ. ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರು ಸುರಕ್ಷಿತರಾಗಿರುವರೆಂದು ಜಿನ್ನಾಸಾಹೇಬರು ಕೊಟ್ಟ ಭರವಸೆಯನ್ನು ಪಾಕಿಸ್ತಾನದಲ್ಲಿರುವ ಮುಸ್ಲಿಮರ ನಡೆವಳಿಕೆಯಿಂದಲೇ ತೂಗಬೇಕಾಗುವದೆಂಬ ಗಾಂಧೀಜಿಯ ವಾಕ್ಯವನ್ನು ಅದರಲ್ಲಿ ಖಂಡಿಸಲಾಗಿತ್ತು. ತಾವೀ ಮಾತಿಗೆ ಇನ್ನೂ ಅಂಟಿಕೊಳ್ಳುವದಾಗಿ ಗಾಂಧೀಜಿ ಹೇಳಿದರು. ಅದರೆ ಜಿನ್ನಾರ ಮೇಲೆ ಕುಶಂಕೆಯನ್ನೆಸೆಯುವದು ತಮ್ಮ ಉದ್ದೇಶವಲ್ಲ. ವ್ಹಾಯಿಸರಾಯರ ಬಗ್ಗೆಯೂ ಕಾಂಗ್ರೆಸ್ ಮಂತ್ರಿಗಳ ಬಗ್ಗೆಯೂ ತಾವು ಇದೇ ಮಾತನ್ನು ಹೇಳಿದವರು. ಸಿಂಧದ ಹಿಂದುಗಳನ್ನು ಆಕ್ರಮಿಸುತ್ತಿರುವ ಭಯವೇನೋ ಅವಲಕ್ಷಣದಂತಿದೆ. ಯುಕ್ತಪ್ರಾಂತದ ಮುಸ್ಲಿಮರ ಕಷ್ಟನಿಷ್ಠುರಗಳನ್ನು ಬಣ್ಣಿಸಿ ಸಂಪಾದಕನು ಕೆಲವೊಂದು ನಿರ್ದಿಷ್ಟ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಈ ಆರೋಪಗಳು ಸತ್ಯವೆಂದು ಸಿದ್ಧವಾದರೆ ಸಹಿತ, ಸಿಂಧದಲ್ಲಿ ಅದೇ ಬಗೆಯಾಗಿ ನಡೆದುಕೊಳ್ಳುವದಾಗಲಿ ಯುಕ್ತಪ್ರಾಂತದಲ್ಲಿ ತಿರುಗಿ ಅದಕ್ಕೆ ಪ್ರತೀಕಾರ ಮಾಡುವದಾಗಲಿ ಸಾಧುವೆನಿಸಲಾರದೆಂದು ಗಾಂಧೀಜಿ ಉತ್ತರವಿತ್ತರು. ಯುಕ್ತಪ್ರಾಂತದ ಮೇಲಿನ ಆರೋಪಗಳ ಬಗ್ಗೆ ತಮಗೇನೂ ಗೊತ್ತಿದ್ದಿಲ್ಲ ನಿಜ. ಅದರೆ ತನಗೆ ಏನೂ ಗೊತ್ತಿಲ್ಲದ ಆರೋಪಗಳ ವಿಷಯದಲ್ಲಿ ಬಹಿರಂಗವಾಗಿ ಆಡುತ್ತಿರುವೆನೆಂಬ ಪರಿವೆ ಸಂಪಾದಕನಿಗಿದ್ದಿಲ್ಲವೇನೊ. ‘‘ಮೇಲೆ ಹೇಳಿದ ಸಂಗತಿಗಳನ್ನೋದಿದೊಡನೆ ನಾನು ರಫಿ ಸಾಹೇಬರಿಗೆ ಬರೆದೆ,’’ ಎಂದು ಗಾಂಧೀಜಿ ವಿವರಿಸಿದರು. ‘‘ಅದರೆ ಅವರು ದಿಲ್ಲಿಯಲ್ಲಿದ್ದಿಲ್ಲ. ಅದರಿಂದ ಮುಖ್ಯ ಮಂತ್ರಿಗಳಿಗೆ ಬರೆದೆ. ಅವರು ನನಗೆ ಉತ್ತರ ಬರೆದು ಮತ್ತು ಮುಂದೆ ಭೆಟ್ಟಿಯಾಗಿ ಸಂಪಾದಕನು ಬರೆದುದರಲ್ಲಿ ಬಹಳ ಅತಿಶಯೋಕ್ತಿಯುದೆಯೆಂದೂ ಅದರಲ್ಲಿದ್ದ ಬಿಡಿ ಸತ್ಯಾಂಶಗಳನ್ನು ಒಡನೆ ಸರಿಪಡಿಸಲು ಪ್ರಯತ್ನಿಸಲಾಗಿದೆಯೆಂದೂ ತಿಳಿಸಿದರು. ತಪ್ಪುಗಾರರು ಸಿಕ್ಕದಾಗರೆಲ್ಲ ಅವರನ್ನು ದಂಡಿಸಲಾಗಿದೆ. ತಪ್ಪುಗಾರರನ್ನು ಕಂಡುಹಿಡಿಯಲೂ ಸರ್ವ ಪ್ರಯತ್ನ ಮಾಡಲಾಗಿದೆ. ಅದರೆ ಮೊದಲು ಪರಿಬಂದವರು ಲೀಗಿನವರೆ ಎಂದು ಅವರು ತಿಳಿಸಿದರು. ಹಿಂದೂ ಕಿಡಿಗೇಡಿಗಳನ್ನು ಸಮರ್ಥಿಸಿಕೊಳ್ಳಲು ಅವರು ಪ್ರಯತ್ನಿಸಲಿಲ್ಲ. ತಾವೂ ತಮ್ಮ ಸಹಮಂತ್ರಿಗಳೂ ಪುಂಡ ಜನರನ್ನು ಹಿಡಿತದಲ್ಲಿಡಲು ಕೈಲಾದುದನ್ನೆಲ್ಲ ಮಾಡುತ್ತಿರುವದಾಗಿ ಅವರು ಹೇಳಿದರು. ‘‘ಡಾನ’’ ಮತ್ತು ಯಾವದೇ ರೂಪ-ರಂಗಿನ ಎಲ್ಲ ಪತ್ರಿಕೆಗಳಿಗೆ ನನ್ನದೊಂದು ಸೂಚನೆಯುಂಟು. ಅವು ಅತಿಶಯೋಕ್ತಿಯನ್ನು ಬಿಟ್ಟುಬಿಡಲಿ. ಈ ಸೂಚನೆಯನ್ನು ಆಚರಣೆಯಲ್ಲಿ ತರಲು ಅವೆಲ್ಲ ಸೇರಿ ಒಂದು ಜತೆ ಸಮಿತಿಯನ್ನು ನೇಮಿಸಬೇಕು. ಜಾತೀಯ ಗಲಭೆಗಳ ವರದಿಗಳನ್ನೆಲ್ಲ ಅದರ ಕಡೆಗೆ ಕಳಿಸಬೇಕು. ಅದು ಆ ವರದಿಗಳನ್ನು ಮಂತ್ರಿಗಳಿಗೆ ಕಳಿಸಲಿ; ಅವಶ್ಯಕಂಡಲ್ಲಿ ಪ್ರಕಟಿಸಲಿ. ಪತ್ರಿಕಾ ಸಂಪಾದಕರು ಜನರ ವಿಷಯದಲ್ಲಿ ತಮಗಿರುವ ಕರ್ತವ್ಯವನ್ನು ಮನಗಂಡು ಎಲ್ಲ ಜಾತೀಯತೆಯನ್ನು ಶಾಶ್ವತವಾಗಿ ಕೊನೆಗೊಳಿಸಲು ಆತುರಪಡುವವರಾದರೆ ಮಾತ್ರ ಈ ಸೂಚನೆ ಅವರಿಗೆ ಪಥ್ಯವೆನಿಸೀತು. ವಿಭಜನೆಯೆಂಬುದು ನಿಶ್ಚಿತಾರ್ಥವಾಗಿರುವಾಗ ಇನ್ನು ದೇಶ ಶಾಂತಿ ಸಮಾಧಾನಗಳಿಗೆ ಮರಳುವಂತೆ ಮಾಡಿ ನಿರ್ವಸ್ತ್ರ ನಿರಾಹಾರ ಜನಕೋಟಿಗಳನ್ನು ಹೊಚ್ಚುವ ಹೊರೆಯುವ ರಚನಾತ್ಮಕ ಕಾರ್ಯಕ್ಕೆ ಮನಸು ಕೊಡುವದು ವಿಹಿತ. ಈ ಘನ ಕಾರ್ಯದಲ್ಲಿ ಸಂಪಾದಕರು ಮುಖ್ಯ ಪಾತ್ರ ವಹಿಸಬಲ್ಲರು. ತೊಂದರೆಯನ್ನು ಉದ್ರೇಕಗೊಳಿಸುವದು ನೀಚತನವೇ ಸರಿ.

ಸರಕಾರಿ ನೌಕರಿಗಳು

ಹೊಸದಿಲ್ಲಿ ೧೯—೭—೪೭

ಪ್ರಾರ್ಥನೋತ್ತರದ ಭಾಷಣದಲ್ಲಿ ಇಂದ್ಯ ಗಾಂಧೀಜಿ ಇಂದಿನ ಕಾಂಗ್ರೆಸ್ ಕಾರ್ಯ ಸಮಿತಿಯ ಸಭೆಯ ಸಂಬಂಧದಲ್ಲಿ ಜನರಿಗೆ ತಿಳಿಸಬಹುದಾದುದೇನೂ ಇಲ್ಲವೆಂದು ಹೇಳಿದರು. ಅದರೂ ಒಂದು ಮಾತನ್ನು ನೆರೆದವರಿಗೆ ಬಿಚ್ಚಬೇಕೆಂದು ಅವರಿಗನಿಸಿತು. ಸರಕಾರಿ ಅಧಿಕಾರಗಳು ತಮಗೆ ಬೇಕೆಂಬ ಉನ್ಮತ್ತ ಅಭಿಲಾಷೆ ಅನೇಕ ಕಾಂಗ್ರೆಸ್ಸಿಗರನ್ನು ಆಕ್ರಮಿಸಿದುದಕ್ಕೆ ಕಾರ್ಯ ಸಮಿತಿಗೆ ಬಹಳ ವ್ಯಥೆಯಾಗಿದೆಯೆಂದರವರು. ಜನತೆಯೊಡನೆ ಏಕರಸವಾಗಿದ್ದ ಸಂಸ್ಥೆಯೊಂದರ ಸದಸ್ಯರು ಈ ಸ್ಥಿತಿಗೆ ಇಳಿದುದು ನಿಜವಾಗಿ ಶೋಚನೀಯ. ಯಾವದೇ ಸರಕಾರ ಬಹಳಾದರೆ ಎಷ್ಟು ನೌಕರಿಗಳನ್ನು ಕೊಡಬಲ್ಲದು? ಕರ್ತವ್ಯಬುದ್ಧಿಯಿಂದ ಸೇವೆ ಮಾಡುವವರಿಗೆ ಮಾತ್ರ ಸರಕಾರಿ ನೌಕರಿ ಸಲ್ಲಬೇಕಾದುದು. ಮೇಲ್ಪಟ್ಟದ ಮುಂದಾಳುಗಳು ಇದೇ ಬುದ್ಧಿಯಿಂದ ಅಧಿಕಾರ ಸ್ವೀಕರಿಸಿದ್ದಾರೆ. ಬ್ರಿಟಿಶ ಆಳಿಕೆಯ ಕಾಲದಲ್ಲಿ ಹೀಗಿದ್ದಿಲ್ಲವೆಂದು ಹೇಳಿದರೆ ಸರಿಯಾಗದು. ದಾಸರಾಗಿದ್ದಾಗ ನಾಚದೆ ಮಾಡುತ್ತಿದ್ದಂತೆ ಸ್ವತಂತ್ರರಾದ ಮೇಲೂ ಮಾಡುವದು ತರವಲ್ಲ. ಕಾಂಗ್ರೆಸ್ಸು ಈಗ ಅಧಿಕಾರಕ್ಕೆ ಬಂದಿದೆಯೆಂಬೊಂದು ಕಾರಣದಿಂದಲೇ ತಮಗೆ ಸರಕಾರಿ ನೌಕರಿಗಳು ದೊರಕಬೇಕೆಂದು ಆತುರಪಡುವದು ಕಾಂಗ್ರೆಸ್ ತತ್ವಗಳಿಗೆ ವ್ಯತಿರಿಕ್ತವಾದುದು.

ಗೋರಕ್ಷಣೆ

ಗಾಂಧೀಜಿ ಪ್ರಸ್ತಾವಿಸಿದ ಇನ್ನೊಂದು ವಿಷಯವೆಂದರೆ ಗೋವಧೆಯನ್ನು ಪ್ರತಿಬಂಧಿಸಬೇಕೆಂದು ತಮಗೆ ಬರುತಲಿರುವ ಅನೇಕ ತಂತಿಗಳದು. ‘‘ನಾನೇನೋ ಯಾವಾಗಲೂ ಗೋಪೂಜಕನಾಗಿದ್ದೇನೆ. ಅದರೂ ಹಿಂದೂ ಧರ್ಮಕ್ಕೆ ವಿರುದ್ಧವಾಗಿದ್ದ ಮಾತ್ರಕ್ಕೆ ಗೋವಧೆಯನ್ನು ಪ್ರತಿಬಂಧಿಸುವಂತೆ ನಾನೇಕೆ ಸರಕಾರವನ್ನು ಕೇಳಿಕೊಳ್ಳಬೇಕೋ ನನಗೆ ತಿಳಿಯದು. ಈ ತಂತಿಗಳನ್ನು ಕಳಿಸುವವರೂ ಸಾಮಾನ್ಯವಾಗಿ ಹಿಂದುಗಳೆಲ್ಲರೂ ತಾವು ಕೈಯಾರೆ ಗೋವನ್ನು ಕೊಲ್ಲದಿದ್ದರೂ ಅದನ್ನು ಅಷ್ಟೇ ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುತ್ತಾರೆ ಇದನ್ನು ಅವರಿನ್ನೂ ಮನಗಾಣದಿರುವದೀಗ ದುರ್ದೈವದ ಸಂಗತಿ. ಕೊನೆಗೆ ಸರ್ವ ರಕ್ಷಣಕನಾದ ದೇವರೇ ಗೋವಿನ ರಕ್ಷಕನೂ ಹೌದೆಂಬದು ನಿಜ. ಅದರೆ ಹಿಂದುಗಳು ಗೋವುಗಳನ್ನೂ ಸಾಮಾನ್ಯವಾಗಿ

—೧೧ನೇ ಪುಟಕ್ಕೆ

ಗಾಂಧೀಜಿಯ ಭಾಷಣ ಸಾರ

(೯ ನೆ ಪುಟದಿಂದ ಮುಂದುವರಿಯುವುದು)

ಜನಸಮುದಾಯಗಳೆಲ್ಲವನ್ನು ಉಪವಾಸ ಕೆಡವುತ್ತಾರೆ, ಅವುಗಳನ್ನು ಬೇಗ ಪೋಷಿಸಬೇಕೋ ಹಾಗೆ ಪೋಷಿಸುವುದಿಲ್ಲ; ಇತ್ತ ದನಗಳನ್ನು ಮಾರಿ ಬಿಡುತ್ತಾರೆ, ಹಾಗೆ ಮಾರಿದ ದನಗಳು ಕಟುಕನ ಕೊಟ್ಟಿಗೆಗೆ ಹೋಗುವವೆಂಬುದನ್ನು ಗಮನಿಸುವುದೇ ಇಲ್ಲ. ಯಾರು ಹೆಚ್ಚು ಹಣ ಕೊಡುವನೋ ಅವನಿಗೆ ಅವುಗಳನ್ನು ದಾಟಿಸಿ ಬಿಡುತ್ತಾರೆ. ಅವರು ಎತ್ತುಗಳನ್ನು ಕ್ರೂರತನದಿಂದ ನಡೆಸಿಕೊಳ್ಳುತ್ತಾರೆ; ಅಂಕುಶದಿಂದ ಹಿಂಸಿಸುತ್ತಾರೆ. ತಮ್ಮ ಧರ್ಮವನ್ನು ತಾವೇ ಅಪಾದಿಸಬೇಕಾದರೆ ಅವರಿಗೆಂದು ಕಾಯಿದೆ ಬೇಕೆನ್ನುವುದು ಅವರಿಗೇನು ಭೂಷಣ? ಹಿಂದುಸ್ತಾನದ ಗೋಸಂಪತ್ತು ಇವರ ಮುಷ್ಟಿಗೆ ಹಿಂದುಗಳ ಕೈಯಲ್ಲಿ ಇದೆ. ಆದರೆ ಗೋವಿನ ಪೀಳಿಗೆ ಇಷ್ಟು ಕೆಟ್ಟ ಸ್ಥಿತಿಯಲ್ಲಿರುವ, ಇಷ್ಟು ದುರ್ಲಕ್ಷ್ಯಕ್ಕೊಳಗಾಗಿರುವ ದೇಶ ಬೇರೊಂದಿಲ್ಲ. ಇಂಗ್ಲಂಡಿನ ಜನಸಮುದಾಯಗಳ ಅತ್ಯುತ್ತಮ ಮಾದರಿಗಳು ಈಗಲೂ ತನ್ನ ದೇಶದಲ್ಲಿವೆ. ಅಲ್ಲಿಯ ಜನರು ಗೋಮಾಂಸವನ್ನು ತಿನ್ನುತ್ತಾರೆ. ಆದರೂ ತಮ್ಮ ಗೋಧನದ ವಿಷಯದಲ್ಲಿ ಅತಿಶಯ ಲಕ್ಷ್ಯ ವಹಿಸುತ್ತಾರೆ. ದನಗಳನ್ನೂ ಗೋಧನವನ್ನೂ ರಕ್ಷಿಸುವ ವಿಷಯಕ್ಕೆ ಗಮನವೀಯಿರೆಂದು ನಾನು ಪ್ರಾರ್ಥಿಸುವೆ. ಕಾಯಿದೆಯಿಲ್ಲದೆಯೆ ನಾವು ದನಗಳನ್ನು ರಕ್ಷಿಸಬಲ್ಲೆವು.

ರಾಷ್ಟ್ರಧ್ವಜ

ಆಗಸ್ಟ್ ೧೫ ರ ನಂತರ ನಮ್ಮ ರಾಷ್ಟ್ರಧ್ವಜದ ಒಂದು ಮೂಲೆಯಲ್ಲಿ ಯೂನಿಯನ್ ಜಾಕ್ (ಬ್ರಿಟಿಶ ಧ್ವಜ) ಕಣ್ಣಿಗೆ ಎದ್ದುತೋರುವುದೆಂಬ ಗಾಳಿಸುದ್ದಿ ಕೇಳಿ ಸಿಟ್ಟಿಗೆದ್ದು ಯಾರೋ ಒಬ್ಬ ಗಾಂಧೀಜಿಗೆ ಪತ್ರ ಬರೆದಿದ್ದ. ಹೀಗಾದರೆ ತಾನು ಆ ಧ್ವಜವನ್ನು ಹರಿದು ಚಿಂದಿ ಚಿಂದಿ ಮಾಡುವ ಹಾಗಿಯೂ ಅದನ್ನು ಸಹಿಸುವ ಬದಲು ಪ್ರಾಣವನ್ನಾದರೂ ಕೊಡುವದಾಗಿಯೂ ಅವನು ತಿಳಿಸಿದ್ದ. ಇದು ವಿಚಾರಗೇಡಿ ದೃಷ್ಟಿಕೋಣವೆಂದು ಗಾಂಧೀಜಿ ಹೇಳಿದರು. "ಯೂನಿಯನ್ ಜಾಕು ತಾನೇ ಏನೂ ಅಪರಾಧ ಮಾಡಿಲ್ಲ. ಪರಾಧೀನತೆಯ ದೀರ್ಘ ಅವಧಿಯಲ್ಲಿ ಹಿಂದುಸ್ತಾನಕ್ಕಾದ ಕೇಡಿಗೆ ಬ್ರಿಟಿಶ ಅಧಿಕಾರಿಗಳು ಕಾರಣರಾಗಿದ್ದರು. ಆದರೆ ಅವರೀಗ ಹೊರಟಿದ್ದಾರೆ. ಲಾರ್ಡ ಮೌಂಟಬ್ಯಾಟನ್ನರು ಉಳಿದರೂ ವಾಯಿಸರಾಯರಾಗಿ ಉಳಿಯುವದಿಲ್ಲ. ಅವರು ಇನ್ನು ಮೇಲೆ ನಮ್ಮ ಸೇವಕಾಗ್ರಣಿಯಾಗಿ ಜನತೆಯ ಪ್ರತಿನಿಧಿಯಾದ ಮಂತ್ರಿಮಂಡಲದ ಇಚ್ಛೆಯನ್ನು ಆಚರಣೆಗೆ ತರುವರು. ಹಿಂದುಸ್ತಾನ ಸಾಮಂತ ರಾಜ್ಯವಾಗಿ ಉಳಿದಷ್ಟು ಕಾಲ ಯೂನಿಯನ್ ಜಾಕಿಗೆ ರಾಷ್ಟ್ರಧ್ವಜದ ಮೂಲೆಯಲ್ಲಿ ಸ್ಥಾನ ಕೊಡಲು ನನಗೇನೂ ಆಕ್ಷೇಪ ತೋರುವದಿಲ್ಲ. ಇದರಿಂದ ನಮ್ಮ ಹಿಂದಿನ ಶತ್ರುವಿನ ಬಗೆಗೆ ಆದರ ತೋರಿದಂತಾಗುತ್ತು. ನಾವು ಸಹನಶೀಲತೆಯಿಂದ ಕಟ್ಟಿದ ಸಂಸ್ಥಾಯಕ್ಕೆ ಒಪ್ಪುವ ತಿಷ್ಟಾಚಾರವಾಗುತಿತ್ತು ಇದು. ಹಿಂದೀ ಸ್ವಾತಂತ್ರ್ಯ ಮುಸೂದೆ ಅದ್ಭುತ ವೇಗದಿಂದ ಕಾಯಿದೆಯಾಗಿದೆ. ಒಮ್ಮೊಮ್ಮೆ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಯಾವುದೇ ಮಹತ್ವದ ಮುಸೂದೆ ಸೇರ್ಗಡೆ ಹೊಂದಬೇಕಾದರೆ ಒಂದು ವರ್ಷ ಕಾಲ ಹಿಡಿಯುವದುಂಟು, ಆದರೆ ಇದು ಒಂದು ವಾರದೊಳಗೆ ಪಾಸಾಯಿತು. ಹಿಂದುಸ್ತಾನದ ಮೇಲಿನ ತಮ್ಮ ಹಿಡಿತವನ್ನು ಬ್ರಿಟಿಶರು ಬಿಟ್ಟುಕೊಡುತ್ತಿರುವದು ಸದುದ್ದೇಶದಿಂದಲೋ ದುರುದ್ದೇಶದಿಂದಲೋ ಎಂಬುದನ್ನು ಕಾಲವೇ ತೋರಿಸಬಲ್ಲದು, ಅನ್ನುವದು, ಹಿಂದುಸ್ತಾನ ಸಾಮಂತ ರಾಜ್ಯವಾಗಿ ಉಳಿದಷ್ಟು ಕಾಲ ಯೂನಿಯನ್ ಜಾಕನ್ನು ಉಳಿಸಿಕೊಳ್ಳುವದು ನನ್ನ ಅಭಿಪ್ರಾಯದಲ್ಲಿ ಗೌರವದ ಸಂಗತಿ. ಹಿಂದೆ ನಾವು ಬ್ರಿಟಿಶರನ್ನು ವೈರಿಗಳೆಂದು ಪರಿಗಣಿಸಿದ್ದರೂ-ಸ್ವತಃ ನಾನು ಯಾರನ್ನೂ ವೈರಿಯೆಂದು ಪರಿಗಣಿಸಿದ್ದಿಲ್ಲ— ಅಪ್ಪನ ಅಪರಾಧಕ್ಕೆ ಮಗನನ್ನು ದಂಡಿಸುವದು ನ್ಯಾಯ್ಯವಲ್ಲ. ನಾನು ದುಟ್ಟಾ ಹೋರಾಟದ ಮನುಷ್ಯ; ಆಯುಷ್ಯವನ್ನೆಲ್ಲ ಬಂಡುಹೂಡುವದರಲ್ಲಿ ಕಳೆದವ. ಯಾವದೊಂದು ಅವಮಾನಕ್ಕೆ ಎಂದೆಂದೂ ತಲೆಬಾಗುವವನಲ್ಲ. ನಿಜವಾಗಿ ಧ್ವಜದಲ್ಲಿ ಯೂನಿಯನ್ ಜಾಕಿಗೆ ಸ್ಥಾನ ಕೊಡುವದಿಲ್ಲವೆಂಬುದನ್ನು ಕಾರ್ಯಕಾರಿಣಿಯ ಸಭೆಯಲ್ಲಿ ಕೇಳಿ ನನಗೆ ವ್ಯಸನವಾಯಿತು. ಅದನ್ನು ಕಿತ್ತು ಹಾಕಿದ್ದಕ್ಕಾಗಿ ನಾವು ಸಂಕೋಚಪಡಬೇಕಾಗಿದ್ದಿಲ್ಲ. ಬ್ರಿಟಿಶ ಸರಕಾರ ನಮ್ಮ ಸ್ವಾತಂತ್ರ್ಯವನ್ನೊಪ್ಪಿ ಮನಃಪೂರ್ವಕದಿಂದ ನಮಗೆ ಸರಿದೋರಿದಂತೆ ಮಾಡಲು ಅಡ್ಡಿಯಿಲ್ಲ. ಆದರೆ ನನಗೆ ನಮ್ಮ ಸಂಪ್ರದಾಯ ಒಂದೇ ಚಿಂತೆ."

ಒಂದು ಕಠಿನ ಪ್ರಶ್ನೆ

ಎಷ್ಟು ಕೆರಳಿಸಿದರೂ ಪ್ರತ್ಯುಪ್ಕಾರಾಗಬಾರದೆಂಬುದರ ತಾತ್ಪರ್ಯವನ್ನು ಗಾಂಧೀಜಿಯು ಹಿಂದೀಯರಿಗೆ ಹೇಳುತ್ತ ಬಂದಿದ್ದಾರೆ. ಪಾಕಿಸ್ತಾನದ ಧೋರಣ ಎಂಥದೇ ಇರಲಿ, ಭಾರತವು ಹಿಂದೂ ಇಂದೂ ಹಿಂದು, ಮುಸ್ಲಿಂ, ಸೀಖ, ಪಾರಸೀಕ, ಕ್ರಿಸ್ತೀಯ ಮತ್ತು ಇತರರ ಮನೆ ಹಾಗಾಗಿಯೇ ಉಳಿಯಿತು, ಉಳಿಯ ಬೇಕಾಗಿದೆ. ಭಾರತವು ತಮ್ಮ ತಾಯ್ನಾಡೆಂದು ತಿಳಿದ ಎಲ್ಲರೂ ಸರಿಸಮಾನ ಹಕ್ಕುಬಾಧ್ಯತೆಗಳುಳ್ಳ ಭಾರತೀಯರು. ಮಾತಿಗೆ ಮಾತು, ಏಟಿಗೆ ಏಟು—ಎಂಬುದನ್ನು ಗಾಂಧೀಜಿಯೆಂದೂ ಒಪ್ಪಲಾರರು; ಅದಕ್ಕೂ ಒಂದೇಟಿಗೆ ಪ್ರತಿಯಾಗಿ ನೂರೇಟು ಕೊಡುವುದನ್ನು ಎಂದೆಂದಿಗೂ ಅಂಗೀಕರಿಸಲಾರರು. ಇದನ್ನು ಗಾಂಧೀಜಿಯು ಒತ್ತಾಯಿಸುವುದು ಅನೇಕ ಹಿಂದುಗಳ ಮನಸ್ಸಿಗೆ ನೋವನ್ನುಂಟುಮಾಡಿದೆ. ಕೆಲವರು ಅದಕ್ಕಾಗಿ ಅವರನ್ನು ನಿಂದಿಸಿಯೂ ನಿಂದಿಸಿದ್ದಾರೆ. ಮತ್ತೆ ಕೆಲವರು ಹಿಮಾಲಯಕ್ಕೆ ನಡೆಯಿರೆಂದು ಗಾಂಧೀಜಿಯನ್ನು ಮೆಲ್ಲನೆ ಪ್ರಾರ್ಥಿಸಿಕೊಂಡಿದ್ದಾರೆ. ಆದರೆ ಗಾಂಧೀಜಿಯು ಹೇಳಿದ್ದನ್ನು ನಂಬುವ ಮತ್ತು ಅದರಂತೆ ನಡೆಯಲಿಚ್ಛಿಸುವ ಹಲವು ಮಂದಿಯಿದ್ದಾರೆಂಬುದೂ ನಿಜ. ಅಂತಹ ಒಬ್ಬ ಗೆಳೆಯರು ಮೊನ್ನೆ ಗಾಂಧೀಜಿಯ ಹತ್ತಿರ ಬಂದು ತಮ್ಮ ತೊಂದರೆಗಳನ್ನು ವಿವರಿಸಿದರು. "ಮುಸ್ಲಿಮರನ್ನು ನಂಬಬಾರದೆಂದು ಕಾಂಗ್ರೆಸ ಸರಕಾರಗಳಿಗೆ ಎಚ್ಚರಿಕೆ ಕೊಡಲಾಗಿದೆ. ಮುಸ್ಲಿಮರು ದ್ರೋಹಿಗಳಾಗಿಯೂ ಪಂಚಮ ದಳದವರಾಗಿಯೂ ಕೆಲಸ ಮಾಡಬಹುದು. ಪಾಕಿಸ್ತಾನವನ್ನು ನಿಜವಸ್ತುವನ್ನಾಗಿ ಮಾಡಿದ್ದಕ್ಕೆ ಪಾಕಿಸ್ತಾನೇತರ ಪ್ರದೇಶದ ಮುಸ್ಲಿಮರ್ರತ್ಯಾಗವನ್ನೂ ಪ್ರಯತ್ನವನ್ನೂ ಜಿನ್ನಾ ಸಾಹೇಬರು ಕೊಂಡಾಡಿದ್ದಾರೆ. ಕೆಲವು ಮುಸ್ಲಿಂ ಲೀಗ ಅನುಯಾಯಿಗಳಂತೂ ಅಂಗಹೀನ ಪಾಕಿಸ್ತಾನದಿಂದ ತಾವು ತೃಪ್ತರಾಗಿಲ್ಲವೆಂದು ಬಹಿರಂಗವಾಗಿ ಹೇಳುತ್ತಿದ್ದಾರೆ. ಅವರ ಕಣ್ಣುಗಳು ದಿಲ್ಲಿ, ಆಗ್ರಾ, ಅಜಮೀರ ಮತ್ತು ಅಲಿಗಡಗಳ ಮೇಲಿವೆ. ಕೆಲವರಂತೂ ಇಡಿಯ ಹಿಂದುಸ್ತಾನದ ಮೇಲೆ ಅಧಿಪತ್ಯ ಸ್ಥಾಪಿಸುವ ಕನಸನ್ನು ಕಂಡವರು. ಅದೊಂದು ನಿಷ್ಫಲ ಸ್ವಪ್ನವೇ. ಆದರೂ ಹಿಂದುಸ್ತಾನದಲ್ಲಿಯ ಮುಸಲರು ತಮ್ಮ ಶಕ್ತಿಪ್ರಭಾವಗಳನ್ನು ಆ ಕನಸನ್ನು ನನಸಾಗಿಸುವ ಬಗ್ಗೆ ಉಪಯೋಗಿಸುವುದಿಲ್ಲವೆಂಬುದಕ್ಕೆ ಸಾಕ್ಷಿಯೇನಿದೆ?

ಮೇಲಿನ ಪ್ರಶ್ನೆಗಳಿಗೆ ಗಾಂಧೀಜಿಯು ಉತ್ತರವು ಸ್ಪಷ್ಟವೂ ನಿಶ್ಚಯಾತ್ಮಕವೂ ಆಗಿತ್ತು— "ಧರ್ಮದ ತಳಹದಿಯ ಮೇಲೆ ಕಾಂಗ್ರೆಸ ಸರಕಾರಗಳು ಒಬ್ಬರಿಂದೊಬ್ಬರನ್ನು ಭೇದ ಮಾಡಲಾರದಾಗಿವೆ. ನನ್ನ ಜೇಷ್ಠಪುತ್ರನು ಪದೇ ಪದೇ ನನ್ನ ಬಳಿಗೆ ಬಂದು ತಾನು ಇನ್ನು ಮುಂದೆ ಒಳ್ಳೆಯವನಾಗುವೆನೆಂದೂ ಮದ್ಯವನ್ನು ಮುಟ್ಟುವುದಿಲ್ಲವೆಂದೂ ಹೇಳುತ್ತಾನೆ. ನಾನು ಅವನಿಗೆ—ನಾನು ನಿನ್ನನ್ನು ನಂಬದಿದ್ದರೂ ನಿನಗೊಂದು ಅವಕಾಶ ಕೊಡುತ್ತೇನೆ— ಎಂದು ಹೇಳುತ್ತೇನೆ. ಅವನು ಇಂದಿನವರೆಗೆ ತನ್ನ ಮಾತಿನಂತೆ ನಡೆದುಕೊಳ್ಳಲು ಶಕ್ತನಾಗಿಲ್ಲ. ಆದರೂ ಅವನು ಮತ್ತೆ ಬಂದರೆ ನಾನು ಅವನನ್ನು ಓಡಿಸುವುದಿಲ್ಲ ಮತ್ತು ಅವನು ತನ್ನ ಮಾತನ್ನು ನಡೆಸುವನೆಂದು ಪುನಃ ಅವನು ನನ್ನನ್ನು ವಂಚಿಸಲು ವಾಪಸು ಬರುವ ವರೆಗೆ ನಾನು ಭರವಸೆಯಿಡುತ್ತೇನೆ. ನಾವು ಹಾಗೇ ಮುಸ್ಲಿಮರನ್ನು ನಂಬಬೇಕು, ಮತ್ತು ಅದೇ ಕಾಲದಲ್ಲಿ ಜಾಗೃತರಾಗಿರಬೇಕು."

"ನಮ್ಮ ಮನಸ್ಸಿನಲ್ಲಿ ಸಂಶಯವಿದ್ದರೆ ಅದು ನಮ್ಮ ಕಾರ್ಯಗಳಲ್ಲಿ ಪಡಿಮೂಡುವದಿಲ್ಲವೆ?" ಎಂದು ಗೆಳೆಯರು ಮತ್ತೆ ಪ್ರಶ್ನಿಸಿದರು.

"ಇಲ್ಲ" ಎಂದರು ಗಾಂಧೀಜಿ. "ಸಂಶಯದ ಆಧಾರದ ಮೇಲೆ ಯಾವ ಕಾರ್ಯವನ್ನೂ ಮಾಡಬಾರದು. ಬ್ರಿಟಿಶರತ್ತ ನೋಡಿರಿ. ಭಾರತಕ್ಕೆ ಅವರೆಷ್ಟು ಹಾನಿ ಮಾಡಿದ್ದಾರೆ! ನಾನು ಸಂಶಯದಿಂದ ಸಂಪೂರ್ಣ ಮುಕ್ತನೆಂದು ಹೇಳಲಾರೆನೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಅವರು ಸಂಪೂರ್ಣ ಪರಿವರ್ತನ ಹೊಂದಬಹುದೇ? ಎಂದು ಸಂಶಯಪಡುತ್ತೇನೆ. ನಾನು ಲಾರ್ಡ ಮೌಂಟಬ್ಯಾಟನ್ನರನ್ನು ನಂಬುತ್ತೇನೆ. ಜಗತ್ತು ನಂಬದೆ ನಡೆಯಲಾರದು. ನಾವು ಬಾಳುವ ರಾಜ್ಯಕ್ಕೆ ನಾವು ಭಕ್ತಿ ಭಾವದಿಂದ ನಡೆದುಕೊಳ್ಳಬೇಕೆಂದು ಅಲ್ಪಸಂಖ್ಯಾಕರು ಮನಗಾಣಬೇಕು. ಅವರು ಅಯೋಗ್ಯರೆಂದು ಕಂಡುಬಂದರೆ ಸರಕಾರವು ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬಲ್ಲದು. ಆದರೆ ನೀವು ಮಾತ್ರ ಅವರ ಬಗ್ಗೆ ಪೂರ್ವ ಸಿದ್ಧ ಅಭಿಪ್ರಾಯಗಳನ್ನಿಟ್ಟುಕೊಳ್ಳಬಾರದು. ನಾವು ಬರುವ ಮುನ್ನ ಸಾಯುವುದೇಕೆ?

"ಅನ್ಯಾಯದ ವಿರುದ್ಧ ಹೋರಾಡಲು, ಹೇಗೇ ಆಗಲಿ, ನಾವು ಅಣಿಯಾಗಿರಬೇಕು." ಎಂದು ಮತ್ತೊಬ್ಬ ಗೆಳೆಯರು ಒತ್ತಿ ಹೇಳಿದರು.

"ಹೌದು" ಎಂದರು ಗಾಂಧೀಜಿ. ನಿಜವಾದ ತಯಾರಿಯು ನಮ್ಮಲ್ಲಿ ರಕ್ತಗತವಾಗಿರುವ ದೌರ್ಬಲ್ಯಗಳನ್ನು ಉಚ್ಚಾಟನೆ ಮಾಡುವುದರಲ್ಲಿದೆ—ನಮ್ಮ ಸ್ವಾರ್ಥ ಮತ್ತು ಅನೈಕ್ಯಗಳನ್ನು ನಾವು ನೀಗುವುದರಲ್ಲಿದೆ."

—ಸುಶೀಲಾನಯ್ಯರ

ಹಿರೋಶಿಮದಲ್ಲಿ ಧ್ವೇಷಭೈರವ ನೃತ್ಯ

(ಹಿರೋಶಿಮ ಮತ್ತು ನಾಗಾಸಾಕಿಗಳ ಮೇಲೆ ಪ್ರಯೋಗಿಸಿದ ಅಣುಬಾಂಬಿನ ಪರಿಣಾಮಗಳ ವಿವರಗಳನ್ನು ನೋಡಿಕೊಂಡು ಬರಲು ಒಂದು ಬ್ರಿಟಿಶಪಂಗಡವು ಜಪಾನಿಗೆಹೋಯಿತು. ಪಂಗಡದಲ್ಲಿದ್ದ ವಿಜ್ಞಾನ ಸದಸ್ಯರಾದ ಡಾ. ಬ್ರೊನೋವಿಸ್ಕಿಯವರು ಮಾರ್ಚ ೨೦ ರಲ್ಲಿ ಲಂಡನ್ನಿನಿಂದ ಆಕಾಶವಾಣಿಯ ಮೂಲಕ ಅದರ ವಿಷಯವಾಗಿ ತಮಗೆನಿಸಿದುದನ್ನು ಹೇಳಿದರು. ಈ ಕೆಳಗಿನದು ಅದರ ಸಾರ.

ಪಿ. ಜೆ. ಪಿ.)

೧೯೪೫ ನೆಯ ಆಗಸ್ಟ ೬ ರಲ್ಲಿ ಹಿರೋಶಿಮ ನಗರದ ಮಧ್ಯದಲ್ಲಿ ಬಾಂಬುಸಿಡಿದಿತು. ನಾಲ್ಕು ಚದರ ಮೈಲುಗಳ ಪ್ರದೇಶದಲ್ಲಿ ಸಿಮೆಂಟಿನ ಕಟ್ಟಡಗಳನ್ನು ಬಿಟ್ಟು ಉಳಿದ ಎಲ್ಲವನ್ನೂ ನಿಮಿಷಾರ್ಧದಲ್ಲಿ ಧ್ವಂಸಮಾಡಿತು. ಉತ್ತರದಿಯಲ್ಲಿ ಹತ್ತಿರದ ತಂತಿಕಂಬಗಳ ಮೇಲೆ ಎರಗುತ್ತ, ಕಟ್ಟಡಗಳನ್ನು ಹೊತ್ತಿಸುತ್ತ, ಬಿದ್ದ ಜಾಗದಿಂದ ಒಂದು ಮೈಲೊಳಗಿದ್ದ ಮರಮಟ್ಟುಗಳತ್ತ ಪ್ರಜ್ವಲಿಸುತ್ತ ಭಯಂಕರವಾದ ಬೆಂಕಿಯೆದ್ದು ಗಗನವನ್ನು ಚುಂಬಿಸುತ್ತಿತ್ತು.

ಈ ಪ್ರಕಾರ ಆಗುವ ವಿನಾಶ ಮನಸ್ಸಿನ ಮೇಲೆ ಎಂತಹ ಆಳವಾದ ಪರಿಣಾಮಮಾಡುವುದೆಂಬುದನ್ನು ನಿಮಗೆ ಹೇಳಿದೆ. ಆದರೆ ಇಲ್ಲಿಯವರೆಗೆ ನಾನು ಹೇಳಿದುದು ವಿನಾಶದ ಅದ್ಭುತ ಪರಿಣಾಮವನ್ನು ಮಾತ್ರ. ಸಾಮಾನ್ಯ ಬಾಂಬುಗಳು ಮಾಡುವಂಥ ನಾಶವನ್ನೇ ಅದು ಮಾಡಿದೆ. ಅದು ಕೇವಲ ಅಳತೆ ಮೀರಿದ್ದಷ್ಟೆ. ನಮ್ಮ ಸಂಗಡಿಗರು ಹೇಳಿದಂತೆ "ಗಲಿವರನ ದೇಶಸಂಚಾರಗಳ"ಲ್ಲಿ ಹೇಳಿದ ಲಿಲಿಪುಟ್ಟರ ಪುಟ್ಟ ಪಟ್ಟಣದ ಮೇಲೆ ಬ್ರಿಟಿಶ ವಿಮಾನದಳದ ಅತ್ಯಂತ ಬೃಹದಾಕಾರದ ಬಾಂಬಿನ ಎರಡರಷ್ಟು ಗಾತ್ರವಿರುವ ಬಾಂಬೊಂದನ್ನು ಹಾಕಿದರೆ ಎಂತಹ ವಿನಾಶ ಉಂಟಾದೀತೋ ಹಾಗಾಗಿದೆ.

ಸಾಮಾನ್ಯ ಬಾಂಬುಗಳಿಂದುಂಟಾಗದ ಒಂದು ಹೊಸ ಪರಿಣಾಮವುಂಟಾದುದು ಗಮನಾರ್ಹವಾಗಿದೆ. ಸಿಡಿವ ಕಾಲದಲ್ಲಿ ಅಣುಬಾಂಬು ಅಮೇಯವಾಗಿ ತನ್ನ ಅಣುಶಕ್ತಿಯನ್ನು ಹೊರ ಚೆಲ್ಲುತ್ತದೆ. ಈ ಶಕ್ತಿಯ ಮಹಾಪ್ರಕಾಶವು ಬಹು ದೂರ ವ್ಯಾಪಿಸುತ್ತದೆ. ಅದರಲ್ಲಿ ಬಹು ಅಂಶವು ದೃಶ್ಯವಾದ ಬೆಳಕಾಗಿಯೂ "ಅಲ್ಟ್ರಾವಯೊಲೆಟ್" ಬೆಳಕಾಗಿಯೂ ಮಾರ್ಪಡುತ್ತದೆ. ಅದರಿಂದಲೇ ಅದರ ಪ್ರಕಾಶವು ಅಷ್ಟು ಅದ್ಭುತವಾಗಿ ಬೆಳಗಿದಂತೆ ತೋರಿತು. ಎಷ್ಟೋ ಮೈಲುಗಳ ದೂರದಲ್ಲಿ ನಿಂತು ನೋಡುವ ಜನರ ಕಣ್ಣನ್ನಾದರೂ ಅದು ಕುಕ್ಕುವಂತಿತ್ತು. ಸೂರ್ಯನ ಬೆಳಕಿನಂತೆಯೇ ಇದು ಉಷ್ಣವನ್ನು ತರುತ್ತದೆ, ಮತ್ತು ಚರ್ಮವನ್ನು ಕಪ್ಪುಮಾಡುತ್ತದೆ.

ಆದರೆ ಇದು ಸೂರ್ಯನಂತೆ ಆ ತಾಪವನ್ನು ಕ್ರಮೇಣ ಬಿಡುವುದಿಲ್ಲ. ಸೆಕೆಂಡಿನ ಸಾವಿರದ ಒಂದಂಶದ ಕಾಲದಲ್ಲಿ ಆ ಎಲ್ಲ ಉಷ್ಣವನ್ನೂ ಏಕಾಏಕಿ ಹೊರನೂಕುತ್ತದೆ. ಈ ಕಾಲವು ಅತ್ಯಲ್ಪವಾಗಿರುವುದರಿಂದ ನಮ್ಮ ಮೈ ಅಥವಾ ಇತರ ಇದಿರಿನ ಪ್ರದೇಶಗಳಿಂದ ಆ ಉಷ್ಣವನ್ನು ಗಾಳಿಯು ದೂರ ಒಯ್ಯಲಾರದು. ಅದುದರಿಂದ ೧/೧೦೦೦ ಸೆಕೆಂಡಿನಲ್ಲಿ ಮೈಲುಗಟ್ಟಲೆ ದೂರದಲ್ಲಿರುವ ಮನುಷ್ಯನ ಚರ್ಮದ ಉಷ್ಣವು ೧೦೦೦ ಅಂಶಗಳ ವರೆಗೆ ಏರಬಹುದು; ಎಂದರೆ ಕುದಿಯುವ ನೀರಿನ ಉಷ್ಣಕ್ಕೆ ಸರಿಸಮವಾಗುತ್ತದೆ.

ಪ್ರಸಾರವಾದ ಉಷ್ಣವೇ ಹಿರೋಶಿಮದಲ್ಲಿ ಬೆಂಕಿಹೊತ್ತಿಸಲು ಕಾರಣವಾಯಿತೆಂಬುದು ಖಂಡಿತ. ಆದರೆ ಅದರ ಅತ್ಯಂತ ಹೆಚ್ಚಿನ ಪರಿಣಾಮವೆಂದರೆ ಮೈದಾನ ಪ್ರದೇಶಗಳಲ್ಲಿ ನಿಂತ ಜನರ ಮೇಲಾದುದೇ. ಬಹಳ ಜನರು ಅಂತಹ ಬೀಸಿ ಬಂದ ಉರಿಯಿಂದ ಮಡಿದರು. ಬಿದ್ದ ಜಾಗದ ಹತ್ತಿರವಿದ್ದ(ಜನರ ಚರ್ಮ ಅಗಿಂದಾಗ ಸುಟ್ಟುಕಪ್ಪಾಗಿ ಅವರು ಅಲ್ಲಿಯೇ ಮೃತರಾದರು.

ಮೂರನೆಯ ಪರಿಣಾಮವೊಂದಿದೆ: ಅದು ಅತ್ಯಂತ ಹೊಸದೂ ಗಂಭೀರ ಪರಿಣಾಮಕಾರಕವೂ ಆದುದು—ಅದೇ ರೇಡಿಯೋ ಕ್ರಿಯೆ! ಆಗಲೇ ನಾನು ಸಿಡಿತದ ಕಾಲದಲ್ಲಿ ಸಂಭವಿಸಿದ ಶಕ್ತಿಪ್ರಸಾರವನ್ನು ಬಣ್ಣಿಸಿದ್ದೇನೆ. ಆ ಶಕ್ತಿಯ ಬಹಳ ಅಂಶವು ಅತಿ ಸಮೀಪದ ಪ್ರದೇಶದಲ್ಲೇ ಪ್ರಸರಿಸಲ್ಪಟ್ಟಿತು. ಅದು "ಎಕ್ಸರೇ"ಗಿಂತ ಸಣ್ಣ ತರಂಗ ಪ್ರಮಾಣವುಳ್ಳದ್ದಾದುದರಿಂದ ಅತಿ ವೇಗವಾಗಿ ದೇಹದೊಳಹೊಕ್ಕು ಮನುಷ್ಯನನ್ನು ನಾಶಮಾಡಿತು.

ಈ ರೇಡಿಯೋ ಕ್ರಿಯೆಯಿಂದ ಹೊರಡುವ ಕಿರಣಗಳಿಗೆ "ಗ್ಯಾಮಾ" ಕಿರಣಗಳೆಂದು ಹೆಸರು. ಅದು ಕಣ್ಣಿಗೆ ಕಾಣುವುದರಲ್ಲಿ ನಡೆದು ಸಿಡಿದ ಕ್ಷಣಾರ್ಧದಲ್ಲಿ ಕೊನೆಗಂಡಿತು. ಆದರೆ ಆ ರೇಡಿಯೋಕ್ರಿಯೆಯು ತನಗೆ ಬಲಿಯಾದವರನ್ನು ಒಂದೇಸಲ ಕೊಲ್ಲಲಿಲ್ಲ. ಅದು ಮೂಳೆಯೊಳಗಿನ ಪ್ರವಕ್ಕೆ ಹಾನಿಯುಂಟು ಮಾಡುತ್ತದೆ; ಅಲ್ಲಿಯೇ ರಕ್ತಕಣಗಳು ಉಪಯೋಗಿಸಿ ಕಳೆದುಕೊಂಡ ಶಕ್ತಿಯನ್ನು ತುಂಬಿಕೊಳ್ಳುವುದು. ಅಸ್ಥಿದ್ರವವು ನಾಶವಾದೊಡನೆ ರಕ್ತದಲ್ಲಿಯ ಬಿಳಿಯ ಮತ್ತು ಕೆಂಪು ಕಣಗಳು ಕೆಲಸಮಾಡುತ್ತಿರುತ್ತವೆ; ಆದರೆ ಅವಕ್ಕೆ ಬದಲಿ ಕಣಗಳು ಬಂದು ವಿರಾಮಸಿಗುವಂತೆ ಮಾಡುವುದಿಲ್ಲ. ಆದುದರಿಂದ ಮನುಷ್ಯನು ಒಂದೆರಡುದಿನಗಳ ವರೆಗೆ ಸ್ವಸ್ಥವಾಗಿಯೇ ಇರುತ್ತಾನೆ ಮತ್ತು ಒಂದು ವಾರದ ವರೆಗೆ ಬದುಕಿದ್ದರೂ ಇರಬಹುದು. ಕೆಲವು ವೇಳೆ ಅವನು ೬-೮ ವಾರಗಳ ವರೆಗೆ ಬದುಕುವುದೂ ಉಂಟು.

ಆದರೆ ಮೈಯೊಳ ಹೊಗುವ ರೇಡಿಯೋಕ್ರಿಯೆಯ ಪ್ರಕಾಶದ ಪೆಟ್ಟು ಬಿದ್ದ ಕ್ಷಣದಿಂದಲೆ ಅವನ ಅವಸಾನ ಕಾಲ ಪ್ರಾರಂಭವಾಯಿತೆಂದು ತಿಳಿಯತಕ್ಕದ್ದು. ಯುಕ್ತ ಚಿಕಿತ್ಸೆ ಕೊಡದಿದ್ದರೆ ಅವನ ಕೆಂಪು ರಕ್ತ ಕಣಗಳಿಗೆ ಬದಲು ಕೆಲಸಗಾರರು ಸಿಗದೆ ಅವನು ರಕ್ತಕ್ಷಯದಿಂದ ಸಾಯುತ್ತಾನೆ. ಉಳಿದ ರಕ್ತಕಣಗಳ ಬದಲು ಬೇರೆಯ ಕಣಗಳು ಬಾರದುದರಿಂದ ಅವನಿಗೆ ಬೇರೆ ಯಾವುದಾದರೂ ರಾಹಿಲೆ ತೊಡಗಿದರೆ ಬೇಗ ಗುಣವಾಗದೆ ಅದರಿಂದಲೇ ಸತ್ತು ಹೋಗುತ್ತಾನೆ. ಅಲ್ಲದಿದ್ದರೆ ಅವನು ರಕ್ತಸ್ರಾವದಿಂದ ಸಾಯಬಹುದು. ಏಕೆಂದರೆ ರಕ್ತವನ್ನು ಸಾಂದ್ರಗೊಳಿಸುವ ಹೊಸ ಕಣಗಳು ಪೂರಯಿಸಲ್ಪಡುವುದಿಲ್ಲ.

ಈ "ಗ್ಯಾಮಾ" ಕಿರಣಗಳಿಂದ ಮಡಿದ ಜನರು ಎಷ್ಟೆಂದು ಗೊತ್ತು ಹಚ್ಚಲು ಸಾಧ್ಯವಿಲ್ಲ. ಮುಕ್ಕಾಲು ಮೈಲು ದೂರದಲ್ಲಿದ್ದವರಲ್ಲಿ ಕೂಡ ಅರ್ಧದಷ್ಟು ಜನರು ಬಾಂಬು ಸಿಡಿದ ಕ್ಷಣಾರ್ಧದಲ್ಲಿ ನಿಧನಹೊಂದಿದರು. ಅನಂತರದ ಕೈಕಾಲುಕುಂಟಾಗುವ ಇತ್ಯಾದಿ ಅಂಗಹೀನತೆಗೂ "ಗ್ಯಾಮಾ" ಕಿರಣಗಳೇ ಕಾರಣ. ಶಿಶುಗಳು ಸಜೀವವಾಗಿ ಜನಿಸುವುದೇ ಅಪರೂಪವಾಯಿತು. ಸಿಡಿತವಾದ ನಂತರ ಎರಡು ತಿಂಗಳವರೆಗೆ "ಗ್ಯಾಮಾ" ಕಿರಣಗಳು ರೇಡಿಯೋಕ್ರಿಯಾಹತರಾದ ಗಂಡು ಹೆಣ್ಣುಗಳ ಪ್ರಜೋತ್ಪಾದನ ಶಕ್ತಿಯನ್ನೇ ಕಡಿಮೆ ಮಾಡಿದುವು.

ಜನರು ಹೇಗೆ ಸತ್ತರೆಂಬುದನ್ನು ನಾನು ನಿಮಗೆ ಹೇಳುತ್ತಿದ್ದೇನೆ; ಮತ್ತು ಎಷ್ಟು ಜನರು ಸತ್ತರೆಂದು ನೀವು ನನ್ನನ್ನು ಕೇಳುವಿರಿ. ಚಿಕ್ಕ ನಗರವಾದ ನಾಗಾಸಾಕಿಯಲ್ಲಿ ದೂರದಿಂದ ಬಾಂಬು ಸಿಡಿದ ಪರಿಣಾಮದಿಂದಲೇ ಸುಮಾರು ೪೦ ಸಾವಿರ ಜನರು ಮಡಿದರು. ಕಳೆದ ಮಹಾಯುದ್ಧದಲ್ಲಿ ಎಲ್ಲ ವೈಮಾನಿಕ ದಾಳಿಯಿಂದ ಲಂಡನ್ನಿನಲ್ಲಿ ಒಟ್ಟು ಮಡಿದವರ ಸಂಖ್ಯೆಗಿಂತ ಇದು ಬಹು ಹೆಚ್ಚು. ಹಿರೋಶಿಮದಲ್ಲಿ ಒಂದೇ ಒಂದು ಬಾಂಬು ಬಿದ್ದು ೮೦ ಸಾವಿರದಷ್ಟು ಜನರು ತೀರಿಕೊಂಡರು. ಈ ಸಂಖ್ಯೆ ಯುದ್ಧದಲ್ಲಿ ಇಡಿಯ ಇಂಗ್ಲಂಡಿನಲ್ಲಿಹತರಾದವರ ಸಂಖ್ಯೆಗಿಂತಲೂ ಬಹಳ ಹೆಚ್ಚಾಗುತ್ತದೆ. ಎರಡೂ ನಗರಗಳಲ್ಲೂ ಬಾಂಬು ಬಿದ್ದ ಸ್ಥಳದಿಂದ ಅರ್ಧ ಮೈಲೊಳಗಿದ್ದವರಲ್ಲಿ ಮುಕ್ಕಾಲು ಪಾಲು ಜನರು ಮರಣಹೊಂದಿದರು. ಆ ಜಾಗದಿಂದ ಒಂದು ಮೈಲೊಳಗಿದ್ದವರಲ್ಲಿ ನಾಲ್ಕನೆಯ ಒಂದಂಶ ಜನರು ತಮ್ಮ ಇಹ ಜೀವನವನ್ನು ಕೊನೆಗಾಣಿಸಿದರು.

ರಾಷ್ಟ್ರೀಯ ಮುಸಲ್ಮಾನರು

ರಾಷ್ಟ್ರೀಯ ಮುಸ್ಲಿಮರ ಕಥೆ ಬಹಳ ಕೆಟ್ಟು ಹೋಯಿತು. ಅವರು ಭಾರತದ ಐಕ್ಯದಲ್ಲಿ ಶ್ರದ್ಧೆಯುಟ್ಟಿದ್ದರು. ಇಸ್ಲಾಮಿನ ಬಗ್ಗೆ ಅವರಿಗೆ ಚಿಮ್ಮ ಕಡಿಮೆಯಿಲ್ಲದಿದ್ದರೂ ಅವರು ಮೊದಲಿಂದ ಕಡೆವರೆಗೆ ತಾವು ಭಾರತೀಯರೆಂದು ತಿಳಿದಿದ್ದರು. ಧರ್ಮ ಮತ್ತು ರಾಷ್ಟ್ರೀಯತೆಯೆಂಬ ಎರಡು ರಾಜ್ಯಗಳಲ್ಲಿ ತಿಕ್ಕಾಟವಿರಲಿಲ್ಲ. ಆದರೂ ಅವರು ಸಂದೇಹದ ನೆರಳಿನಲ್ಲಿ ಸಿಕ್ಕಿಬಿಟ್ಟಿದ್ದಾರೆ. ಯಾರು ಪ್ರಾಮಾಣಿಕರಿರುವರೋ ಅವರು ಮಾತ್ರ ಅಸ್ಪಶರಾಗಿ ಹೊರಬೀಳುವರು.

—ಸುಶೀಲಾನಯ್ಯರ

ನಾಲ್ಕು ಮಾತು — ರಂಗನಾಥ ದಿವಾಕರ

ಆಗಸ್ಟ ೧೫ರ ನಂತರ

ಆಗಸ್ಟ ೧೫ನೇ ತಾರೀಖಿನ ದಿವಸ ಪಾಕಿಸ್ತಾನ ಮತ್ತು ಹಿಂದುಸ್ತಾನಗಳಲ್ಲಿ ರಾಜಕೀಯ ಸತ್ತೆಯ ಹಸ್ತಾಂತರವಾಗುವದೆಂಬಲ್ಲಿ ಇನ್ನು ಏನೂ ಸಂಶಯವುಳಿದಿಲ್ಲ. ಕೊನೆಯ ವರೆಗೂ ಸಂಶಯ ಗ್ರಸ್ತರಿದ್ದ ಸೋಶಾಲಿಸ್ಟ ಪಕ್ಷದ ಗೆಳೆಯರು ಕೂಡ ಈ ಅಧಿಕಾರಾಂತರವು ಆಗಲು ಇನ್ನು ಯಾವ ಅಭ್ಯಂತರವೂ ಉಳಿದಿಲ್ಲ ಎಂದು ಒಪ್ಪಿರುವರು. ಇದು ಸಾಮಂತ ಸ್ವರಾಜ್ಯವೆ ಇದ್ದರೂ ವಸ್ತುತಃ ಪೂರ್ಣ ಸ್ವರಾಜ್ಯವೆ ಇರುವದು. ಯಾಕೆಂದರೆ ಇಲ್ಲಿಯ ಘಟನಾ ಸಮಿತಿಯವರಾಗಲಿ ಮುಂದೆ ಆಗಲಿರುವ ಸಂಯುಕ್ತ ಕೇಂದ್ರ ಅಸೆಂಬ್ಲಿಯವರೇ ಆಗಲಿ ತಾವಾಗಿ ತಮ್ಮ ಸ್ವೇಚ್ಛೆಯಿಂದ ಪಾರ್ಲಿಮೆಂಟಿನ ಯಾವದೇ ಒಂದು ಕಾನೂನಿನ ಬಂಧನವನ್ನು ಸ್ವೀಕರಿಸದೆ ಇದ್ದರೆ ಅದಾವುದೂ ಬಂಧನಕಾರಕವಾಗಲಾರದೆಂಬದು 'ಇಂಡಿಯಾ ಸ್ವಾತಂತ್ರ್ಯ' ಕಾಯದೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಇನ್ನು ಈ ಸಾಮಂತ ಸ್ವರಾಜ್ಯವನ್ನು ಎಷ್ಟು ದಿನ ಇಡುವದು, ಪೂರ್ಣ ಸ್ವರಾಜ್ಯವನ್ನು ಯಾವಾಗ ಸಾರುವದು ಈ ಮುಂತಾದ ವಿಷಯಗಳನ್ನು ನಾವೇ ನಮ್ಮ ಸ್ವಂತ ಇಚ್ಛೆಯಿಂದ ನಿರ್ಣಯಿಸಬೇಕಾಗಿದೆ. ಪಾಕಿಸ್ತಾನದವರು ಹಾಗೂ ನಾವು ಪ್ರತ್ಯೇಕವಾಗಿ ಸ್ವತಂತ್ರ ರೀತಿಯಿಂದ, ಸ್ವತಂತ್ರ ವಿಚಾರದಿಂದ ನಿರ್ಣಯಿಸಬೇಕಾದೀತು—ಏನೇ ಇರಲಿ. ನಮ್ಮ ಮನೆಯ ಕಾರಭಾರವನ್ನು ನಾವೇ ನೋಡಿಕೊಳ್ಳುವ ಜನ್ಮಸಿದ್ಧ ಹಕ್ಕು ನಮಗೆ ಇದೆ. ನಾವು ಆ ಹಕ್ಕನ್ನು ಪಡೆದೇ ತೀರತಕ್ಕವರು, ಎಂಬ ಹಟವನ್ನು ತೊಟ್ಟು ಹವ್ಯಾಸವನ್ನು ಹಿಡಿದು, ಹಗಲಿರುಳು ಹೆಣಗಾಡಿ ಕೊನೆಗೆ ಒಂದು ಮೆಟ್ಟನ್ನು ಮುಟ್ಟಿದಂತಾಗಿದೆ. ಇನ್ನು ನಾವು ಆ ಹಕ್ಕನ್ನು ಪಡೆಯಲು ಸಮರ್ಥರಿದ್ದಷ್ಟೆ ಆ ಜವಾಬದಾರಿ ಹೊರಲು ಸಮರ್ಥರಿದ್ದೇವೆ ಎಂಬುದನ್ನು ಸಿದ್ಧಪಡಿಸುವ ಕೆಲಸವು ಮುಂದಿನದಿರುವದು.

× × ×

ಆಗಸ್ಟ ೧೫ರ ನಂತರ ಈಗಿದ್ದ ಘಟನಾ ಸಮಿತಿಯೆ ಕೇಂದ್ರ ಅಸೆಂಬ್ಲಿ ಆಗುವದು. ಈಗಿದ್ದ ಕೇಂದ್ರ ಅಸೆಂಬ್ಲಿ ವಿಸರ್ಜಿಸಲಾಗುವದು. ಘಟನಾ ಸಮಿತಿಯೆ ತಾತ್ಪೂರ್ತಿಕ ಕೇಂದ್ರ ಅಸೆಂಬ್ಲಿ ಆಗುವದರಿಂದ ಅದರಲ್ಲಿಯ ಎಲ್ಲಕ್ಕೂ ದೊಡ್ಡ ಪಕ್ಷದ ಮುಖ್ಯಸ್ಥನೆ ಮುಖ್ಯಪ್ರಧಾನನಾಗಿ ಆರಿಸಲ್ಪಟ್ಟು ಅವನೇ ತನ್ನ ಮಂತ್ರಿಮಂಡಳವನ್ನು ಆರಿಸಿಕೊಳ್ಳುವನು. ಹೀಗಾಗಿ ಕೇಂದ್ರದಲ್ಲಿ ಪೂರ್ಣ ಜವಾಬದಾರ ಮಂತ್ರಿಮಂಡಳವು ಕಾರಭಾರವನ್ನು ಕೈಕೊಳ್ಳುವದು. ಪ್ರಾಂತಗಳಲ್ಲಿ ಈಗಿನ ಗವರ್ನರರು ರಾಜೀನಾಮೆ ಕೊಡುವರು. ಅವರ ಬದಲು ಸದ್ಯಕ್ಕೆ ಕೇಂದ್ರ ಸರಕಾರದ ಮುಖ್ಯ ಮಂತ್ರಿಗಳೆ ಗವರ್ನರರನ್ನು ನೇಮಿಸುವರು. ಇಷ್ಟೇ ಬದಲಾವಣೆಯೊಂದಿಗೆ ಪ್ರಾಂತಿಕ ಸರಕಾರಗಳು ನಡೆಯುವವು. ಅಕ್ಟೋಬರದ ಅಧಿವೇಶನದಲ್ಲಿ ಈಗಿನ ಘಟನಾ ಸಮಿತಿಯು ಹೊಸ ಘಟನೆಯನ್ನು ಕೊನೆಯದಾಗಿ ಸ್ವೀಕರಿಸಿ ಅಮಲಿನಲ್ಲಿ ತರಲು ಅದನ್ನು ಅಣಿಮಾಡುವದು. ಬಹುಶಃ ೧೯೪೮ರ ಪ್ರಾರಂಭದಲ್ಲಿ ಹೊಸ ಕೇಂದ್ರ ಸರಕಾರ, ಪ್ರಾಂತಿಕ ಸರಕಾರಗಳು ಪ್ರತ್ಯಕ್ಷ ಕೆಲಸ ಮಾಡಲು ಪ್ರಾರಂಭಿಸುವವು. ಅದೇ ನಿಜವಾದ ಸ್ವರಾಜ್ಯದ ಪ್ರಾರಂಭವು.

ಹೊಸ ನಾಗರಿಕತೆ

ಹಿಂದುಸ್ತಾನವು ಒಂದೇ ರಾಷ್ಟ್ರವಿತ್ತು. ಅದು ಈಗ ೧೫-೮-೪೭ನೆ ದಿನದಿಂದ ಎರಡು ರಾಷ್ಟ್ರಗಳಲ್ಲಿ ಇಬ್ಭಾಗವಾಗಿ ಹೋಗುವದು. ಇಲ್ಲಿ ಒಂದು ರಾಷ್ಟ್ರವೆಂದರೆ ಒಂದು ಪ್ರತ್ಯೇಕ ರಾಜ್ಯ ಒಂದು ಪ್ರತ್ಯೇಕ ಅಧಿರಾಜ್ಯವುಳ್ಳ ಜನಾಂಗವಿಶೇಷ. ಎಂದ ಬಳಿಕ ಈ ವರೆಗೆ ಒಂದೇ ರಾಷ್ಟ್ರದ ನಾಗರಿಕರಿದ್ದವರು ಹಲವರು ಒಂದು ರಾಷ್ಟ್ರದವರು, ಇನ್ನು ಹಲವರು ಇನ್ನೊಂದು ರಾಷ್ಟ್ರದವರು ಹೀಗೆ ಆಗುವ ಪರಿಸ್ಥಿತಿ ಉಂಟಾಗಿದೆ— ಕೇವಲ ಭೌಗೋಲಿಕ ದೃಷ್ಟಿಯಿಂದ ಹೊಸ ರಾಷ್ಟ್ರ ನಿರ್ಮಾಣವಾಗಿದ್ದರೆ ಅಷ್ಟೊಂದು ತೊಂದರೆ ಇರಲಿಲ್ಲ. ಆದರೆ ಹಾಗೆ ಆಗಿಲ್ಲ. ಮುಸಲ್ಮಾನರೆನ್ನುವವರು ಪ್ರತ್ಯೇಕ ರಾಷ್ಟ್ರದವರು ಎಂಬ ಕೂಗನ್ನು ಎಬ್ಬಿಸಿ ಪಾಕಿಸ್ತಾನದ ರಚನೆಮಾಡಲಾಗಿದೆ. ಆದುದರಿಂದ ಮುಸಲ್ಮಾನರು ಎಲ್ಲರೂ ಪಾಕಿಸ್ತಾನದ ನಾಗರಿಕರೊ ಹೇಗೆ? ಹಾಗೆ ಇದ್ದ ಪಕ್ಷದಲ್ಲಿ ಅವರು ಹಿಂದುಸ್ತಾನದಲ್ಲಿ ಪರಕೀಯರೆನಿಸುವರು! ಅವರು ಪರಕೀಯರಿದ್ದುದಾದರೆ ಹಿಂದುಸ್ತಾನದ ಘಟನಾ ಸಮಿತಿಯಲ್ಲಿಯಾಗಲಿ ಇತರ ಯಾವದೇ ಶಾಸನ ಸಭೆಯಲ್ಲಿಯಾಗಲಿ ಅವರು ಕೂಡಲು ಬರುವಂತಿಲ್ಲ. ಗ್ರೀಕರು, ರೋಮನ್ನರು ಎಷ್ಟು ಪರಕೀಯರೊ ಅಷ್ಟೇ ಅವರು ಪರಕೀಯರೆನಿಸಿಕೊಳ್ಳಬೇಕಾದೀತು! ಈ ತರದ ಅನವಸ್ಥೆಯುಂಟಾಗುವದು. ಅದೇ ರೀತಿ ಕೇವಲ ಧರ್ಮದಿಂದ ಹಿಂದುಗಳಿದ್ದವರು ಪಾಕಿಸ್ತಾನದಲ್ಲಿ ನಾಗರಿಕರಾಗಬಲ್ಲರೊ ಇಲ್ಲವೊ? ಈ ಪ್ರಶ್ನೆಗೆ ಪಾಕಿಸ್ತಾನ ಘಟನಾ ಸಮಿತಿಯವರು ಉತ್ತರ ಕೊಡಬೇಕಾದೀತು.

× × ×

ಈ ಸಂಗತಿಗಳ ಸಾಂಗೋಪಾಂಗ ವಿಚಾರ ಮಾಡಿದರೆ ನಾವು ರಾಷ್ಟ್ರದ ಅಥವಾ ರಾಜ್ಯದ ವಿಚಾರ ಮಾಡುವಾಗ ಭೌಗೋಲಿಕ ಭಾಗವನ್ನೆ ನಮ್ಮ ಗುರಿಯನ್ನಾಗಿಟ್ಟುಕೊಂಡು ಕೆಲಸ ಮಾಡಬೇಕಾಗುವದು. ವಿಶಿಷ್ಟ ಭೂಭಾಗದಲ್ಲಿ ಯಾವದೇ ಧರ್ಮ, ಜಾತಿ, ಪಂಥದವನು ಇದ್ದರೂ ಅವನು ಆಯಾ ಭೂಭಾಗದ ಹಿತಸಂಬಂಧಗಳನ್ನು ರಕ್ಷಿಸಲು ಸಿದ್ಧನಿರುವ ವರೆಗೆ, ಅದೇ ರೀತಿ ಆಯಾ ಭೂಭಾಗದಲ್ಲಿಯ ಜನರೊಡನೆ ಸಹಕಾರದಿಂದ ನಡೆಯಲೊಪ್ಪುವ ವರೆಗೆ, ಆ ಭೂಭಾಗದಲ್ಲಿಯ ಶಾಸನ ಸಭೆಗಳಿಗೆ ಅಧೀನನಿದ್ದು ಅವುಗಳೊಡನೆ ನಿಷ್ಠೆಯಿಂದ ನಡೆಯಲು ಸಿದ್ಧನಿರುವ ವರೆಗೆ ಅವನು ಆಯಾ ಭೂಭಾಗದ ನಾಗರಿಕನಾಗಿಯೆ ಇರುವನು. ಇದು ಪಾಕಿಸ್ತಾನ ಹಿಂದುಸ್ತಾನಗಳೆರಡಕ್ಕೂ ಅನ್ವಯಿಸುವದು ಹಾಗೂ ಹಿಂದೂ ಮುಸಲ್ಮಾನರಿಗಷ್ಟೇ ಅಲ್ಲ ಪಾರಸಿ, ಕ್ರಿಶ್ಚನ್, ಶೀಖ ಮುಂತಾದ ಎಲ್ಲ ಧರ್ಮದವರಿಗೂ ಜಾತಿಯವರಿಗೂ ಅನ್ವಯಿಸುವದು. ತಾನಿದ್ದ ಭೂಭಾಗ ಹಾಗೂ ಅಲ್ಲಿಯ ಜನರು, ಅಲ್ಲಿಯ ರಾಜ್ಯಪದ್ಧತಿ, ಅಲ್ಲಿಯ ಶಾಸನ ಸಭೆಗಳು ಮುಂತಾದವುಗಳಿಗೆ ಏಕನಿಷ್ಠನಾಗಿ ನಡಕೊಳ್ಳದೆ ಹೋದರೆ ಅವನು ದ್ರೋಹಿಯೆನಿಸುವನು. ಹಾಗೂ ಅವನಿಗೆ ಎಲ್ಲಕ್ಕೂ ಕಠೋರವೆಂದರೆ ಗಡಿಪಾರಿನ ಇಲ್ಲವೆ ಗಲ್ಲಿನ ಶಿಕ್ಷೆ ಸಹ ವಿಧಿಸುವ ಪ್ರಸಂಗವು ಬಂದರೂ ಬರುವದು. ಈ ಸಂದರ್ಭದಲ್ಲಿ "ನಾಗರಿಕ"ನ ವ್ಯಾಖ್ಯೆ ಮುಂತಾದವುಗಳು ಅತೀವ ಸ್ಪಷ್ಟವಿರಲಿಕ್ಕಬೇಕೆಂದು ಬೇರೆ ಹೇಳಬೇಕಾಗಿಲ್ಲ.

ನವಯುಗ

೧೮—೭—೪೭ ನೆಯ ದಿನ ಹಿಂದುಸ್ತಾನದ ರಾಜಕೀಯ ನವಯುಗವು ಪ್ರಾರಂಭಿಸಿತೆಂದು ಇತಿಹಾಸಕಾರರು ಬರೆದಿಡುವರು ಎಂಬುದು ಸಿದ್ಧಾಂತ. ಅಧಿಕಾರಾಂತರದ ಪ್ರತ್ಯಕ್ಷ ಸಮಾರಂಭವು ೧೫—೮—೪೭ ನೆಯ ದಿನ ನಡೆಯುವದಾದರೂ ಆರನೆಯ ಜಾರ್ಜ ಅರಸರ ಸಮ್ಮತಿ ಸಿಕ್ಕ ಕ್ಷಣಕ್ಕೆಯೆ ಹಿಂದುಸ್ತಾನವು ಸಾಮಂತ ಸ್ವರಾಜ್ಯದ ಅಧಿಕಾರಿಯಾಯಿತೆಂಬಲ್ಲಿ ಸಂಶಯವಿಲ್ಲ. ಜಗತ್ತಿನ ಯಾವದೇ ದೇಶದ ಇತಿಹಾಸವನ್ನು ತೆರೆದು ನೋಡಿದರೂ ಅಧಿಕಾರದ ಹಸ್ತಾಂತರವು ಇಷ್ಟು ದೊಡ್ಡ ಪ್ರಮಾಣದಲ್ಲಿ ಇಷ್ಟು ಶಾಂತತೆಯಿಂದ ಇಷ್ಟು ಸಾಮೋಪಚಾರದಿಂದ ಆದ ಉದಾಹರಣೆಯು ಇದೇ ಮೊದಲನೆಯದು. ಬ್ರಿಟಿಶ್ ಪಾರ್ಲಿಮೆಂಟನಲ್ಲಿ ಈ ಬಗ್ಗೆ ಆದ ಚರ್ಚೆಯನ್ನು ನೋಡಿದರೂ ಕೂಡ ಅದರಲ್ಲಿ ಯಾವದೇ ಬಗೆಯ ಕಹಿತನವು ಕಂಡುಬರಲಿಲ್ಲ. ಚರ್ಚಿಲ್ ಸಾಹೇಬರು ಆಗ ಹಜರ ಇರಲಿಲ್ಲ. ಅವರು ಆಗ ಒಂದು ಚಿಕ್ಕ ಶಸ್ತ್ರಕ್ರಿಯೆಯ ಮೂಲಕ ಹಾಸಿಗೆ ಹಿಡಿದಿದ್ದರು. ಅವರಿದ್ದರೆ ಕದಾಚಿತ್ ಒಂದೆರಡು ಬಿರುಸಾದ ಮಾತುಗಳನ್ನಾಡಬಹುದಾಗಿತ್ತು! ಯಾಕೆಂದರೆ ಸಾಮ್ರಾಜ್ಯವನ್ನು ಮುರಿಯುವ ಉದ್ಯೋಗಮಾಡಲು ನಾನು ಬ್ರಿಟಿಶ್ ಮುಖ್ಯ ಪ್ರಧಾನನಾಗಿಲ್ಲ ಎಂದು ಅವರು ಮುಖ್ಯ ಮಂತ್ರಿಗಳಾಗಿದ್ದಾಗ ೧೯೪೨ರಲ್ಲಿ ನುಡಿದಿದ್ದರು! ಇರಲಿ. ಅವರ ಪಕ್ಷದವರು ಕೂಡ ಯಾವದೇ ಬಗೆಯ ಅವಾಸ್ತವ ಮಾತುಗಳನ್ನಾಡದೆ ಈ ಹಿಂದುಸ್ತಾನದ ಸ್ವಾತಂತ್ರ್ಯದ ಕಟ್ಟಳೆಗೆ ಸಮ್ಮತಿ ಕೊಟ್ಟುಬಿಟ್ಟರು. ಬ್ರಿಟಿಶರು ಒಳ್ಳೆಯ ಸಂತೋಷದಿಂದ ಸಾಮ್ರಾಜ್ಯವನ್ನು ಬಿಟ್ಟರು ಎಂದು ಇದರ ಅರ್ಥವಲ್ಲ. ಕಾಲ, ಪರಿಸ್ಥಿತಿ ಇವುಗಳನ್ನು ಚೆನ್ನಾಗಿ ಅರಿತುಕೊಂಡು ಅವರು ಇನ್ನು ಹೆಚ್ಚು ದಿನ ಇಲ್ಲಿ ತಾವು ಅರಸರಾಗಿ ಆಳುವದು ಸಾಧ್ಯವಿಲ್ಲ ಎಂಬುದನ್ನು ತಿಳಿದು ಅಧಿಕಾರತ್ಯಾಗ ಮಾಡಿದರು. ಅಖಂಡ ೧೫೦ ವರುಷ ಏಕಚಕ್ರಾಧಿಪತಿಗಳಾದ ಅವರು ಈ ದೇಶವನ್ನು ಬಿಟ್ಟು ಹೋಗಬೇಕಾದರೆ ಅವರಿಗೆ ದುಃಖವಾಗಿಲ್ಲ, ಕಷ್ಟವೆನಿಸಿಲ್ಲ ಎಂದು ಹೇಳುವ ಬಗೆಯಾವುದು? ಅವರೂ ಮನುಷ್ಯರೇ. ದಿಲ್ಲಿಯ ಆ ವಿಶಾಲವಾದ ಭವ್ಯ ರಾಜಮಂದಿರವನ್ನು ಕಚೇರಿಗಳನ್ನು ಡಾಂಬರ ಬೀದಿಗಳನ್ನು ನೋಡಿದರೆ ಇವುಗಳನ್ನೆಲ್ಲ ಇವರು ಹೇಗೆ ಬಿಟ್ಟು ಹೋಗುತ್ತಿರುವರು ಎಂದು ಆಶ್ಚರ್ಯವಾಗಿ ಕೇಳಬಹುದು; ಆದರೆ ಬಿಟ್ಟು ಹೊರಟದ್ದು ನಿಜ. ಇದೇನು ಕನಸಲ್ಲ ಪ್ರತ್ಯಕ್ಷ ನಡೆಯುತ್ತಿರುವ ಸಂಗತಿ.

ರಕ್ತಪಾತವಿಲ್ಲದೆ ಅಧಿಕಾರದ ಹಸ್ತಾಂತರವಾದ ಉದಾಹರಣೆ ಇತಿಹಾಸದಲ್ಲಿ ಅತ್ಯಂತ ವಿರಳ. ಇಂಥ ದೊಡ್ಡ ಪ್ರಮಾಣದ ಮೇಲಂತೂ ಎಲ್ಲೆಲ್ಲಿಯೂ ಆಗಿಲ್ಲ. ಇನ್ನು ಹಿಂದೂ ಮುಸಲ್ಮಾನರ ದೊಂಬಿಗಳಾಗಿ ರಕ್ತಪಾತವಾಗಲಿಲ್ಲವೆ? ಎಂದು ಯಾರಾದರೂ ಪ್ರಶ್ನೆ ಕೇಳಬಹುದು. ಆದರೆ ಆ ರಕ್ತಪಾತವು ನಮ್ಮ ನಮ್ಮೊಳಗಿನದು. ಬ್ರಿಟಿಶರಿಗೆ ಹಾಗೂ ನಮಗೆ ನಡೆದು ಬಂದ ಹೋರಾಟದ ಭಾಗವಲ್ಲ. ಬಂದ ಅಧಿಕಾರವನ್ನು ಹಂಚಿಕೊಳ್ಳುವದಕ್ಕಾಗಿ ನಾವೇ ನಮ್ಮ ನಮ್ಮೊಳಗೆ ಹೂಡಿದ ಹೋರಾಟವದು. ತಕ್ಕಮಟ್ಟಿಗೆ ಬ್ರಿಟಿಶರು ಅದನ್ನು ಪೋಷಿಸಿರಬಹುದು. ಆ ಮಾತು ಬೇರೆ; ಆದರೆ ನಾವೇ ಪರಸ್ಪರ ಅವಿಶ್ವಾಸದಿಂದ ನಡೆದುಕೊಳ್ಳದಿದ್ದರೆ ಪೂರ್ಣ ಸ್ವಾತಂತ್ರ್ಯವು ದೊರೆತ ಮೇಲೆ ಹೋರಾಡುವಾ ಎಂದಿದ್ದರೆ ಬ್ರಿಟಿಶರು ಏನೂಮಾಡಲಿಕ್ಕಾಗುತ್ತಿರಲಿಲ್ಲ. ಏನೇ ಇರಲಿ, ಈಗಂತೂ ನಮ್ಮ ನಮ್ಮೊಳಗಿನ ಜಗಳದ ಫಲವಾಗಿ ಹಿಂದುಸ್ತಾನವು ತುಂಡುಗಳಾಗಿ ಭಾಗಿಸಲ್ಪಟ್ಟಿತು. ಅದೊಂದು ಈ ಕಾಲದ ವಿಶೇಷವೇ ಎಂದು ತಿಳಿದುಕೊಂಡು ನಾವು ನಡೆಯಲಿಕ್ಕೆ ಬೇಕು. ಈ ನವಯುಗದಲ್ಲಿ ಇನ್ನು ನಾವು ಸಾವಿರಾರು ಅತೀವ ಮಹತ್ವದ ಪ್ರಶ್ನೆಗಳನ್ನು ಬಿಡಿಸಬೇಕಾಗುವದು; ಅವುಗಳ ಹೊಣೆ ನಮ್ಮ ಮೇಲೆಯೆ ಇದೆ.


ಕಾಂಗ್ರೆಸ್ಸಿನ ಭವಿತವ್ಯ

೧೮-೭-೪೭ ನೆಯ ದಿನ ಕಾಂಗ್ರೆಸ್ಸಿನ ಧ್ಯೇಯವು ಸಾಧ್ಯವಾಯಿತು ಎಂದು ಹೇಳಬಹುದು. 'ಹಿಂದುಸ್ತಾನದ ಸ್ವಾತಂತ್ರ್ಯದ ಕಟ್ಟಳೆ' ಎಂಬ ಪಾರ್ಲಿಮೆಂಟಿನ ಕಟ್ಟಳೆಗೆ ಬ್ರಿಟಿಶ್ ಅರಸರಾದ ಆರನೆಯ ಜಾರ್ಜರು ಆ ದಿನ ೪ ಗಂಟೆಗೆ ಸಮ್ಮತಿಕೊಟ್ಟದ್ದರಿಂದ ಹಿಂದುಸ್ತಾನದಲ್ಲಿ ಸಾಮಂತ ಸ್ವರಾಜ್ಯದ (ಡೋಮಿನಿಯನ್ ಗವ್ಹರ್ನಮೆಂಟ) ಸ್ಥಾಪನೆಯಾಯಿತು. ಇದು ಬರಿಯ ಸಾಮಂತ ಸ್ವರಾಜ್ಯವು, ಪೂರ್ಣ ಸ್ವಾತಂತ್ರ್ಯವಲ್ಲ ಎಂದು ಹಲವರು ಹೇಳಬಹುದು. ಒಂದು ರೀತಿ ಇದು ನಿಜವು. ಆದರೆ ಆ ಕಟ್ಟಳೆಯಲ್ಲಿಯೆ 'ಇನ್ನು ಮುಂದೆ ಬ್ರಿಟಿಶ್ ಪಾರ್ಲಿಮೆಂಟಿನ ಕಟ್ಟಳೆಗಳ ಅಮಲು ಹಿಂದುಸ್ತಾನದಲ್ಲಿ ನಡೆಯುವದಿಲ್ಲ. ಹಿಂದುಸ್ತಾನದ ಪಾರ್ಲಿಮೆಂಟಿನವರು ಆಯಾ ಕಟ್ಟಳೆಗಳನ್ನು ಸ್ವೀಕರಿಸಿದರೆ ಮಾತ್ರ ಅವು ಹಿಂದುವಾಸಿಗಳಿಗೆ ಅನ್ವಯಿಸಬಲ್ಲವು; ಇಲ್ಲದಿದ್ದರೆ ಇಲ್ಲ' ಎಂಬ ಸ್ಪಷ್ಟವಾದ ಕಲಮು ಇರುವದು. ಆದುದರಿಂದ ಪೂರ್ಣ ಸ್ವಾತಂತ್ರ್ಯಕ್ಕೂ ಈ ಬಗೆಯ ಸಾಮಂತ ಸ್ವರಾಜ್ಯಕ್ಕೂ ಯಾವ ಭೇದವೂ ತತ್ವತಃ ಇಲ್ಲ ಎಂದು ಹೇಳಬಹುದು. ಏನೇ ಇರಲಿ ಕಾಂಗ್ರೆಸ್ಸಿನ ಮುಂದಿನ ಭವಿತವ್ಯದ ವಿಚಾರವನ್ನು ಇನ್ನು ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಮಾಡುವದು ಅತ್ಯವಶ್ಯವಿರುವದು. ಈಗ ೬೦ ವರ್ಷಗಳ ವರೆಗೆ ಸತತ ರಾಜಕೀಯ ಕಾರ್ಯವನ್ನು ಮಾಡುತ್ತ ಬಂದ ಕಾಂಗ್ರೆಸ್ಸನ್ನು ನಾಳೆ ವಿಸರ್ಜಿಸಬೇಕೆಂದು ಹೇಳುವದು ಬಹಳ ತಪ್ಪು. ಕಾಲಾನುಸಾರವಾಗಿ ರಾಷ್ಟ್ರಸೇವೆಯ ಕಾರ್ಯಮಾಡಲು ಆ ಸಂಸ್ಥೆಯನ್ನು ಅಣಿಗೊಳಿಸುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಸಕಲ ಹಿಂದವಾಸಿಗಳನ್ನೂ ಏಕಸೂತ್ರದಿಂದ ಈ ವರೆಗೆ ಕಟ್ಟಿ ಅವರನ್ನು ಸ್ವಾತಂತ್ರ್ಯಕ್ಕೆ ಅರ್ಹರನ್ನಾಗಿ ಮಾಡಿದ ಈ ಸಂಸ್ಥೆಯನ್ನು ಯೋಗ್ಯವಾಗಿ ಮಾರ್ಪಡಿಸಿ ಮುಂಬರಿಯುವದು ಅತ್ಯವಶ್ಯವು.

ದಕ್ಷಿಣ ಸಂಸ್ಥಾನಗಳ ಒಕ್ಕೂಟ

ರಾಜಕೀಯ ಅಧಿಕಾರ ಮಾತ್ರವು ಅಥವಾ ಅಧಿರಾಜ್ಯಾಧಿಕಾರವು ಜನತಾಗತವಿರುವದು, ಜನರಿಂದ ಚುನಾಯಿತರಾದವರ ಪ್ರತಿನಿಧಿಗಳೆ ಘಟನಾ ಸಮಿತಿಯನ್ನು ನಿರ್ಮಿಸಿಕೊಂಡು ತಮ್ಮ ಘಟನೆಯನ್ನು ರಚಿಸಬೇಕು. ಕನ್ನಡ ಮರಾಠಿ ಎಂಬ ಎರಡು ಪ್ರತ್ಯೇಕ ಭಾಗಗಳಿರಬೇಕು. ಆಯಾ ಭಾಗಗಳು ನಾಳೆ ಆಗಲಿರುವ ಕನ್ನಡ ಮರಾಠಿ ಪ್ರಾಂತಗಳಿಗೆ ಸೇರಲು ಘಟನೆಯಲ್ಲಿ ಅವಕಾಶವಿರಬೇಕು. ಇತ್ಯಾದಿ ಮುಖ್ಯ ಮಾತುಗಳನ್ನೊಳಗೊಂಡ ಯೋಜನೆಯನ್ನು ಹನ್ನೊಂದು ಸಂಸ್ಥಾನಿಕರು (ಕೊಲ್ಹಾಪೂರ, ಸಾವಂತವಾಡಿ, ಮುಧೋಳ, ಅಕ್ಕಲಕೋಟ ಇವರು ಬಿಟ್ಟು) ಒಪ್ಪಿದ್ದರೆಂದು ವಿಶ್ವಸನೀಯವಾಗಿ ತಿಳಿದಿದೆ. ನಂತರ ಸಂಸ್ಥಾನೀ ಪ್ರಜೆಗಳ ಮುಖ್ಯ ಪ್ರಾತಿನಿಧಿಕ ಸಂಸ್ಥೆಯ ಕಾರ್ಯಕಾರಿ ಸಭೆಯವರು ದಿಲ್ಲಿಯಲ್ಲಿ ಕೂಡಿದಾಗ ಈ ಯೋಜನೆ ಯೋಗ್ಯವಿದೆ ಎಂದು ಅಭಿಪ್ರಾಯಪಟ್ಟರು. ಆದರೆ ಯಾವದೇ ಕಾರಣಗಳ ಮೂಲಕ ಈ ಯೋಜನೆ ಮಾತ್ರ ಮುಂದೆ ದೂಡುತ್ತ ನಡೆದಿದೆ. ಹೀಗೆ ಮುಂದೆ ದೂಡುವದರಿಂದ ಆಯಾ ಸಂಸ್ಥಾನಿಕರ ಹಾನಿಗಿಂತ ಆಯಾ ಸಂಸ್ಥಾನೀ ಪ್ರಜೆಗಳ ಹಾನಿ ಹೆಚ್ಚು ಆಗುತ್ತಿರುವದೆಂದು ಹೇಳಬಹುದು ತಾವು ಇನ್ನು ಕೇವಲ ಪೆನ್ಶನ್ನಿನ ಮಾಲಕರು ಎಂಬುದನ್ನು ಅನೇಕ ಸಂಸ್ಥಾನಿಕರು ತಿಳಿದುಕೊಂಡು ಬಿಟ್ಟಿದ್ದಾರೆ. ಆದರೆ ವೇಳೆ ಮುಂದೆ ಹೋದ ಹಾಗೆಲ್ಲ ಈಗ ಜಮಖಂಡೀಕರರು ಹಾಗೂ ಜತ್ತಿಯವರು ಒಕ್ಕೂಟದಲ್ಲಿ ಸೇರಲು ನಿರಾಕರಿಸತೊಡಗಿದ್ದಾರೆ. ಅವರು ಕೊಲ್ಹಾಪೂರ ಸಂಸ್ಥಾನದೊಡನೆ ಸಹಕರಿಸುವವರಿದ್ದಾರೆ! ಕೊಲ್ಹಾಪುರದವರು ತಮ್ಮ ಪ್ರಜೆಗಳಿಗೆ ಘಟನಾ ಸಮಿತಿಯನ್ನಾಗಲಿ ಪೂರ್ಣ ಜವಾಬ್ದಾರ ರಾಜ್ಯಪದ್ಧತಿಯನ್ನಾಗಲಿ ಕೊಡಲು ಸದ್ಯಕ್ಕಂತೂ ಒಪ್ಪಿಲ್ಲ. ಹೀಗೆ ಕಾಲಾವಧಿ ಹೋದರೆ ಪ್ರತಿಗಾಮಿ ಧೋರಣವಿದ್ದ ಕೊಲ್ಹಾಪುರಕ್ಕೆ ಇನ್ನು ಒಂದೆರಡು ಸಂಸ್ಥಾನಿಕರು ಕೂಡುವ ಸಂಭವವಿದೆ. ಹೀಗೆ ಆದರೆ ಅಲ್ಲಿಯ ಪ್ರಜೆಗಳ ಹಾನಿಯಾಗುವದು. ಅರ್ಥಾತ್ ಆ ಸಂಸ್ಥಾನವು ಕನ್ನಡವಿದ್ದರೆ ಕನ್ನಡಿಗರ ಹಾನಿಯೂ ಆಗುವದು, ಅಂತೂ ಪ್ರಜೆಗಳ ಹಾನಿಯಾಗುವದು ನಿಶ್ಚಯ. ಆದುದರಿಂದ ಇನ್ನು ವೃಥಾ ಕಾಲವನ್ನು ಕಳೆಯದೆ ಈ ಯೋಜನೆಯ ಪೂರ್ಣ ವಿಚಾರ ಮಾಡಿ ಅದು ಪ್ರಜೆಗಳಿಗೆ ಪೂರ್ಣ ಜವಾಬ್ದಾರ ರಾಜ್ಯಪದ್ಧತಿಯನ್ನು ಕೊಡುವಂತಹದು ಇದ್ದ ಪಕ್ಷದಲ್ಲಿ ಅದನ್ನು ಸ್ವೀಕರಿಸಿ ಆಯಾ ಒಪ್ಪಿಗೆ ಕೊಟ್ಟ ಸಂಸ್ಥಾನಿಕರನ್ನಾದರೊ ಬದ್ಧವಚನರನ್ನಾಗಿ ಮಾಡುವದು ರಾಜಕೀಯ ದೃಷ್ಟಿಯಿಂದ ಜಾಣತನದ್ದಾಗುವದೆಂಬಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದಲೆ ಈ ಯೋಜನೆಯನ್ನು ಮುಖ್ಯವಾಗಿ ಕೂಡಲೆ ವಿಚಾರಿಸತಕ್ಕದ್ದು. ಅವಾಂತರ ವಿಚಾರಗಳ ತೊಡಕನ್ನು ಇದರಲ್ಲಿ ಸೇರಿಸಿ ಪ್ರಜೆಗಳು ತಮ್ಮ ಹಾನಿಯನ್ನು ತಾವು ಮಾಡಿಕೊಳ್ಳುವದರಲ್ಲಿ ಯಾವ ಜಾಣತನವೂ ಇಲ್ಲ. ಮೊದಲು ಸೇರಲಿದ್ದ ಜಮಖಂಡಿಯು ಈ ಹೊತ್ತು ಸೇರದಿದ್ದರೆ ಅಲ್ಲಿಯ ಪ್ರಜೆಗಳ ಹಾನಿಯು ಆಗುವದೆಂಬುದು ಸ್ಪಷ್ಟ ಒಡೆದು ಕಾಣುವದು. ಹೀಗೆಲ್ಲ ಹೆಚ್ಚಾಗಿ ಆಗುವ ಪೂರ್ವದಲ್ಲಿ ಜನರು ತಮ್ಮ ಕರ್ತವ್ಯವನ್ನು ಮಾಡುವದು ಅವಶ್ಯವಿರುವದು. ಇಲ್ಲದೆ ಹೋದರೆ ಜಮಖಂಡಿಯಂತೆ ಒಡೆದು ಹೋದ ಸಂಸ್ಥಾನಿಕರ ಪ್ರಜೆಗಳ ಪ್ರಶ್ನೆಯ ವಿಚಾರವನ್ನು ಪ್ರತ್ಯೇಕವಾಗಿ ಮಾಡುತ್ತ ಕೂಡುವ ಪ್ರಸಂಗ ಬರುವದು.

ಮೈಸೂರಿನ ಕಲಾವಿದರಾದ ಶ್ರೀ ಎಂ. ವೀರಪ್ಪನವರು ನಗರಾಧ್ಯಕ್ಷರಾಗಿದ್ದು ವರ್ಗಾಯಿಸಲ್ಪಟ್ಟಿರುವ ಶ್ರೀ ರಾಮಚಂದ್ರರಾವ್ ಭೀಂಬೋರೆಯವರನ್ನೂ ಭಾರತದ ಪ್ರತಿನಿಧಿಯಾಗಿ ಅಂತರ್ರಾಷ್ಟ್ರೀಯ ಸ್ಕೌಟ್ ಸಮ್ಮೇಲನಕ್ಕೆ ಹೋಗಲಿರುವ ಶ್ರೀ ಪಿ ಶಿವಶಂಕರರನ್ನೂ ಬರಮಾಡಿಕೊಂಡು ತಾ ೧೭ರ ರಾತ್ರಿ ತಮ್ಮ "ಚಿತ್ರಾಲಯ" ವೆಂಬ ಮನೆಯಲ್ಲಿ ಸತ್ಕರಿಸಿದರು.



ಮುಂಬಯಿ

ಅಖಿಲ ಭಾರತ ಹಿಂದು ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಭೋಪಟಕರರು ಹಿಂದುಗಳನ್ನುದ್ದೇಶಿಸಿ ಒಂದು ಪ್ರಕಟನೆಯನ್ನು ಹೊರಡಿಸಿ ಆಗಸ್ಟ ೧೫ರ ಆಚರಣೆಯಲ್ಲಿ ಭಾಗವಹಿಸಬಾರದೆಂದು ಬಿನ್ನವಿಸಿದ್ದಾರೆ.

ತಾ ೨೦ರ ಕೂಲಿಕಾರ ಸಂಘದ ಸಭೆಯಲ್ಲಿ ನಿಶ್ಚಯಿಸಿದಂತೆ ಮುಂಬಯಿ ಬಂದರಿನ ಕೆಲಸಗಾರರು ತಾ ೨೦ರಲ್ಲಿ ಸಂಪು ಹೂಡಿದರು. ೮ ಸಾವಿರಕ್ಕಿಂತ ಹೆಚ್ಚು ಕೂಲಿಕಾರರು ಧರಣೆ ಸಂಪನ್ನು ಪ್ರಾರಂಭಿಸಿದರು.

ಮುಂಬಯಿಯ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಧುರೀಣರಾದ ಶ್ರೀ ಬಿ. ಜಿ. ಖೇರರು ಶ್ರೀ ಎಸ್. ಎನ್. ಮೂನೆಯವರ ರಾಜೀನಾಮೆಯಿಂದ ಘಟನಾ ಸಮಿತಿಯಲ್ಲಿ ತೆರವಾದ ಸ್ಥಳಕ್ಕೆ ಕೇಂದ್ರ ಶಾಸನ ಸಭೆಯಲ್ಲಿ ಅಧ್ಯಕ್ಷರಾದ ಶ್ರೀ ಮಾವಳಣಕರರನ್ನು ಸೂಚಿಸಬೇಕೆಂದು ನಿಶ್ಚಯಿಸಿದ್ದಾರೆ.

ಮುಂಬಯಿ ಬಂದರಿನ ಸಮೀಪದಲ್ಲಿ ತಾ. ೧೭ ರಲ್ಲಿ "ರಾಮದಾಸ"ವೆಂಬ ಹಡಗು ಮುಳುಗಿ ೬೦೦ ರಷ್ಟು ಜನರು ನೀರುಪಾಲಾದರು. ಅವರಲ್ಲಿ ೧೦೧ ಜನರ ಶವಗಳು ಕುಲಾಬಾ ಜಿಲ್ಲೆಯ ಎಲಿಫಂಟಾ ಉರಣ ಮತ್ತು ಕಂದಾಜಾಗಳ ಬಳಿ ಸಮುದ್ರ ತೀರದಲ್ಲಿ ದೊರೆತಿವೆಯೆಂದು ತಿಳಿದು ಬರುತ್ತದೆ.

ಹಿಂದುಸ್ತಾನದ ಕ್ಯಾಥೊಲಿಕ್ ಪಾದ್ರಿಗಳ ಪರಿಷತ್ತಿನ ಅಧ್ಯಕ್ಷರೂ ಕಾರ್ಯದರ್ಶಿಗಳೂ ಹಿಂದುಸ್ತಾನದ ಸ್ವಾತಂತ್ರ್ಯ ಮತ್ತು ಕ್ಯಾಥೊಲಿಕರು ಎಂಬ ವಿಷಯದ ಬಗ್ಗೆ ಒಂದು ಪ್ರಕಟನೆ ಹೊರಡಿಸಿದ್ದು ಅದರಲ್ಲಿ ಹಿಂದುಸ್ತಾನವು ಕಠಿನ ಕಾಲವನ್ನು ನೀಗಿ ಕೀರ್ತಿ ವೈಭವಗಳನ್ನು ಪಡೆಯಲೆಂದು ಜಗತ್ತಿನ ಎಲ್ಲ ಕ್ಯಾಥೊಲಿಕರೂ ಪ್ರಾರ್ಥಿಸಬೇಕೆಂದು ಬೇಡಿದ್ದಾರೆ.

ಮುಂಬಯಿ ಸರಕಾರದವರು ಪ್ರಾಂತದಲ್ಲಿ ಹೆಸರು ಉದ್ದು ಹಾಗೂ ಚನ್ನಂಗಿಗಳ ಧಾರಣೆ ಮತ್ತು ಚಲನವಲನಗಳ ಮೇಲೆ ಹಾಕಿದ ನಿಯಂತ್ರಣವನ್ನು ಹಿಂತೆಗೆದುಕೊಂಡಿರುವಾಗಿ ಜುಲೈ ೧೭ ರ ಗರ್ಝೆಟ್ಟಿನಲ್ಲಿ ಹೇಳಿದೆ.

ಮುಂಬಯಿ ನಗರದಲ್ಲಿ ಜನಸಂಖ್ಯೆಗಿಂತ ಹೆಚ್ಚಾಗಿರುವ ಆರೇಳು ಲಕ್ಷ ಸೀದಾ ಕಾರ್ಡುಗಳ ಶೋಧನಕ್ಕಾಗಿ ಸರ್ವ ಪ್ರಯತ್ನ ಮಾಡಲು ಸರಕಾರದ ಸೀದಾ ಶಾಖೆಯವರು ದೃಢ ನಿರ್ಧಾರ ಮಾಡಿರುವರು.

ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಸೇನ ಮತ್ತು ಗಜೇಂದ್ರಗಡಕರರು ಠಾಣಾ ಜಿಲ್ಲೆಯ ಡೆಪ್ಯುಟಿ ಕಲೆಕ್ಟರ್ ಮತ್ತು ಅಡಿಶನಲ್ ಮ್ಯಾಜಿಸ್ಟ್ರೇಟರಾಗಿದ್ದ ಕಾನುಭಾಯಿ ಹೋರಾ ಇವರಿಗೆ ಠಾಣಾ ಸೆಶನ್ಸ ಜಡ್ಜರು ವಿಧಿಸಿದ ಶಿಕ್ಷೆಯ ಮೇಲೆ ಮಾಡಿದ ಅಪೀಲಿನಲ್ಲಿ ಆರೋಪಿಯ ಸಶ್ರಮ ಶಿಕ್ಷೆಯನ್ನು ೧ ವರ್ಷದ ವರೆಗೂ ದಂಡವನ್ನು ೧೦೦೦ ರೂಪಾಯಿಗಳಿಗೂ ಹೆಚ್ಚಿಸಲಾಯಿತು.

ರಾಜಾಪುರ ಮುಸ್ಲಿಂಲೀಗ ಅಧ್ಯಕ್ಷರಾದ ಹುಸೇನ ಅಹಮ್ಮದ ಪೀರಭಾಯಿ ಮುಲೀಕರು ಮುಂಬಯಿ ಸಾರ್ವಜನಿಕ ಸುರಕ್ಷಿತತೆ ಕಾಯದೆಯನ್ವಯ ತಾ ೧೬ರಲ್ಲಿ ಬಂಧಿಸಲ್ಪಟ್ಟರು.

ಮುಂಬಯಿ ಸರಕಾರದವರು ಕ್ರಿಮಿನಲ್ ಟ್ರಾಯಬ್ಸ್ ಕಾಯದೆಯ ವಿಚಾರಣಾ ಸಮಿತಿಯ ಸೂಚನೆಗನುಸಾರವಾಗಿ ರದ್ದು ಮಾಡಲು ನಿರ್ಧರಿಸಿದ್ದು ಅದರ ಬದಲು ನಿರಂತರ ಗುನ್ಹೆಗಾರರ ಕಾಯದೆ ಜಾರಿಯಲ್ಲಿ ತರಲಿರುವರು.

ಆಗಸ್ಟ ೧೫ಕ್ಕೆ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಎಲ್ಲ ರಾಜಕೀಯ ಕೈದಿಗಳನ್ನೂ ಕ್ಷಮಿಸಿ ಅವರನ್ನು ಬಿಡುಗಡೆ ಮಾಡಬೇಕೆಂಬ ಸೂಚನೆಯ ಬಗ್ಗೆ ಮುಂಬಯಿ ಸರಕಾರದವರು ವಿಚಾರ ನಡೆಸಿದ್ದಾರೆ.

ಹರಿಜನರಿಗೆ ಪ್ರವೇಶ ನಿರಾಕರಿಸಿದ್ದಕ್ಕಾಗಿ ತಾ ೨೦ ರಲ್ಲಿ ಅಹಮ್ಮದಾಬಾದಿನ ಐದು ಹೊಟೇಲ ಒಡೆಯರು ಬಂಧಿಸಲ್ಪಟ್ಟು ಜಾಮೀನ ಮೇಲೆ ಬಿಡಲ್ಪಟ್ಟಿದ್ದಾರೆ.

ಬಿಹಾರ

ಬಿಹಾರಪ್ರಾಂತಿಕ ಮುಸ್ಲಿಂ ಲೀಗ ವಿದ್ಯಾರ್ಥಿ ಮಹಾಮಂಡಲದ ಯೋಜನಾ ಸಮಿತಿಯ ಕಾರ್ಯದರ್ಶಿಗಳಾದ ಮೌಲ್ವಿ ಅಹಮ್ಮದರು ಬರೆದ "ಬಿಹಾರವನ್ನು ವಿಭಜಿಸಿರಿ" ಎಂಬ ಪುಸ್ತಕವನ್ನೂ ಅದರ ಪ್ರತಿ ಇಲ್ಲವೆ ಭಾಷಾಂತರವಿದ್ದ ಇತರ ಕಾಗದ ಪತ್ರಗಳನ್ನೂ ಆಕ್ಷೇಪಾರ್ಹವೆಂದು ಸರಕಾರವು ವಶಪಡಿಸಿಕೊಂಡಿದೆ.

ಪಂಜಾಬ ಗಡಿ ನಿರ್ಣಾಯಕ ಸಮಿತಿಯ ಕೆಲಸ ಮುಗಿದು ಆಗಸ್ಟ ಮೊದಲನೆಯ ವಾರದಲ್ಲಿ ನಿರ್ಣಯವನ್ನು ಪ್ರಸಿದ್ಧಿಸಲಾಗುವುದೆಂದು ...ದುಬಂದಿದೆ.

ಮದ್ರಾಸ

ಮುಂಬರುವ ಮೂರು ತಿಂಗಳಲ್ಲಿ ಸೀದಾ ಪದ್ಧತಿಯಲ್ಲಾಗಲಿ ಇತರ ಕ್ರಯವಿಕ್ರಯ ವಿಷಯದಲ್ಲಾಗಲಿ ಚಿಂತಾಜನಕ ಪರಿಸ್ಥಿತಿಯಿಲ್ಲವೆಂದು ಮದ್ರಾಸ ಸರಕಾರದ ಆಹಾರ ಮಂತ್ರಿಗಳಾದ ಡಾ. ರಾಜನ್ನರು ಒಂದು ಸಂದರ್ಶನದಲ್ಲಿ ಹೇಳಿದರು.

ಡಿಸ್ಟ್ರಿಕ್ಟ ಮೆಡಿಕಲ್ ಆಫೀಸರರಾದ ಡಾ. ಕೆ. ರಾಮನ್ ಮೆನನ್ನರ ಅಧ್ಯಕ್ಷತೆಯಲ್ಲಿ ತಾ. ೧೬ ರಲ್ಲಿ ತಿನ್ನವೆಲ್ಲಿಯ ಎಂ. ಡಿ. ಟಿ. ಹಿಂದು ಕಾಲೇಜಿನ "ಪೋಷಕರ ದಿನ"ದ ಸಮಾರಂಭವು ವಿಜೃಂಭಣೆಯಿಂದ ಜರುಗಿತು.

ಮದ್ರಾಸಿನ ಜಾರ್ಜಟೌನಿನಲ್ಲಿರುವ "ಅಂಧ್ರ ಹೆರಾಲ್ಡ" ಪತ್ರಿಕೆಯ ಕಾರ್ಯಾಲಯದಲ್ಲಿ ಹೈದರಾಬಾದ ಸಂಸ್ಥಾನದ ಕಾಂಗ್ರೆಸ್ಸಿನ ಒಬ್ಬ ನಾಯಕರಾದ ಶ್ರೀ ಬಿ. ರಾಮಕೃಷ್ಣರಾಯರು ಹೊಣೆಗಾರ ಸರಕಾರ ಸ್ಥಾಪಿಸುವ ಸಂಸ್ಥಾನ ಕಾಂಗ್ರೆಸ್ಸಿನ ಪ್ರಯತ್ನಕ್ಕೆ ಬೆಂಬಲ ಕೊಡಬೇಕೆಂದು ತಾ. ೧೯ ರಲ್ಲಿ ಒತ್ತಿಹೇಳಿದರು.

ಉದಯರ ಪಾಲಯಮ್ಮಿನ ಜಮೀನದಾರರು ತಿರುಚಿನಾಪಳ್ಳಿಯಲ್ಲಿರುವ ರಾಜಾಜಿ ಕ್ಷಯರೋಗ ಚಿಕಿತ್ಸಾಲಯಕ್ಕೆ ೯೦೦೦ ರೂಪಾಯಿಗಳನ್ನು ದಾನಮಾಡಿದರು.

ಕಾಂಗ್ರೆಸ್ಸು ಅಧಿಕಾರ ಸ್ವೀಕಾರ ಮಾಡಿದ ಕೂಡಲೆ ಆರ್ಥಿಕ ಮತ್ತು ಆಡಳಿತ ವಿಷಯಗಳಲ್ಲಿ ಹಳ್ಳಿಗಳನ್ನು ಸುಧಾರಿಸಲು ಯುಕ್ತಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರಲು ಪ್ರಾರಂಭಿಸಬೇಕಾಗಿತ್ತೆಂದು ಜುಲೈ ೧೨ ರಲ್ಲಿ ಕೋವೂರಿನಲ್ಲಿ ಸೇರಿದ ಮೊದಲನೆಯ ನೆಲ್ಲೂರು ಜಿಲ್ಲಾ ಪಂಚಾಯತ ಸಮ್ಮೇಲನವನ್ನುದ್ಘಾಟಿಸುತ್ತ ಶ್ರೀ ಹರಿಸರ್ವೋತ್ತಮರಾಯರು ಅಭಿಪ್ರಾಯಪಟ್ಟರು.

ತಾ. ೧೫ರ ಸಂಜೆ ಕುಂಭಕೋಣಂನಲ್ಲಿ ಮಿರಸದಾರರ ಸಭೆಯೊಂದು ಸೇರಿ ಒಕ್ಕಲತನ ಕಾಯದೆಗೆ ಕೆಲವು ಸಲಹೆಗಳನ್ನು ನಿರ್ದೇಶಿಸಿ ಆ ಪ್ರಕಾರ ಸುಧಾರಣೆಯಾಗಬೇಕೆಂದು ಸರಕಾರಕ್ಕೆ ಬಿನ್ನವಿಸುವ ಠರಾವು ಅಂಗೀಕೃತವಾಯಿತು.

ರಾಯಪೇಟೆಯ ಕಾಂಗ್ರೆಸ ಭವನದ ಮೈದಾನದಲ್ಲಿ ತಾ. ೨೦ ರ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ತಿರುವಾಂಕೂರಿನಲ್ಲಿ ನಡೆದ ಪೋಲೀಸರ ಗೋಳೀಬಾರನ್ನು ನಿಷೇಧಿಸುವ ಮತ್ತು ತಿರುವಾಂಕೂರಿನ ಕಾಂಗ್ರೆಸ್ಸಿಗೆ ಸಂಪೂರ್ಣ ಬೆಂಬಲ ಕೊಡುವ ಗೊತ್ತುವಳಿಗಳು ಪಾಸಾದವು.

ಮದ್ರಾಸ ಸರಕಾರದವರು ಪರೀಕ್ಷಾ ಪದ್ಧತಿಯನ್ನು ಅಭ್ಯಸಿಸಿ ಅದರ ಸುಧಾರಣೆಯ ಬಗ್ಗೆ ಸಲಹೆ ಕೊಡಲು ಸಮಿತಿಯೊಂದನ್ನು ನಿಯಮಿಸಿರುವರೆಂದು ಸುದ್ದಿ.

ಎಗ್ಮೋರಿನ ಶ್ವೇತಸ್ಮಾರಕ ಭವನದಲ್ಲಿ ತಾ. ೧೯ ರಲ್ಲಿ ನಡೆದ ಅಂಗ್ಲೋ-ಇಂಡಿಯನ್ ತರುಣ ಕಾರ್ಯಕರ್ತರ ಸಮ್ಮೇಲನದಲ್ಲಿ ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಮದ್ರಾಸಿನ ಆಹಾರ ಮಂತ್ರಿಗಳಾದ ಡಾ. ಟಿ. ಎಸ್. ಎಸ್. ರಾಜನ್ನರು ಅಂಗ್ಲೋ-ಇಂಡಿಯನ್ನರು ಭಾರತ ಪ್ರಜೆಗಳಾಗಿ ಬಾಳಬೇಕೆಂದು ಬಿನ್ನವಿಸಿಕೊಂಡರು.

ನೆಲ್ಲೂರಿಗೆ ಸೇರಿದ ರಾಮಪುರದ ಸರಕಾರೀ ಒಕ್ಕಲತನದ ಗಡ್ಡೆಯ ಕೆಲಸಗಾರರು ಮಾಸಿಕ ವೇತನದ ಸಂಬಂಧದಲ್ಲಿ ಸಂಪು ನಡೆಸಿದ್ದಾರೆ. ಈ ಸಂದರ್ಭದಲ್ಲಿ ೭ ಜನ ಸ್ತ್ರೀಯರನ್ನು ತಾ. ೧೪ ರಲ್ಲಿ ಬಂಧಿಸಲಾಯಿತು.

ವಿಶಾಖಪಟ್ಟಣದ ನಗರಭವನದಲ್ಲಿ ತಾ. ೧೪ ರಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತ ಮದ್ರಾಸಿನ ವಿದ್ಯಾಮಂತ್ರಿಗಳಾದ ಶ್ರೀ ಅವಿನಾಶಲಿಂಗಂ ಚೆಟ್ಟಿಯವರು ಮದ್ರಾಸಿನಲ್ಲಿ ತೆಲುಗು ಪಾಠ್ಯವು ತೆಗೆದು ಹಾಕುವ ಸುದ್ದಿ ಸುಳ್ಳೆಂದೂ ಅಂಧ್ರ ಪ್ರಾಂತವಾಗಬೇಕಾದುದು ನ್ಯಾಯ್ಯವೆಂದೂ ಅದಕ್ಕೆ ತಮ್ಮ ಬೆಂಬಲವಿದೆಯೆಂದೂ ಹೇಳಿದರು.

ಸಿಂಧ

ಪಾಕಿಸ್ತಾನದ ರಾಜಧಾನಿಯಾದ ಕರಾಚಿಯಲ್ಲಿ ಸುಮಾರು ೨೦ ಸಾವಿರ ಜನರು ಹೊರಗಿನಿಂದ ಬರಲಿರುವರೆಂದು ಸಿಂಧ ಸರಕಾರವು ಅಲ್ಲಿಯ ಶಾಲೆ ಕಾಲೇಜುಗಳನ್ನು ಒಂದು ತಿಂಗಳು ಮುಚ್ಚಬೇಕೆಂದು ನಿಶ್ಚಯಿಸಿದೆ.

ಹೊಸದಿಲ್ಲಿ

ಬ್ರಹ್ಮದೇಶದ ನಡುಗಾಲ ಸರಕಾರದ ಉಪಾಧ್ಯಕ್ಷರೂ ಫ್ಯಾಸಿಸ್ಟ ವಿರೋಧಿ ಸಂಸ್ಥೆಯ ಅಧ್ಯಕ್ಷರೂ ಆದ ಜನರಲ್ ಅಂಗಸಾನ ಹಾಗೂ ಅವರ ೫ ಜನ ಸಹೋದ್ಯೋಗಿಗಳನ್ನು ಕೊಲೆ ಮಾಡಿದ್ದರ ಬಗ್ಗೆ ಘಟನಾ ಸಮಿತಿಯು ತಾ. ೨೧ ರಲ್ಲಿ ಸಂತಾಪವನ್ನು ವ್ಯಕ್ತಮಾಡಿತು.

ಹಿಂದುಸ್ತಾನವು ಸ್ವತಂತ್ರವಾದ ಒಂದು ವರ್ಷದಲ್ಲಿಯೇ ಗೋವಧ ಪ್ರತಿಬಂಧೋಪಾಯವನ್ನು ಕೈಕೊಳ್ಳಬೇಕೆಂದೂ ಇಲ್ಲದಿದ್ದರೆ ತಾವು ಆಮರಣ ಉಪವಾಸ ಕೈಕೊಳ್ಳುವುದಾಗಿಯೂ ಹಿಂದುಸ್ತಾನದ ಪ್ರಮುಖ ವ್ಯವಸಾಯಗಾರರಾದ ಸೇಠ ರಾಮಕೃಷ್ಣ ಡಾಲ್ಮಿಯರವರು ಸಾರಿದ್ದಾರೆ.

ಅಖಿಲ ಭಾರತ ಆಕಾಶವಾಣಿಯಲ್ಲಿ ತಾ.೨೦ ರ ರಾತ್ರಿ ಮುಂಬಯಿ ಪ್ರಾಂತದ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಜಿ. ಖೇರರು ಪ್ರಾಂತಿಕ ಘಟನೆಯ ಬಗ್ಗೆ ಮಾತಾಡುತ್ತ ಎಲ್ಲರೂ ಒಟ್ಟಾಗಿ ಒಂದೆಡೆ ಸೇರಿ ತಮ್ಮ ಪೂರ್ವಜರಿಗಿಂತಲೂ ಶ್ರೇಷ್ಠವಾದ ರಾಷ್ಟ್ರವನ್ನು ಕಟ್ಟಬೇಕಾಗಿದೆಯೆಂದು ಹೇಳಿದರು.

ವಿಮಾನ ಅಪಘಾತದಲ್ಲಿ ಗಾಯಗೊಂಡ ಶ್ರೀ ಜಗಜೀವನರಾಮರ ಬಲಗಾಲಿಗೆ ತೀವ್ರ ಗಾಯವಾಗಿದೆಯೆಂದೂ ಹಣೆಗೆ ಬಲವಾದ ಪೆಟ್ಟು ಬಿದ್ದಿದೆಯೆಂದೂ ಆದರೆ ಈಗ ಅವರ ಪ್ರಕೃತಿ ಸುಧಾರಿಸುತ್ತಿದೆಯೆಂದೂ ಬಸ್ರಾದಲ್ಲಿಯ ಹಿಂದೀ ಆಸ್ಪತ್ರೆಯ ಅಧಿಕಾರಿಗಳ ಪ್ರಕಟನೆಯಿಂದ ತಿಳಿಯುತ್ತದೆ.

ಕೇಂದ್ರ ಸರಕಾರದ ಹಿಂದಿನ ಸದಸ್ಯರಾಗಿದ್ದ ಸರ್ ಶಾಫತ್ ಅಹ್ಮದಖಾನರು ತಾ. ೧೮ ರಲ್ಲಿ ಸಿಮ್ಲಾದಲ್ಲಿ ತೀರಿಕೊಂಡರು.

ಪಂಜಾಬ

ಪಾಕಿಸ್ತಾನ ಸರಕಾರವು ರಾವಳಪಿಂಡಿಯನ್ನು ತನ್ನ ಸೈನ್ಯದ ತಾತ್ಕಾಲಿಕ ಮುಖ್ಯ ಠಾಣ್ಯವನ್ನಾಗಿ ಮಾಡಲು ನಿಶ್ಚಯಿಸಿದೆಯೆಂದು ತಿಳಿದುಬರುತ್ತದೆ. ಕರಾಚಿಯಲ್ಲಿ ಸ್ಥಳಾಭಾವವಿರುವುದರಿಂದ ಈ ಪ್ರಕಾರ ನಿಶ್ಚಯಿಸಲಾಗಿದೆ.

ಶಿರೋಮಣಿ ಅಕಾಲಿ ದಲದ ಅಧ್ಯಕ್ಷರೂ ಪಾಕಿಸ್ತಾನ ವಿರೋಧ ಸಮಿತಿಯ ಅಧ್ಯಕ್ಷರೂ ಆದ ಜ್ಞಾನಿ ಕರ್ತಾರಸಿಂಗರು ಲಾಹೋರಲ್ಲಿ ಒಂದು ಸಂದರ್ಶನದಲ್ಲಿ ಸೀಮಾ ಸಮಿತಿಯು ಸೀಖರಿಗೆ ನ್ಯಾಯವಾಗುವಂತೆ ಕೆಲಸ ಮಾಡಲೆಂದು ಹಾರೈಸಿದರು.

ಬಾಗವಾನಪುರದಲ್ಲಿ ತಾ. ೨೦ ರಲ್ಲಿ ಹಲ್ಲೆ ಪೇಟೆಯಲ್ಲಿ ಜನರ ಗುಂಪಿನ ಮೇಲೆ ೨ ಬಾಂಬುಗಳು ಬಿದ್ದುದರಿಂದ ನಾಲ್ಕು ಜನರು ಮರಣ ಹೊಂದಿದರು ಮತ್ತು ೧೪ ಜನರು ಗಾಯಗೊಂಡರು.

ಪಂಜಾಬಿನ ಪ್ರಾಂತಿಕ ಹಿಂದು ಮಹಾಸಭೆಯವರು ಗಡಿ ಸಮಿತಿಗೆ ಕಾಂಗ್ರೆಸ್ಸಿನವರು ಒಪ್ಪಿಸಿದ ಮನವಿಯನ್ನೇ ಸಮರ್ಥಿಸಲು ನಿರ್ಧರಿಸಿ ಅವರ ವಕೀಲರನ್ನೇ ತಮ್ಮ ಪಕ್ಷ ಪ್ರತಿಪಾದಿಸಲು ಕೇಳಿರುವರು.

ಲೂಧಿಯಾನಾದಿಂದ ೭ ಮೈಲುಗಳ ದೂರದಲ್ಲಿರುವ ಕುಮುಣವೆಂಬ ಹಳ್ಳಿಯಲ್ಲಿ ಬಾಂಬ ಸ್ಫೋಟವಾಗಿ ಕಳೆದ ವಾರ ೨೦ ಜನರಿಗೆ ಗಾಯಗಳಾಗಿದ್ದವು. ಅವರಲ್ಲಿ ತಾ ೧೯ರಲ್ಲಿ ಒಬ್ಬನು ಸತ್ತನು. ಅವನೂ ಕೂಡಿ ಒಟ್ಟು ೩ ಜನರು ಸತ್ತಂತಾಯಿತು.

ನ್ಯಾ. ದಿವಾಣ ರಾಮಲಾಲರು ಪೂರ್ವ ಪಂಜಾಬಿನ ಹಾಗೂ ಈಗಿನ ಮುಖ್ಯ ನ್ಯಾಯಾಧೀಶರಾದ ಸರ್ ಅಬ್ದುಲ್ ರಶೀದರು ಪಶ್ಚಿಮ ಪಂಜಾಬಿನ ಹೈಕೋರ್ಟುಗಳ ಮುಖ್ಯನ್ಯಾಯಾಧೀಶರಾಗಿ ನಿಯಮಿಸಲ್ಪಡುವರೆಂದು ಸುದ್ದಿ.

ಪಂಜಾಬ ಗಡಿ ನಿರ್ಣಯ ಸಮಿತಿಗೆ ತಮ್ಮ ಮನವಿಯನ್ನೊಪ್ಪಿಸಲು ಲಾಹೋರಿಗೆ ಹೋದ ಪಂಜಾಬ ಶಾಸನಸಭೆಯ ಶೀಖ ಸದಸ್ಯರು ಕಳೆದ ಮಾರ್ಚ ತಿಂಗಳಲ್ಲಿ ರಾವಳಪಿಂಡಿ ಮುಲ್ತಾನಗಳಲ್ಲಿ ನಡೆದ ಹಿಂದು ಶೀಖರ ಕೊಲೆಯ ಪ್ರತಿಭಟನೆಗಾಗಿ ಶೀಖ ಸದಸ್ಯರು ಪಾಕಿಸ್ತಾನ ಘಟನಾಸಮಿತಿಗೆ ಬಹಿಷ್ಕಾರ ಹಾಕುವಂತೆ ಶೀಖಪಂಥ ಮಂಡಲವು ಆಜ್ಞೆಕೊಡಬೇಕೆಂದುಕೇಳಿಕೊಳ್ಳುವ ನಿರ್ಣಯ ಮಾಡಿದರು.

ಬಂಗಾಲ

೧೯೪೨ನೆಯ ಆಗಸ್ಟರ ಚಳವಳಿಯ ಸಮಯದಲ್ಲಿ ಮಿದನಾಪೂರ ಜಿಲ್ಲೆಯ ಒಂದು ಪ್ರದೇಶದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿದ ಆರೋಪದಿಂದ ಬಂಧಿತರಾದ ಒಂಭತ್ತು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಯಿತು

ಕಲಕತ್ತೆಗೆ ೧೨ ಮೈಲು ದೂರದಲ್ಲಿರುವ ಬಾಟಾ ನಗರದಲ್ಲಿ ಕೆಲಸಗಾರರ ಎರಡು ತಂಡಗಳಲ್ಲಿ ಕೈಗೆ ಕೈಹತ್ತಿ ೬೦ ಜನರಿಗೆ ಗಾಯಗಳಾಗಿವೆ. ಇವರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ.

ಕಲಕತ್ತಾ ಸಿ. ಆಯ್. ಡಿ. ಪೋಲೀಸರು ತಾ. ೧೮ ರಲ್ಲಿ ಕೆಲವು ಮನೆಗಳ ಝಡತಿ ಮಾಡಲು ಹಲವು ಚೂರಿಗಳೂ ಲಾಠಿಗಳೂ ದೊರೆತವು. ಈ ಸಂಬಂಧದಲ್ಲಿ ೬೬ ಜನರನ್ನು ಬಂಧಿಸಿದುದಾಗಿ ತಿಳಿಯಬರುತ್ತದೆ.

ಪಶ್ಚಿಮ ಬಂಗಾಲದ ಶಾಸನ ಸಭೆಯ ಮೊದಲನೆ ಅಧಿವೇಶನವು ಸಪ್ಟಂಬರ ತಿಂಗಳ ಮೊದಲನೆಯ ವಾರದಲ್ಲಿ ಸೇರುವುದೆಂದೂ ಹಿಂದುಸ್ತಾನ ಘಟನಾ ಸಮಿತಿಯು ಹೊಸ ಘಟನೆಯನ್ನು ರಚಿಸುವ ವರೆಗೆ ಹೊಸ ಚುನಾವಣೆ ನಡೆಯಲಿಕ್ಕಿಲ್ಲವೆಂದೂ ತಿಳಿಯುತ್ತದೆ.

ಬಂಗಾಲ ಸರಕಾರದ ನೌಕರಿಯಲ್ಲಿರುವ ಎಲ್ಲ ಯುರೋಪಿಯನ್ ಸೀನಿಯರ್ ಆಯ್. ಸಿ. ಎಸ್. ಮತ್ತು ಪೋಲೀಸ ಅಧಿಕಾರಿಗಳು ಆಗಸ್ಟ ೧೫ ರಿಂದ ತಮ್ಮನ್ನು ಕೆಲಸದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದಾರೆಂದು ನಿಶ್ಚಿತವಾಗಿ ತಿಳಿಯುತ್ತದೆ.

ಆಗಸ್ಟ ೧೫ ರಲ್ಲಿ ಬ್ರಿಟಿಶರು ಸತ್ತಾತ್ಯಾಗ ಮಾಡುವ ದಿನವಾದ್ದರಿಂದ ಕಲಕತ್ತೆಯಲ್ಲಿ ಅಂದು ಯಾವ ತರಹದ ಗಲಭೆಯೂ ಆಗದಂತೆ ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿಗಳು ಯೋಗ್ಯವಾದ ಮುಂಜಾಗ್ರತೆ ವಹಿಸಲಿರುವರೆಂದು ತಿಳಿದು ಬರುತ್ತದೆ.

ಆಸಾಮ

ಸಿಲ್ಹೆಟ ಜಿಲ್ಲೆಯ ಮುಸ್ಲಿಂ ಬಹುಸಂಖ್ಯಾಕ ಪ್ರದೇಶಗಳ ಗಡಿನಿರ್ಣಯದ ಕಾರ್ಯವನ್ನು ಆಗಸ್ಟ ೪ ರಲ್ಲಿ ಬಂಗಾಲ ಗಡಿ ನಿರ್ಣಾಯಕ ಸಮಿತಿಯು ಕಲಕತ್ತೆಯಲ್ಲಿ ಕೈಕೊಳ್ಳುವುದೆಂದು ಪ್ರಕಟನೆ ಹೊರಟಿದೆ.

ಪಶ್ಚಿಮ ಬಂಗಾಲದ ಸಲುವಾಗಿ ಬಂಗಾಲ ಮಂತ್ರಿಮಂಡಲವು ಸ್ಥಾಪಿಸಲ್ಪಟ್ಟಂತೆ ಸಿಲ್ಹೆಟ್ಟಿನ ಸಲುವಾಗಿ ಆಸಾಮ ಮಂತ್ರಿ ಮಂಡಲದಲ್ಲಿ ವ್ಯವಸ್ಥೆಯಾಗಬೇಕೆಂದು ಸಿಲ್ಹೆಟ ಜಿಲ್ಲಾ ಮುಸ್ಲಿಂಲೀಗ ಶಾಸನ ಸಭೆಯ ಪಕ್ಷವು ಗವರ್ನರರೊಡನೆ ಸಂಧಾನ ನಡೆಸಲು ನಿರ್ಧರಿಸಿದೆಯೆಂದು ತಿಳಿದು ಬಂದಿದೆ.

ಗಡಿನಾಡು

ಗಡಿನಾಡ ಶಾಸನಸಭೆಯ ವಿರೋಧಿ ಪಕ್ಷದ ಮುಂದಾಳುಗಳಾದ ಅಬ್ದುಲ ಕ್ವಯಾಂಖಾನರು ಒಂದು ಪ್ರಕಟನೆ ಹೊರಡಿಸಿ ಗಡಿನಾಡ ಗಾಂಧಿಯವರ ಬಗ್ಗೆ ಎಚ್ಚರಿಕೆಯಿಂದಿರಲು ಮುಸ್ಲಿಂಲೀಗಿನವರಿಗೆ ತಿಳಿಸಿರುತ್ತಾರೆ.

ಗಡಿನಾಡ ಶಾಸನಸಭೆಗೆ ಹೊಸ ಚುನಾವಣೆ ನಡೆವ ಬಗ್ಗೆ ವಚನ ಕೊಡದಿದ್ದರೆ ತಾವೇನೂ ಸದ್ಯಕ್ಕೆ ರಾಜೀನಾಮೆ ಕೊಡುವುದಿಲ್ಲವೆಂದು ಗಡಿನಾಡ ಮುಖ್ಯ ಮಂತ್ರಿಗಳಾದ ಡಾ. ಖಾನ ಸಾಹೇಬರು ತಾ. ೧೭ ರಲ್ಲಿ ಪತ್ರಿಕಾ ಪ್ರತಿನಿಧಿಗಳ ಪರಿಷತ್ತಿನಲ್ಲಿ ಹೇಳಿದರು.

ಈ ವಾರದ ಕಥೆ



ಸಾಕಷ್ಟು ಸಂಗಾತಿಗಳು ಸಿಕ್ಕರು. ಹಣವೂ ಸಿಕ್ಕಿತು. ಧೈರ್ಯವೂ ಬಂದಿತು. ಅನುಭವವೂ ಲಭಿಸಿತು. ಇನ್ನೇನು? ಶಸ್ತ್ರಾಸ್ತ್ರ ಸಂಗ್ರಹ!

ಸುವರ್ಣೆಯ ಪಾಲಿಗೆ ಇದೊಂದು ಕೆಲಸ ಉಳಿಯಿತು. ಅದೊಂದು ದೊರಕಿದ್ದರೆ ಸ್ವರಾಜ್ಯ ತರುತ್ತಿದ್ದಳೇನೋ?

ಅಂದು ಶನಿವಾರ ರಾತ್ರಿಯ ಕಡೆಯ ಪ್ರಹರ. ಸುವರ್ಣೆ ತನ್ನ ಸಂಗಡಿಗರನ್ನು ಕೂಡಿಕೊಂಡು ಶಿಪಾಯಿಗಳ ಛಾವಣಿಯ ಬಳಿ ಬಂದು ಮರದ ಕೆಳಗೆ ಅವಿತಳು. ಛಾವಣಿಯಲ್ಲಿ ಎಲ್ಲವೂ ಶಾಂತ. ಒಬ್ಬ ಶಿಪಾಯಿಯು ತೂಕಡಿಸುತ್ತ ಕಾವಲು ಮಾಡುತ್ತಿದ್ದನು. ಉಳಿದವರೆಲ್ಲ ನಿದ್ರಾದೇವಿಯ ತುಡಿಲಲ್ಲಿ ಒರಗಿದ್ದರು. ದರೋಡೆಯವರು ಸಪ್ಪಳಾಗದಂತೆ ನುಸುಳಿದರು; ಕಾವಲುಗಾರನನ್ನು ಮೊದಲು ಹೊಡೆದರು. ಅವನು ಆಕ್ರೋಶ ಮಾಡಿದನು. ಉಳಿದವರು ಜಾಗ್ರತರಾದರು. ಇಷ್ಟರಲ್ಲಿ ಸಂಗಡಿಗರು ಬಂದೂಕುಗಳನ್ನು ಎತ್ತಿಕೊಂಡು ಓಡಿದರು. ಶಿಪಾಯಿಗಳಲ್ಲಿ ಗೊಂದಲವೇ ಗೊಂದಲ; ಓಡುವ ಸಮಯದಲ್ಲಿ ಸುವರ್ಣೆಯು ಅಯ್ಯೋ! ಎಂದು ಒದರಿ ಕೆಳಗೆ ಬಿದ್ದಳು. ಒಂದು ಗುಂಡು ಅವಳ ತೊಡೆಯನ್ನು ಸೇರಿ ಆನಾಹುತಕ್ಕಿಟ್ಟುಕೊಂಡಿತು.

ಸುವರ್ಣೆಯ ಜೀವಿತದ ಸಾಹಸದ ಪುಟಗಳೆಲ್ಲ ಅಂದಿಗೆ ಮುಗಿದವು. ಬರೆಯಲಿರುವ ಮುಂದಿನ ಬಿಳಿಯ ಹಾಳೆಗಳೆಲ್ಲ ರಾಷ್ಟ್ರದ್ರೋಹದ ಕಲಂಕದಿಂದ ಕಪ್ಪು ಕಪ್ಪಾಗಿ ನಿಂತವು. ಹಾಯ್! ಹಾಯ್!

ಇದರಿಂದ ಸಾಹಸಿ ಸುವರ್ಣೆಯು ಆಜನ್ಮ ಕಾರಾಗೃಹವಾಸವನ್ನನುಭವಿಸಬೇಕಾಯಿತು.

೨

ಏನಿದೆ! ಸುತ್ತಲು ನಾಲ್ಕು ಗೋಡೆ. ಕೆಳಗೆ ಒಣಬರಿ ನೆಲ. ಸೂರ್ಯಪ್ರಕಾಶವಿಲ್ಲ. ಚಂದ್ರನ ಕಿರಣವಿಲ್ಲ. ವಾಯುವಿನ ಸುಳಿವಿಲ್ಲ. ದಿನಕ್ಕೆರಡು ಸಾರಿ ಬಾಗಿಲಿನ ಕಿರ್ರೆಂಬ ಸಪ್ಪಳ. ಬದುಕಲಿಕ್ಕೂ ಸಾಯಲಿಕ್ಕೂ ಸಲ್ಲಿಸುವ ಎರಡು ಹೊತ್ತು ಕದನ್ನ. ಜೀವದಿಂದಿರುವೆನೆಂಬುದಕ್ಕೆ ವಾರ್ಡರಳ ಎರಡು ಮಾತು—ಆಯಿತು. ಮತ್ತೆ ಕತ್ತಲೆ. ಎಲ್ಲೆಲ್ಲಿಯೂ ಸರ್ವವ್ಯಾಪಿ ಕತ್ತಲೆಯು. ಕಣ್ಣಲ್ಲಿಯು, ತಲೆಯಲ್ಲಿಯು, ಮನದಲ್ಲಿಯು ಅದೇ ಪ್ರತಿಬಿಂಬ. ತಾನು ಬದುಕಿರುವೆನೆಂಬುದಕ್ಕೆ ಕುರುಡು ಕತ್ತಲೆ ಏನು ಸಾಕ್ಷ್ಯವನ್ನು ಕೊಡಬೇಕು! ತಾನೇ, ಸತ್ತಿಲ್ಲವೆಂದು ಸಿದ್ಧಮಾಡಬೇಕು. ಯಾರ ಬಳಿಯಲ್ಲಿ? ಕತ್ತಲೆಯ ಮುಂದೆ! ನಿರ್ಜೀವ, ನಿರಾಕಾರ, ಜ್ಞಾನಶೂನ್ಯ ಅಂಧಕಾರ ಅವಳ ಸಜೀವತೆಯನ್ನು ಕಟ್ಟಿಕೊಂಡು ಏನು ಮಾಡಬಲ್ಲದು? ಓ! ಎಂದು ಬಾಯಿ ತೆರೆದು ನುಂಗುವಂತೆ ಕೋಣೆಯನ್ನು ತುಂಬಿದೆ. ತನಗೆ ತಾನೇ ಸತ್ತಿಲ್ಲವೆಂದುಕೊಳ್ಳಬೇಕು. ಎಲ್ಲಿಯವರೆಗೆ? ಸಜೀವತೆಯ ಸಂಶಯ ಮರುದಿನ ವಾರ್ಡರಳು ಬರುವವರೆಗೆ ತೂಕಡಿಸಿ ದೃಢಗೊಳ್ಳಬೇಕು! ಮುಂದೆ? ಮತ್ತೆ ಸಂಶಯ.

ಸುವರ್ಣೆಯ ಕಣ್ಣಮುಂದೆ, ಮನದ ಮುಂದೆ ಹಬ್ಬಿ ನಿಂತುದು ಕೇವಲ ಕತ್ತಲೆ. ತುರಂಗದ ನಾಲ್ಕುಗೋಡೆಗಳು ಅವಳ ಸಾಹಸ ಜೀವನವನ್ನು, ಅವ್ಯಾಪ್ತಕ್ಷೇತ್ರವನ್ನು ಸಂಕ್ಷೇಪಿಸಿ ನಿಲ್ಲಿಸಿದವು. ತನ್ನ ಬಾಲ್ಯ ಶಿಕ್ಷಣ, ಸಂಗಾತಿ ಎಲ್ಲವು ಇಂದಿಗೆ ಭೂತಸಂಗತಿ. ದಿನವೂ ಸ್ಮರಿಸಿ ಬೇಸರಿಟ್ಟಳು. ಮಾತಿಲ್ಲದ ಭೂತಸಂಗತಿಗಳು ಮೂಕಪಟದಂತೆ ಚಿತ್ರಭಿತ್ತಿಯ ಮೇಲೆ ಮೂಡಿ ಮರೆಯಾಗುವವು. ಒಂದೇ ಬಣ್ಣದವವು, ಒಂದೇ ವೇಗದವು, ಭಾವರಹಿತ ಕ್ರಿಯೆಯನ್ನು ಪ್ರದರ್ಶಿಸಿ ದೂರಸರಿಯುವವು. ನೋಡಿ ನೋಡಿ ಜೀವ ಸೋತಿತು. ಒಂದೆರಡು ರಮ್ಯಸಂಗತಿಗಳನ್ನು ಸ್ಥಿರವಾಗಿಟ್ಟು ಇನ್ನಷ್ಟು ನೋಡದೇ ಕೆಂದರೆ ಆಶೆಯೂ ಮೊಂಡವಾಗಿದೆ. ತನ್ನ ಉಜ್ವಲ ಭಾವನೆಯೇ ತುಳ್ಕು ಹಿಡಿದಿದೆ. ಮೌನವ್ರತಾಚಾರಿಯಾಗಿದೆ. ಉಛ್ವಾಸದಲ್ಲಿ ಹಾ! ಹೂಗಳೇ ಅಧಿಕ. ಇದರಿಂದ ಜೀವಹಿಂಡಿದಂತೆನಿಸುವದು, ತಲೆಯಲ್ಲಿ ನೂರಾರು ಸಂಗತಿಗಳು ಚರ್ವಿತ ಚರ್ವಣಗೊಂಡು ವಿಚಾರ ಶಕ್ತಿಯನ್ನು ಕುಂಠಿಸಿದವು. ಕ್ರಮಬದ್ಧವಾಗಿ ವಿಚಾರಿಸಲು, ನಿರ್ಣಯಿಸಲು ತಾಳ್ಮೆಯೇ ಸಾಲದು. ಸಿಡುಕು, ಬೇಸರ, ಅಸಹ್ಯತೆ—ಒಂದೊಂದಾಗಿ ಶರೀರವನ್ನಾವರಿಸಿದವು. ಎಲುವು, ತೊಗಲು ಪೂರ್ವ ಋಣವನ್ನು ಮರೆಯದೆ ಹಾಗೇ ಉಳಿದಿವೆ. ಎದೆಯಗುಂಡಿ ಹಾಗೇ ಹಾರುವದು. ಇವೇ ಸುವರ್ಣೆಯ ಸನಾತನ ಪ್ರೇಮಿಗಳು. ಇವೇ ಮುಪ್ಪುರಿಗೊಂಡ ಸುವರ್ಣೆಯ ಸಜೀವತೆಯ ಪ್ರಮಾಣಗಳು. ಇದರಿಂದ ಸುವರ್ಣೆಯ ಜೀವಿತವು ತೀರ ಬದಲಾಯಿತು.

ಇದೇ ಸಮಯಕ್ಕೆ ಅವಳ ಕಷ್ಟ ಕಡಿಮೆಯಾಗುವಂತೆ ಕೆಲವು ಸೌಕರ್ಯಗಳು ಸಿಕ್ಕವು. ಬೆಳಕಿನ ಕೋಣೆ, ನಡೆದಾಡಲು ಒಂದಿಷ್ಟು ನೆಲ, ನಾಲ್ಕಾರು ಹೆಂಗಸರ ಮುಖಾವಲೋಕನ—ದೊರೆತರೂ ಉಪಯೋಗವನ್ನು ಮಾಡಿಕೊಂಡು ಒಂದು ನಗೆ ನಕ್ಕು ಇರಲು ಜೀವವ ಅನುಕೂಲವಾಗಲಿಲ್ಲ. ಸದಾ ಮೌನಿ, ಮುಖದ ಮೇಲೆ ನಿರಾಶೆಯ ಮೋಡವು. ತನಗೆ ತನ್ನ ನೆರಳೇ ಆಧಾರ.

೧೯೪೨ರಲ್ಲಿ ಇನ್ನೂ ಕೆಲವು ಸೌಕರ್ಯಗಳು ಲಭಿಸಿದವು.

ಈಗ ಅವಳು ೮-೧೦ ರಾಜಕೀಯ ಸ್ತ್ರೀ ಸೆರೆಯಾಳುಗಳ ಮೇಲಿನವಳು. ಅವರು ಆಕೆಯ ಆಜ್ಞಾವರ್ತಿಗಳು.

ಮೊನ್ನೆಯ ಆಂದೋಲನದಲ್ಲಿ ಮತ್ತೆ ನಾಲ್ಕಾರು ಜನರು ಸೇರಿದರು. ಎಲ್ಲರೂ ಕಲಿತವರು, ಕುಲೀನರು. ಚಳವಳಿಯಲ್ಲಿ ಸಿಕ್ಕು ಶಿಕ್ಷೆಯಾದವರು.

ಕೋಮಲೆಯು ಪ್ರೌಢ ಹೆಂಗಸು. ದೇಸಾಯರ ಮನೆತನದವಳು. ವಯಸ್ಸು ೩೫, ನಾಲ್ಕು ಮಕ್ಕಳ ತಾಯಿ. ಭೂಗತ ಗಂಡನ ಕಾರ್ಯಕ್ಕೆ ನೆರವಾಗುವಳೆಂಬ ಸಂಶಯದಿಂದ ಬಂಧಿತಳಾಗಿ ಸೆರೆಮನೆಗೆ ಜಮೆಯಾಗಿದ್ದಳು.

ಶಮೆ ವಿಧವೆ. ವಯಸ್ಸು ೩೨. ನಿಸ್ಸೀಮ ಖದಿ ಭಕ್ತಳು. ಭಾರತದಿಂದ ತೊಲಗಿರಿ ಎಂಬ ರಾಷ್ಟ್ರವಾಣಿಯ ಪ್ರಚಾರದೋಷಕ್ಕೆ ಸಿಕ್ಕು ತುರಂಗವನ್ನು ಸೇರಿದ್ದಳು.

ಸುಮನೆ ಮತ್ತು ಗಿರಿಬಾಲೆಯರು ಕಾಲೇಜ ವಿದ್ಯಾರ್ಥಿನಿಯರು. ಕಾಂಗ್ರೆಸದ ಬುಲೆಟಿನನ್ನು ಮುದ್ರಿಸಿ ಹಂಚುವ ದೋಷಕ್ಕೆ ಸಿಕ್ಕು ರಾಜಾತಿಥ್ಯವನ್ನು ಸ್ವೀಕರಿಸಿ ಬಂದವರು. ಸುಮನೆ ಗಿರಿಬಾಲೆಗಿಂತ ನಾಲ್ಕು ವರುಷ ಹಿರಿಯಳು

ಗಿರಿಬಾಲೆ ಎಲ್ಲರಿಗಿಂತ ಚಿಕ್ಕವಳು. ಹುಡುಗತನದ ಮಂಗಚೇಷ್ಟೆಗಳು ಇನ್ನೂ ಸಾಕಷ್ಟಿದ್ದವು. ಇವಳ ಚೇಷ್ಟೆ ಮಿಕ್ಕವರಿಗೆ ಆನಂದದಾಯಕವಾಗುತ್ತಿದ್ದರೂ ಒಮ್ಮೊಮ್ಮೆ ಅಧಿಕಾರಿಗಳ ಅವಕೃಪೆಗೆ 'ಪಾತ್ರವಾಗಬೇಕಿದ್ದಿತು. ಆದರೂ ತಂಗಿಯಂತೆ ಕಂಡು ಬಂದಿದ್ದರು.

ಒಂದು ದಿನ ಗಿರಿಬಾಲೆ ತನ್ನ ಪ್ರಾತರ್ವಿಧಿಗಾಗಿ ತಡಮಾಡಿ ಏಳಬೇಕಾಯಿತು. ಮಿಕ್ಕವರು ಅದೇ ಮುಗಿಸಿ ಬಂದಿದ್ದರು. ಗಿರಿಬಾಲೆ ತನ್ನ ಕೋಣೆಯನ್ನು ದಾಟಿ ಮುಂದೆ ಬರುವಷ್ಟರಲ್ಲಿ ಸುವರ್ಣೆ ಕಂಡಳು. ಅಕ್ಕ ನಮಸ್ತೆ! ಎಂದು ಸಾಗಿದಳು.

ನಾಲ್ಕಾರು ದಿನ ಇದೇ ಕ್ರಮವನ್ನಿಟ್ಟಳು. ಈ ನಮಸ್ತೆ ಸ್ವೀಕರಿಸಿದ ಸುವರ್ಣೆಯಲ್ಲಿ ಯಾವ ಹೊಸ ಭಾವನೆಯೂ ಕಂಡುಬರಲಿಲ್ಲ. ಅವಳು ತನ್ನ ಕರ್ತವ್ಯದ ಹೊರತಾಗಿ ಒಂದು ಮಾತನ್ನು ಹೆಚ್ಚಾಗಿ ಆಡುತ್ತಿರಲಿಲ್ಲ. ಈ ಮೌನವೇ ಗಿರಿಬಾಲೆಗೆ ಪ್ರೋತ್ಸಾಹವನ್ನಿತ್ತಿತು.

ಒಂದು ದಿನ ಮಧ್ಯಾಹ್ನದ ಇಳಿಹೊತ್ತಿನಲ್ಲಿ ಕೋಮಲೆ, ಶಮೆ ಮತ್ತು ಸುಮನೆಯರು ಒಂದು ಸ್ವಾತನದ ಭವಿಷ್ಯ ಚಿತ್ರವನ್ನು ಶಬ್ದದಲ್ಲಿ ಬರೆಯುವಂತೆ ಹರಟೆಹೊಡೆಯುತ್ತಿದ್ದರು. ಗಿರಿಬಾಲೆಯು ಅಲ್ಲಿಂದ ನುಸುಳಿ ಸುವರ್ಣೆಯ ಹತ್ತಿರ ಬಂದು —ನಮಸ್ತೇ ಅಕ್ಕ! ಎಂದಳು.

ಸುವರ್ಣೆ ಬಾಯಿಬಿಡಲಿಲ್ಲ.

—ನೀವು ಮಾತಾಡುವದಿಲ್ಲವೇಕೆ? ಕೇಳಿದಳು. ಉತ್ತರವಿಲ್ಲ.

—ನಿಮ್ಮ ಹೆಸರೇನು?

....

—ನೀವು ಇಲ್ಲಿ ಬಂದು ಎಷ್ಟು ವರುಷವಾಯಿತು ?

....

ನೀವು ಬ್ರಹ್ಮಚಾರಿಗಳೇ ?

....

—ಸರಿ. ಸರಿ. ಬ್ರಿಟಿಶರು ಶಸ್ತ್ರಾಸ್ತ್ರಗಳಿಂದಲ್ಲದೆ ಮೂಕರಿಂದಲೂ ಕಿವುಡರಿಂದಲೂ ನಮ್ಮನ್ನು ಆಳಹತ್ತಿದ ಮೇಲೆ ಸ್ವರಾಜ್ಯ ಲಭ್ಯವೆಂತು? ಗಟ್ಟಿಸಿ ನುಡಿದಳು.

ಈ ಮಾತು ಸುವರ್ಣೆಯ ಮರ್ಮಕ್ಕೆ ತಗಲಿತು. ಗಿರಿಬಾಲೆ ಹೊರಡಬೇಕೆಂದಿದ್ದಳು. ಸುವರ್ಣೆ ಮುಂದೆ ಬಂದು—ಏನೆಂದೆ? ಎಂದು ಕೇಳಿದಳು.

—ನಾನು ತಪ್ಪು ಮಾತಾಡಿದೆ ಕ್ಷಮಿಸಬೇಕು ಎಂದು ಕೈಮುಗಿದಳು.

—ಯಾವ ತಪ್ಪು ?

—ನೀವು ಮೂಕರೆಂದು ನಾನು ತಿಳಿದಿದ್ದೆ. ಗಿರಿಬಾಲೆಯ ನಿವ್ಯಾ೯ಜ ಮಾತುಗಳಿಂದ ಸುವರ್ಣೆಯ ಮುಖವು ಹಿಗ್ಗಿತು.

—ನಾನು ಮೂಕಿಯಲ್ಲ.

ಮಾತುಗಳನ್ನು ಅಡಿದೆ ಮನಸ್ಸನ್ನು ಕೊರಗಿಸುವಿರೇಕೆ? ಮುಖದ ಮೊಲೆ ಹುಸಿನಗೆ ಅರಳಿತು.

—ಮನಸ್ಸನ್ನು ಕೊರಗಿಸುವೆನೇ ?

—ಅಲ್ಲದೇನು ! ನಗುವ ಮಗುವು ನಿಮ್ಮ ಮುಖವನ್ನು ನೋಡಿದರೆ ಬೆರಗಾಗಬಹುದು.

—ಈ ಮಾತು ನಿಜವಿದ್ದೀತು.

—ಇದ್ದೀತೇಕೆ? ನಿಜವಾಗಿ ಒಂದಿಷ್ಟು ಹೇಳಿ.

—ನೀನೇನು ಮಾಡಬಲ್ಲೆ ?

—ಕಡಿಮೆ ಮಾಡಬಲ್ಲೆ.

—ಅದು ಹೇಗೆ ?

—ಉಕ್ಕುವ ಹಾಲಿನ ಮುಚ್ಚಳವನ್ನು ತೆಗೆಯಬೇಕಕ್ಕ! ಅಂದರೆ ತಣ್ಣಗಾಗಿ ಕೆನೆಗಟ್ಟಿ ಕಂಪಿಡುವದು.

ಸುವರ್ಣೆ ಗಿರಿಬಾಲೆಯನ್ನು ಹಿಡಿದುಕೊಂಡು ಮುಂದಿಟ್ಟಳು.

—ನೀವು ಎಷ್ಟು ಗಟ್ಟಿ ಹಿಡಿಯುವಿರಿ!

—ನೋವಾಯಿತೇ ?

—ನೋವಾಗದೇನು ? ಇದರಲ್ಲಿ ಎಷ್ಟು ಹರುಷದ ತೃಪ್ತಿ ಇದೆ ? ಎಂದು ಕೇಳಬೇಕೆಂದೆ.

—ಹೀಗೆಲ್ಲ ಮಾತಾಡಲು ನಿನಗೆ ಯಾರು ಹೇಳಿಕೊಟ್ಟರು ?

—ಓ! ನಾನು ದೊಡ್ಡವಳೆಂದು ಯಾರ ಮುಂದೂ ಹೇಳಿಲ್ಲ. ನಿಮಗೂ ಚಿಕ್ಕವಳು.

—ಅಂತೇ ಕೇಳಿದೆ.

—ನಿಮ್ಮ ತಂಗಿಯಷ್ಟು ಚಿಕ್ಕವಳು.

—ನನಗೆ ತಂಗಿಯಿಲ್ಲ.

—ಇಲ್ಲದಿದ್ದರೆ ಇಲ್ಲ. ನಿಮ್ಮ ಮಗಳಷ್ಟು.

ಸುವರ್ಣೆಯ ಮುಖವು ಕಳೆಗುಂದಿತು. ಕಣ್ಣು ತುಂಬಿಬಂದವು. ಗಿರಿಬಾಲೆ ಹತ್ತಿರ ಹೋಗಿ ಅಕ್ಕ, ಇನ್ನು ಮುಂದೆ ನಾನು ಇಂಥ ಮಾತು ಎಂದೂ ಆಡಲಾರೆನು. ಕ್ಷಮಿಸಿ ಎಂದು ಕಾಲು ಹಿಡಿಯಹೋದಳು.

ಸುವರ್ಣೆ ಅವಳನ್ನು ಎದೆಗೆ ಹಿಡಿದು—ಎರಡೂ ನೀನೇ. ಎರಡೂ ನೀನೆ. ನಾನು ಅವಿವಾಹಿತೆಯಾದರೂ ನಿನ್ನನ್ನು ಮಗಳಂತೆ ಕಾಣಬೇಕೆಂದು ಭಾವನೆಯಾಗುವದು.

ಸಂಜೆಯ ಗಂಟೆ ಬಾರಿಸಿತು. ಇಬ್ಬರೂ ತಮ್ಮ ತಮ್ಮ ಕೋಣೆಗೆ ಹೋದರು.

೪

ಮರುದಿನ ಮಧ್ಯಾಹ್ನ ಕಾವಲಿನವರ ಸುಳಿವೂ ಇರಲಿಲ್ಲ. ಗಿರಿಬಾಲೆಯು ಸುವರ್ಣೆಯನ್ನು ಎಳೆದುಕೊಂಡು ಕೋಣೆಗೆ ಓಡಿದಳು. ಅಲ್ಲಿ ಮೂವರು ಹರಟೆ ಹೊಡೆಯುತ್ತಿದ್ದರು. ಆಗಂತುಕಳ ಅನಿರೀಕ್ಷಿತ ಬರವಿನಿಂದ ಬೆರಗಾದರು. ಗಿರಿಬಾಲೆಯು ಪರಿಚಯವನ್ನು ಮಾಡಿಕೊಟ್ಟಳು. ಸುವರ್ಣೆಕೃತಜ್ಞತೆಯನ್ನು ಸಲ್ಲಿಸಿ ಸುಮ್ಮನೆ ಕುಳಿತಳು. ಗಿರಿಬಾಲೆ—ಇನ್ನು ಹೇಳಿರಿ ನೀವಾರು? ಪರಿಚಯವನ್ನು ಮಾಡಿಕೊಡಿರಿ.

—ನನ್ನ ಪರಿಚಯದಿಂದ ನಿಮಗೆ ಲಾಭವಿಲ್ಲ ಗಿರಿಬಾಲಾ......ಓ! ನಾವು ಆ ಬಾಧವನ್ನು ಕಟ್ಟಿಕೊಂಡು, ಹೊರಟು ಹೋದಮೇಲೆ ಬಿಡಿವಾಡುವದಿಲ್ಲ.

—ಅಂದಮೇಲೇಕೆ ?

—ನೀವು ಮನುಷ್ಯರಲ್ಲಿ ನಿಂತು ಮಾತಾಡಿರಿ. ನಿಮ್ಮನ್ನು ಒಂದು ದಿವಸವಾದರೂ ಸಿರಿ ನಗಿಸಿಯೇ ಇಲ್ಲಿಂದ ಹೊರಡುವೆ ನನ್ನ ಪ್ರತಿಜ್ಞೆ.

—ನನ್ನ ಸಂವೇದನಾಶಕ್ತಿಯೇ ಸತ್ತು ಹೋಗಿದೆ.

—ನಾನೂ ಮೊದಲು ಹಾಗೆಯೇ ತಿಳಿದಿದ್ದೆ. ಈಗಿಲ್ಲ

—ಅದು ಹೇಗೆ?

—ನೀವು ಮಾತಾಡುವಿರಲ್ಲ.

—ಅದರಿಂದೇನು ?

—ಅದರಿಂದೇನು! ಮಾತಾಡುವಪ್ರಾಣಿಯು ನಗುವದು. ಇದು ಪ್ರಾಣಿಶಾಸ್ತ್ರದ ತತ್ವ.

ಮೂವರೂ ಬಿದ್ದು ಬಿದ್ದು ನಕ್ಕರು. ಸುವರ್ಣೆಯು ತುಟಿಯಮೇಲೂ ನಗೆಯು ಸುಳಿಯಿತು.

—ಗೆದ್ದೆ, ಇನ್ನು ನಿಮ್ಮ ಪರಿಚಯ? ಎಂದು ಗಿರಿಬಾಲೆಯು ಸುವರ್ಣೆಯನ್ನು ಹಿಡಿದು ಎಳೆಯಹತ್ತಿದಳು.

—ಗಿರಿಬಾಲಾ ನಾನು ರಾಷ್ಟ್ರದ್ರೋಹಿ, ನನ್ನ ಪರಿಚಯವನ್ನು ತಿಳಿದು ಮಾಡುವಿಯೇನು ?

—ನಾವೂ ಅದೇ ಸರಿ, ಇನ್ನು ಮುಂದೆ ತೀರ ಹತ್ತಿರದವರಾದಿರಿ. ಮಗುವಿನಂತೆ ಮೈಗೆ ಹತ್ತಿ ನಿಂತಳು. ಸುವರ್ಣೆಯ ಬಾಯಿಕಟ್ಟಿ ಹೋಯಿತು ಹೇಳಲು ಉದ್ಯುಕ್ತಳಾದಳು.

—ನನ್ನ ಹೆಸರು ಸುವರ್ಣೆ. ೧೯೩೦ ರಲ್ಲಿ ಲೂಟಿ, ಖೂನಿ, ವಿಧ್ವಂಸ, ಮುಂತಾದ ಅಪವಾದವೆಯ ಮೇಲೆ ಆಜನ್ಮ ಕಾರಾಗೃಹವಾಸವನ್ನು ಅನುಭವಿಸುತ್ತಿರುವೆ. —ನೀವು ಹರಿಕೃಷ್ಣ ದೇಸಾಯರಿಗೆ ಏನಾಗಬೇಕು? ಕೋಮಲೆಯು ಕೇಳಿದಳು.

—ನಾನು ಅವರ ತಂಗಿ.

—ನೀವು ಅವರ ತಂಗಿಯರೇ! ಮೂವರೂ ಬೆರಗಾದರು.

—ಇದರಲ್ಲಿ ಆಶ್ಚರ್ಯವೇನು ?

ಗಿರಿಬಾಲೆಯು ಪುಸ್ತಕಗಳ ರಾಶಿಯ ಕಡೆಗೆ ಓಡಿಹೋಗಿ ಏನನ್ನೋ ಹುಡುಕ ಹತ್ತಿದಳು.

—ಖಾನಪುರದ ಗುಡ್ಡದಲ್ಲಿಯ ಪೋಲೀಸರ ಮೇಲೆ ಏರಿ ಹೋದವರು ನೀವೆಯೋ ?

—ಅಹುದು ಗಾಂಧೀ ತತ್ವದಂತೆ ನಡೆದ ನೀವು ಹಿಂಸಾವಾದಿಗಳ ಕೃತ್ಯವನ್ನು ಕನಸಿನಲ್ಲಿಯೂ ಅನುಮೋದಿಸಲಾರಿರಿ.

—ಹಾಗೇನಿಲ್ಲ—ನಾವು ಅನುಮೋದಿಸುವದಿಲ್ಲವೆಂದು ಹೇಳಿದರೂ ರಾಷ್ಟ್ರಭಕ್ತರ ಮಾಲಿಕೆಯಲ್ಲಿ ನಿಮ್ಮ ಹೆಸರನ್ನೇ ಮೊದಲು ಎತ್ತುವೆವು. ಶಮೆ ನುಡಿದಳು.

ಗಿರಿಬಾಲೆಯು ಓಡುತ್ತ ಬಂದು ಒಂದು ಪುಸ್ತಕವನ್ನು ಅವಳ ಕೈಯಲ್ಲಿತ್ತು—'ವೀರಶಿರೋಮಣಿ ಸುವರ್ಣಾ ತಾಯಿಯವರೇ, ನಿಮ್ಮ ಉತ್ಕಟ ದೇಶಭಕ್ತಿಗೆ, ಉಜ್ವಲ ಸಾಹಸಕ್ಕೆ ಪುರುಷಸದೃಶ ಯತ್ನಕ್ಕೆ ನನ್ನ ಸಾವಿರ ವಂದನೆಗಳು ಎಂದು ನಮಸ್ಕರಿಸಿದಳು.

ಪುಸ್ತಕವನ್ನು ಕೈಗೆ ತೆಗೆದುಕೊಂಡು-ಇದೇನು ಗಿರಿಬಾಲೆ? ಎಂದು ಸುವರ್ಣೆ ಕೇಳಿದಳು.

ಗಿರಿಬಾಲೆಯು ಕಟ್ಟಿದ ಕೈಗಳಿಂದ ಎದ್ದು ನಿಂತು—ಮಹಾನುಭಾವರೇ, ಇದು ತಮ್ಮ ಅಣ್ಣಂದಿರು ನವಳರಿಗೆ ಶರಣು ಹೊಡೆದು ಬರೆದು ಭಾರತದ ವೀರ ಮಹಿಳೆಯರಿಗೆ ಅರ್ಪಿಸಿದುವರು. ನಿಮ್ಮ ಅಣ್ಣಂದಿರು ಆಂದೋಲನದಲ್ಲಿ ಸೇರಿ ಭೂಗತರಾದರೂ ನಿಮಗೆ ಅರ್ಪಿಸಲು ನಮಗೆ ಅಧಿಕಾರವನ್ನು ಕೊಟ್ಟಿರುವರು.

ಸುವರ್ಣೆಯು ಹೊದಿಕೆಯ ಮೇಲಿನ ತನ್ನ ಚಿತ್ರವನ್ನು ನೋಡಬೇಕೆಂದು ಎಷ್ಟು ಪ್ರಯತ್ನಿಸಿದರೂ ನೀರು ತುಂಬಿದ ಕಣ್ಣುಗಳು ಸಹಕಾರಿಯಾಗಲಿಲ್ಲ. ಕಣ್ಣೀರು, ಅವಳ ಚಿತ್ರವನ್ನು ಸ್ನಾನಮಾಡಿಸುವಂತೆ ಧಾರಾಕಾರವಾಗಿ ದಳಕುತ್ತಿದ್ದವು.

ಪುನಃ ಕತ್ತಲಾಯಿತು. ಕಾರಾಗೃಹದ ಬಾಗಿಲು ಭದ್ರಪಡಿಸಲ್ಪಟ್ಟಿತು.

ಸುವರ್ಣೆಯು ಸುಖಿಯೋ ದುಃಖಿಯೋ ???

ಜೋಕಜಕಾರ್ತದ ಮೇಲೆ ದಾಳಿ

ಇಂಡೋನೇಶಿಯದಲ್ಲಿ ಡಚ್ ವಿಮಾನಗಳು ತಾ ೨೧ ರಲ್ಲಿ ರಾಜಧಾನಿಯಾದ ಜೋಗಜಕಾರ್ತ ಮತ್ತು ಇತರ ಅನೇಕ ಕಡೆಗಳಲ್ಲಿ ದಾಳಿ ಮಾಡಹತ್ತಿದ್ದರಿಂದ ಡಚ್ ಸೇನೆಯ ಮೇಲೆ ಮುನ್ನುಗ್ಗಲು ಅಲ್ಲಿಯ ಪ್ರಜಾರಾಜ್ಯದ ಮುಖ್ಯ ಸೇನಾಪತಿಯು ತನ್ನ ಸೈನಿಕರಿಗೆ ಆಜ್ಞೆಯಿತ್ತನೆಂದು ತಿಳಿದು ಬಂದಿದೆ.

ಬೆಂಗಳೂರು-ಮೈಸೂರು

ಕನ್ನಡ ಯುವಜನ ಪರಿಷತ್ತಿನ ಆಶ್ರಯದಲ್ಲಿ ಬೆಂಗಳೂರು ನಗರದ ನಾನಾ ಕನ್ನಡ ಸಂಘಗಳ ಸಂಯುಕ್ತ ಗೋಷ್ಠಿಯೊಂದು ಜುಲೈ ೯ರಲ್ಲಿ ಬೆಂಗಳೂರು ಹೈಸ್ಕೂಲಿನಲ್ಲಿ ನಡೆಯಿತು. ೧೫ ಸಂಘಗಳ ೩೦ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಂಘಗಳು ಯುವಜನ ಪರಿಷತ್ತಿಗೆ ಅಂಗ ಸಂಸ್ಥೆಗಳಾಗುವಂತೆ ಪ್ರಾರ್ಥಿಸಲಾಯಿತು.

ಜುಲೈ ೧೧ರಲ್ಲಿ ಸುಮಾರು ೬ ಗಂಟೆ ಸಮಯದಲ್ಲಿ ಬೆಂಗಳೂರಲ್ಲಿ ಒಂದೆಡೆ ಓಡುತ್ತಿದ್ದ ಲಾರಿಯಿಂದ ತನ್ನ ಬಟ್ಟೆ ಬಿದ್ದಿತೆಂದು ಒಬ್ಬನು ಧುಮುಕಿ ಕೂಡಲೆ ಮೃತಿ ಹೊಂದಿದನು. ಪೋಲೀಸಿನವರು ಮಹಜರ್ ಮಾಡಿದರು.

ಚಿನ್ನ ಕಟ್ಟಣದಲ್ಲಿ ನಡೆದ ಗಲಭೆಯ ಸಂಬಂಧದಲ್ಲಿ ಮಹಮದ್ ಖಾಸಿಂ ಎಂಬ ಆರೋಪಿಯ ವಿಚಾರಣೆಯು ಬೆಂಗಳೂರಿನ ಅಡಿಶನಲ್ ಜಿಲ್ಲಾ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ನಡೆದು ಆತನಿಗೆ ೯ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಮೈಸೂರು ಘಟಸಾಸಮಿತಿಗೆ ಸೇರಿದುದು ಪ್ರಶಂಸನೀಯವೆಂದೂ ಮುಂದೆ ಅದು ಭಾರತ ಸಂಯುಕ್ತ ಸರಕಾರಕ್ಕೂ ಸೇರಿ ಭಾಗವಹಿಸಲೆಂದೂ ಮದ್ರಾಸ ಶಾಸನ ಸಭೆಯ ಮೇಲ್ಮನೆಯ ಅಧ್ಯಕ್ಷರಾದ ಶ್ರೀ ಆರ್ ಬಿ ರಾಮಕೃಷ್ಣರಾಜರವರು ತಾ ೧೩ರಲ್ಲಿ ಮೈಸೂರಿನ ಆರೋಗ್ಯ ಮತ್ತು ಕಲಾವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ಹೇಳಿದರು.

ವರ್ಧಂತ್ಯುತ್ಸವದ ಸಂದರ್ಭದಲ್ಲಿ ಸಾರ್ವಜನಿಕ ಸೇವಾಪದಕವನ್ನು ಪಡೆದ ಶ್ರೀ ಎಂ ಕೃಷ್ಣಸ್ವಾಮಿ ಪಿಳ್ಳೆಯವರನ್ನು ಬೆಂಗಳೂರು ನಗರದ ಶ್ರೀರಾಮಪುರದ ವರ್ತಕ ಸಂಘವು ತಾ ೧೫ರಲ್ಲಿ ಸನ್ಮಾನಿಸಿತು.

ಬೆಂಗಳೂರು ನಗರದ ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಸಭೆ ತಾ ೧೩ರಲ್ಲಿ ನಡೆದು ವೇತನ ಸಮಿತಿಯ ತೀರ್ಮಾನವನ್ನು ಚರ್ಚಿಸಿ ವೇತನ ಪ್ರಮಾಣವು ೪೦-೨-೬೦ ಇರಬೇಕೆಂದು ವಿದ್ಯಾಧಿಕಾರಿಗಳಿಗೆ ವಿನಂತಿಸಿಕೊಳ್ಳುವ ಠರಾವು ಪಾಸಾಯಿತು.

ಬೆಂಗಳೂರಿಗೆ ಹತ್ತಿರದಲ್ಲಿರುವ ಯಶವಂತಪುರದ ದೇವದಾರು ಕಾರಖಾನೆಯ ಬಳಿ ತಾ ೧೬ರಲ್ಲಿ ಬಹಳವೇಗದಿಂದ ಬರುತ್ತಿದ್ದ ಲಾರಿಯೊಂದು ಎತ್ತಿನಗಾಡಿಗೆ ಡಿಕ್ಕಿಹೊಡೆದು ಗಾಡಿ ಪುಡಿಪುಡಿಯಾಯಿತು. ಮತ್ತು ಎತ್ತುಗಳು ಸತ್ತುಹೋದವು. ಇದರಿಂದ ಗಾಡಿಯವನಿಗೆ ೧೦೦೦ ರೂಪಾಯಿ ನಷ್ಟವಾಯಿತೆಂದು ನಂಬಲಾಗಿದೆ.

ಕೆ. ಜಿ. ಎಫ್ ರಾಬರ್ಟ್‌ಸನ್ ಪೇಟೆಯಲ್ಲಿ ನಡೆದ ಕೊಂಬಿಯ ಪ್ರಕರಣದಲ್ಲಿ ಅಪಾದಿತನಾದ ಜಾಫರ ಶರೀಫ್ ಮತ್ತು ಇತರ ೮ ಜನರನ್ನು ೫೦೦ ರೂಪಾಯಿ ಜಾಮೀನಿನಮೇಲೆ ಬಿಡಬೇಕೆಂದು ಅಜ್ಞೆಯಾಯಿತು.

ಬೆಂಗಳೂರು ನಗರದ ೩ನೆಯ ವಿಭಾಗಕ್ಕೆ ಸೇರಿದ ಬಿನ್ನಿಮಿಲ್ ರಸ್ತೆಯಲ್ಲಿರುವ ಶ್ರೀರಾಮ ಭಜನ ಮಂದಿರದ ಸೇವಾಸಂಘದವರು ಜುಲೈ ೧೫ರಲ್ಲಿ ನಡೆದ ಮಾಸಿಕ್ ಸಭೆಯಲ್ಲಿ ಸಾರ್ವಜನಿಕ ಸೇವಾ ಪ್ರಶಸ್ತಿಗಳನ್ನು ಪಡೆದ ಸದಸ್ಯರನ್ನು ಅಭಿನಂದಿಸುವ ಠರಾವನ್ನು ಪಾಸು ಮಾಡಿದರು.


ಪರಿಹಾರ ಧನಕ್ಕಾಗಿ ಚಿನ್ನದ ಗಣಿಯವರಿಂದ ಬರುವ ವಿನಂತಿಪತ್ರಗಳ ಪರಿಶೀಲನಕ್ಕಾಗಿ ಸರಕಾರದವರು ಕಾಯಿದೆ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದಾರೆ.

ಮೈಸೂರು ಸಂಸ್ಥಾನದ ವಯಸ್ಕ ಶಿಕ್ಷಣ ಸಮಿತಿಯ ಗೌರವ ಕಾರ್ಯದರ್ಶಿಗಳಾಗಿ ಶ್ರೀ ಎಚ್ ಶ್ರೀಕಂಠಯ್ಯನವರನ್ನು ಈಚೆಗೆ ನಡೆದ ಸಭೆಯೊಂದರಲ್ಲಿ ಚುನಾಯಿಸಲಾಯಿತು. ಬೆಂಗಳೂರಲ್ಲಿ ನಿರಕ್ಷರತೆಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಯೋಜನೆಯೊಂದು ತಯಾರಾಗಿದೆಯೆಂದೂ ಅದಕ್ಕೆ ಸಾರ್ವಜನಿಕರ ಬೆಂಬಲ ಬೇಕೆಂದೂ ಕೋರಿದೆ.

ಬೆಂಗಳೂರು ಪಂದು ಅಗಸ್ಟ ೧೫ರ ಹೊತ್ತಿಗೆ ಸಂಸ್ಥಾನಕ್ಕೆ ಸೇರುವುದೆಂದು ಗೊತ್ತಾಗಿದೆ. "ಇಂಡಿಯನ್ ಇನ್ಸ್ಟಿಟ್ಯೂಟ್ ಅಫ್ ಸೈನ್ಸ್" ಪ್ರದೇಶ ಕೂಡ ಮೈಸೂರಿಗೆ ಬರುವುದು.

ಭಾರತದ ಸಂಸ್ಕೃತಿಯಲ್ಲಿ ಬೆಲೆಯುಳ್ಳ ಅಂಶಗಳನ್ನು ಸಂಗ್ರಹಿಸಿ, ಆಧುನಿಕ ಸಾಹಿತ್ಯವನ್ನು ಅಭಿವೃದ್ಧಿ ಪಡಿಸಿಕೊಂಡು ಬರಬೇಕೆಂದೂ ಪ್ರತಿಯೊಬ್ಬ ಕನ್ನಡಿಗನೂ ಕನ್ನಡದ ಮುನ್ನಡೆಗಾಗಿ ದುಡಿಯಬೇಕೆಂದೂ ಜನರಲ್ಲಿ ಸಾಮರಸ್ಯ ಬೆಳಸಬೇಕೆಂದೂ ಶ್ರೀ ಬಿ ಆರ್ ಕೃಷ್ಣಶಾಸ್ತ್ರಿಗಳು ಜುಲೈ ೧೯ರ ಪ್ರಾತಃಕಾಲ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಿಶೇಷ ಸಾಹಿತ್ಯ..ತ್ಸವವನ್ನು ಆರಂಭಿಸುತ್ತ ಹೇಳಿದರು.

...ಲ್ಲಿ ದುಬಿ



ಮುಂಬಯಿ ಶೇರ ಪೇಟೆ

ತಾ. ೨೨

ಶೇರಪೇಟೆಯಲ್ಲಿ ರಾಜಕೀಯ ವಾತಾವರಣ ತಿಳಿಯಾದುದರಿಂದಲೂ ಟಾಟಾ ಕಾರಖಾನೆಯಿಂದ ಹೆಚ್ಚು ಲಾಭದ ಸುದ್ದಿಗಳು ಬಂದುದರಿಂದಲೂ ಕಳೆದ ವಾರದಲ್ಲಿ ಏರಿದ ಬೆಲೆಗಳು ತಿರುಗಿ ಈ ವಾರ ಕುಸಿದವು. ಟಾಟಾ ಕಂಪನಿಯ ಲಾಭ ನಿರೀಕ್ಷಿಸಿದಷ್ಟಿಲ್ಲವೆಂಬದು ಇದಕ್ಕೆ ಕಾರಣವಾಯಿತು ಹೀಗೆ ಟಾಟಾ ಸ್ಟೀಲ ಡೆಫರ್ಡ ೨೧೮೭-೦-೦ ರಿಂದ ೨೧೨೦-೦-೦ ಕ್ಕೂ ಇಂಡಿಯನ್ ಅಯರ್ನ ೨೮೩-೦-೦ ರಿಂದ ೨೭೮-೦.೦ ಕ್ಕೂ ಇಳಿದವು. ಜವಳಿ ಪಾಲುಗಳೂ ಇಳಿಮುಖವಾದವು. ಫಿನ್ಲೆ ೩೨೪-೦-೦ ರಿಂದ ೩೨೦-೦-೦ ಕ್ಕೂ ಕೋಹಿನುರು ೬೭೧-೦-೦ ರಿಂದ ೬೬೪-೦-೦ ಕ್ಕೂ ಡಾಯಿಂಗ ೧೧೮೫-೦-೦ ರಿಂದ ೧೧೭೦-೦-೦ ಕ್ಕೂ ಸ್ವದೇಶಿ ೬೬೩-೦-೦ ರಿಂದ ೬೫೬-೦-೦ ಕ್ಕೂ ಗೋಕಾಕ ೩೫೪-೦-೦ ರಿಂದ ೩೪೫-೦-೦ ಕ್ಕೂ ಇಳಿದವು. ಅಸೋಸಿಯೇಟೆಡ ಸಿಮೆಂಟ್ಸ ೧೮೧-೮-೦ ರಿಂದ ೧೭೬-೮-೦ ಕ್ಕಿಳಿದವು. ಬ್ಯಾಂಕುಗಳಲ್ಲಿ ಸೆಂಟ್ರಲ ೧೧೩-೦-೦ ರಿಂದ ೧೧೧-೦-೦ ಕ್ಕೂ ಇಂಪೀರಿಯಲ್ ಎಸ್. ಸಿ. ೨೩೫೦-೦-೦ ರಿಂದ ೨೨೭೦-೦-೦ ಕ್ಕೂ ರಿಝರ್ವ ೧೨೩-೦-೦ ರಿಂದ ೧೨೧-೮-೦ ಕ್ಕೂ ಇಳಿದವು. ಸರಕಾರಿ ಸಾಲ ಪತ್ರ (ಜಿ. ಪಿ.) ೧೦೦-೧೨-೦ ರಿಂದ ೧೦೦-೫-೦ ಗಿಳಿಯಿತು.

ಚಿನ್ನ—ಬೆಳ್ಳಿ

ಕೊಳ್ಳುವವರು ಕಡಿಮೆ, ಮಾರುವವರು ಹೆಚ್ಚಾದುದಲ್ಲದೆ ಹೊರಗಿಂದಲೂ ಪೇಟೆಗೆ ಚಿನ್ನ ಬಂದುದರಿಂದ ಚಿನ್ನದ ವ್ಯಾಪಾರ ಸಡಿಲಾಯಿತು. ಕಳೆದ ವಾರವೇ ಪ್ರಾರಂಭವಾದ ಈ ಧೋರಣೆ ಮುಂದುವರಿದು ೧೧೨—೪—೦ ರಿಂದ ತಯಾರಿ ಚಿನ್ನ ೧೦೭-೧೦-೦ ಕ್ಕೆ ಬಂದು ೧೦೮-೪-೦ ಕ್ಕೆ ಸುಧಾರಿಸಿತು. ವಾಯದಾ ೧೦೮—೦—೦. ಬೆಳ್ಳಿ ಯಾದರೂ (ತಯಾರಿ) ೧೭೧—೮—೦ ರಿಂದ ೧೬೯—೮—೦ ಕ್ಕಿಳಿದು ೧೬೯—೧೪—೦ ಕ್ಕೆ ಸುಧಾರಿಸಿತು. ವಾಯದಾವೂ ಅಷ್ಟೆ.

ಅರಳೆ

ಅರಳೇ ಪೇಟೆಯಲ್ಲಿ ಉತ್ಸಾಹವಿಲ್ಲ. ಹೊಸ ಪೀಕಿನ ಬಗ್ಗೆ ಸರಕಾರ ತನ್ನ ಧೋರಣೆಯನ್ನು ಇನ್ನೂ ನಿಶ್ಚಯಿಸಿಲ್ಲ. ಜುಲೈ ಅರಳೆ ೪೪೩—೪—೦ ರಿಂದ ೪೩೫—೮—೦ ಕ್ಕಿಳಿದರೆ ಸೆಪ್ಟಂಬರ ೪೫೨—೬—೦ ರಿಂದ ೪೩೯—೮—೦ ಕ್ಕಿಳಿದಿದೆ.

ಎಣ್ಣೆ ಕಾಳು

ಶೇಂಗಾ	೧೭೬-೪-೦
ಅಗಸಿ	೩೨-೬-೦
ಅಗಸಿ ಎಣ್ಣೆ	೨೧-೮-೦

ಸಾಂಗಲಿ ಪೇಟೆ

ಅರಿಷಣ ಹೇರು	೧೦೪-೧೧೧
ಮೆಣಸಿನಕಾಯಿ ಹೇರು ,,	೧೦೦-೧೫೦
ಶೇಂಗಾ ಖಂಡಿ	೮೩೫

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	ನಂ. ೧	೨೮೦-೨೮೫
,,	ನಂ. ೨	೨೫೫-೨೭೦
,,	ನಂ- ೩	೨೪೦-೨೫೫
ಹಳೇ ಜಯವಂತ ಹತ್ತಿ		೨೯೫-೩೦೧
ಅಪ್ಲಂಡ ಹತ್ತಿ		೨೮೦-೨೯೦
ಜಿನ ಹೊಸದು		೧೮೦-೧೮೫
ಜಿನ ಹಳೇದು		೧೯೫-೨೦೦
ಡಬಲರೋಲ		೧೮೦-೧೮೫
ಸಾಜಿನ		೧೮೦-೧೮೫

ಮೈಸೂರು ಸಂಸ್ಥಾನದ ಸಂಸ್ಕೃತ ಪಾಠಶಾಲೆಗಳ ನಿವೃತ್ತ ಇನಸ್ಪೆಕ್ಟರ್ ಆಗಿದ್ದ ಶ್ರೀ ಸಿ ವೆಂಕಟರಮಣಯ್ಯನವರು ತಾ ೧೬ರಲ್ಲಿ ನಿಧನ ಹೊಂದಿದರು.

ವಿವಿಧ ರೀತಿಯಲ್ಲಿ ನಗರವನ್ನು ಅಭಿವೃದ್ಧಿಗೊಳಿಸಲು, ಹೆಚ್ಚಿನ ಪೌರ ಸೌಕರ್ಯವನ್ನು ಒದಗಿಸಲು, ಅಧಿಕಾರಿಗಳಿಗೆ ಸರಿಯಾಗಿ ಸಂಬಳ ಕೊಡಲು ನಗರಸಭೆಯ ವರಮಾನವನ್ನು ಹೆಚ್ಚಿಸುವ ಉಪಾಯಗಳನ್ನು ಕೈಕೊಳ್ಳಬೇಕೆಂದು ಮ್ಯುನಿಸಿಪಲ್ ಕಮಿಶನರರಾದ ಶ್ರೀ ಸಫಿದಾರಾ ಶಹರವರು ಬೆಂಗಳೂರು ನಗರ ಸಭೆಯ ೧೯೪೭-೪೮ನೆಯ ಸಾಲಿನ ಮುಂಗಡ ಪತ್ರಿಕೆಯ ಮೇಲೆ ಮಾತಾಡುತ್ತ ಹೇಳಿದರು.

ಪೆರಿಯಾ ಪಟ್ಟಣದ ಬಳಿ ಉತ್ತರ ಹಿಂದುಸ್ತಾನದ ಧನಿಕರೊಬ್ಬರು ಸ್ಥಾಪಿಸಲಿರುವ 'ಫ್ಲಾಸ್ಕ್' ಕಾರಖಾನೆಯ ವಿವರಗಳನ್ನು ಪರಿಶೀಲಿಸಿ ಜಿಲ್ಲೆಯ ಜನರ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಅದಕ್ಕೆ ಬೆಂಬಲ ಕೊಡಬೇಕೆಂದು ಮೈಸೂರಿನ ಜಿಲ್ಲಾ ಬೋರ್ಡ ಶ್ರೀ ಎಚ್ ಎಂ ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ತಾ ೧೬ರಲ್ಲಿ ಸಭೆ ಸೇರಿ ತೀರ್ಮಾನಿಸಿತು.

ಮೈಸೂರಿನಲ್ಲಿರುವ ಚೆಲುವಾಂಬಾ ಆಸ್ಪತ್ರೆಯ ಪ್ರೇಕ್ಷಕ ಸಂಘಕ್ಕೆ ಕು. ಶ್ಯಾಮಕುಮಾರಿ ರಣಜೋಧಸಿಂಗರ ಸ್ಥಾನದಲ್ಲಿ ಮೈಸೂರು ಜಿಲ್ಲಾಧಿಕಾರಿಗಳ ಧರ್ಮಪತ್ನಿಯಾದ ಶ್ರೀಮತಿ ಜಿ ಎನ್ ಅರ್ಕಾವತಮ್ಮನವರನ್ನು ಸದಸ್ಯರನ್ನಾಗಿ ಚುನಾಯಿಸಲಾಗಿದೆ.

ಕಂದಾಯ ಮತ್ತು ಸಾರಿಗೆ ಮಂತ್ರಿಗಳಾದ ರಾಜಕಾರ್ಯ ಪ್ರವೀಣ ಜಿ. ಅಪ್ಪಾಜಿಗೌಡರು ಮೈಸೂರು ಜಿಲ್ಲಾಧಿಕಾರಿಗಳೊಡನೆ ಜುಲೈ ೧೨ರಲ್ಲಿ ಅನಿರೀಕ್ಷಿತವಾಗಿ ಶ್ರೀರಂಗಪಟ್ಟಣದ ರೈಲ್ವೆ ನಿಲ್ದಾಣದಲ್ಲಿ ಪಾಸೆಂಜರ್ ಗಾಡಿಯನ್ನು ಪರೀಕ್ಷಿಸಿ ೮—೧೦ಮಂದಿ ತಿಕೀಟಿಲ್ಲದೆ ಪ್ರಯಾಣ ಮಾಡುತ್ತಿದ್ದುದನ್ನು ಪರಿಶೀಲಿಸಿದರೆಂದು ಗೊತ್ತಾಗಿದೆ.

ಬಸವನಗುಡಿಯಲ್ಲಿ "ಇಂಡಿಯನ್ ಇನ್ಸ್ಟಿಟ್ಯೂಟ್ ಅಫ್ ಕಲ್ಚರ್" ಸಂಸ್ಥೆಯ ಆಶ್ರಯದಲ್ಲಿ ತೆರೆಯಲಾಗಿರುವ ಪುಸ್ತಕ ಭಂಡಾರವು ಕವಿ ರವೀಂದ್ರನಾಥ ಠಾಕೂರರ ಶಾಂತಿನಿಕೇತನದಲ್ಲಿ ಕೆರೆದಿರುವ ವಿಶ್ವಭಾರತಿಯ ಮೇಲ್ಪಂಕ್ತಿಯನ್ನು ಅನುಸರಿಸಿ ಅಭಿವೃದ್ಧಿ ಹೊಂದಲೆಂದು ತಾ ತಾ ವಿಜ್ಞಾನ ಮಂದಿರದ ನಿರ್ದೇಶಕರಾದ ಸರ್ ಜೆ. ಸಿ. ಘೋಷ್‌ರವರು ತಾ ೧೭ರ ಸಂಜೆ ಸಂಸ್ಥೆಯ ಆರಂಭ ಮಾಡಿದಾಗ ಆಶಿಸಿದರು.

ಬೆಂಗಳೂರಲ್ಲಿರುವ ಮೈಸೂರು ಪ್ರಾಂತಿಕ ಸಹಕಾರಿ ಪದ್ಧತಿಯ ಮಾರುವ ಸಂಘಕ್ಕೆ ಸಾರ್ವಜನಿಕ ಕಾಮಗಾರಿ ಖಾತೆಯ ಮಂತ್ರಿಗಳಾದ ಶ್ರೀ ಎಲ್ ಸಿದ್ದಪ್ಪನವರು ಜುಲೈ ೧೭ರಲ್ಲಿ ಭೆಟ್ಟಿಯಿತ್ತು ಸಂಘದ ಕಾರ್ಯ ವಿವರಗಳನ್ನು ಪರಿಶೀಲಿಸಿದರು.

ಅಂತರ್‌ರಾಷ್ಟ್ರೀಯ ಸ್ಕೌಟ್ ಸಮ್ಮೇಲನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗುವ ಮೈಸೂರು ಡೆಪ್ಯುಟಿ ಚೀಫ್ ಸ್ಕೌಟ್ ಕಮಿಶನರಾದ ಶ್ರೀ ಪಿ. ಶಿವಶಂಕರರಿಗೆ ಸುಖಪ್ರಯಾಣ ಕೋರಲು ಬೆಂಗಳೂರಲ್ಲಿ ಜಿಲ್ಲಾ ಸ್ಕೌಟ್ ಸಭೆಯವರು ತಾ ೨೧ರ ರಾತ್ರಿ ಸತ್ಕಾರವಿತ್ತರು.

ಕೊಲಂಬಸನಿಗಿಂತ ಮೊದಲು ಅಮೇರಿಕೆಯನ್ನು ಕಂಡವರು

ಡಾ. ವಿಲಿಯಂ ವಾಕರ್ ಸ್ಟ್ರಾಂಗರು ೭ ವರ್ಷಗಳ ಕಾಲ ಸಂಶೋಧನ ನಡೆಸಿ ಕೊಲಂಬಸನಿಗಿಂತ ೧೮ ಶತಕಗಳ ಹಿಂದೆ ಫಿನಿಶಿಯನ್ನರು ಅಮೇರಿಕೆಗೆ ಹೋಗಿದ್ದರೆಂದು ಕಂಡು ಹಿಡಿದಿದ್ದಾರೆ.

ಫಿನಿಶಿಯನ್ನರು "ಸೆಮಿಟಿಕ್" ಕುಲದವರು; ಅವರು ಸಮುದ್ರಯಾನ ನಿಪುಣರಾಗಿದ್ದರು; ಆಫ್ರಿಕದ ಸುತ್ತಮುತ್ತ,ಸ್ಕ್ಯಾಂಡಿನೇವಿಯದವರೆಗೆ ಪಯಣ ಮಾಡಿದ್ದರು; ಉ. ಆಫ್ರಿಕದ ಟ್ಯುನಿಸ್ಸಿನಲ್ಲಿ ನೆಲಸಿದ್ದರು

೧೯೪೦ ರಿಂದ ಕಲೆ ಹಾಕಿದ ಶಿಲಾಲೇಖನಗಳಿಂದ ಸುಮಾರು ೩೦೦೦ ಫಿನಿಶಿಯನ್ನರು ಕ್ರಿ. ಪೂ. ೩೭೧ ರಲ್ಲಿ ಕಟ್ಟಿಣದ ಆದಿರಿಗಾಗಿ ೭೦ ನಾಯಕರ ಕೈಕೆಳಗೆ ಅಜೋರು, ಉತ್ತರ ಅಮೇರಿಕೆಯ ತೀರ, ಚಿಸಾಪೀಕ ಕೊಲ್ಲಿ— ಇವುಗಳ ಮಾರ್ಗವಾಗಿ ಸುಸ್ಕಿಹನ್ನ ನದಿಯವರೆಗೆ ಹೋಗಿದ್ದರೆಂದು ತಿಳಿದು ಬರುತ್ತದೆ.

ಗ್ರೀಕ ಯುದ್ಧದಲ್ಲಿ ಫಿನಿಶಿಯನ್ನರ ರಾಷ್ಟ್ರವೀರನೆನಿಸಿದ ಹಿಮಿಲ್ಕನ್ನನ ಹೆಸರು ಒಂದು ಶಿಲಾಲೇಖನದಲ್ಲಿ ಉಕ್ತವಾಗಿದೆ. ಅದರ ಜೊತೆಗೆ ಮತ್ತೆ ೭೦ ನೌಕಾ ನಾಯಕರ ಹೆಸರುಗಳೂ ಸಿಕ್ಕಿವೆ. ಡಾ. ಸ್ಟ್ರಾಂಗರು ಫಿನಿಶಿಯನ್ನರ ವರ್ಣಮಾಲೆಯನ್ನು ಗುರುತಿಸಿ ಲೇಖನಗಳ ಅರ್ಥ ಮಾಡಿ ಮೇಲಿನ ಸಂಗತಿಗಳನ್ನು ಹೊರಗೆಡಹಿದ್ದಾರೆ.

ಅಮೇರಿಕೆಯಲ್ಲಿ ಫಿನಿಶಿಯನ್ನರು ಕ್ರಿ. ಪೂ. ೩೭೧ ರಲ್ಲಿ ಹೋಗಿ ವಾಸಿಸತೊಡಗಿದ ವೃತ್ತಾಂತವನ್ನು ೧೬ನೆಯ ಶತಮಾನದ ಸ್ಪೇನಿನ ಇತಿಹಾಸಕಾರನಾದ ಮೇರಿಯಾನನೂ ಹೇಳಿದ್ದಾನೆ. ಈ ವಿಷಯವು ಅರಿಸ್ಟಾಟಲನಿಗೂ ಗೊತ್ತಿತ್ತೆಂದೂ ಆದರೆ ಅದನ್ನು ಪ್ರಕಟಿಸಿದರೆ ಕಾರ್ಥೇಜ ನಗರದ ನಾಗರಿಕರಲ್ಲಿ ಬಹಳ ಜನರು ನಗರವನ್ನು ಬಿಟ್ಟು ಹೋದಾರೆಂಬ ಭಯದಿಂದ ಅದನ್ನು ಗುಪ್ತವಾಗಿಡಲಾಯಿತೆಂದೂ ಅವನು ಬರೆಯುತ್ತಾನೆ.

ದಕ್ಷಿಣ ಕನ್ನಡ

ಮದ್ರಾಸಿನಲ್ಲಿ ಪ್ರಸಿದ್ಧ ವಕೀಲರಾಗಿ ಮೆರೆದ ಶ್ರೀ ಬಂಟವಾಳ ಸೀತಾರಾಮರಾಯರು ಕಳೆದ ಬೇಸಿಗೆಯಲ್ಲಿ ತಮ್ಮ ಹುಟ್ಟೂರಾದ ಬಂಟವಾಳಕ್ಕೆ ಬಂದಿದ್ದು ಅಲ್ಲಿ ಅನಾರೋಗ್ಯ ಪೀಡಿತರಾಗಿ ತಾ ೧೬ರ ರಾತ್ರಿ ವಿಧಿವಶರಾದರೆಂದು ತಿಳಿದು ಬಂದಿದೆ.

ಅಗಸ್ಟ ತಾ ೩೦ ರಿಂದ ಸ. ೯ ರ ತನಕ ದ. ಕ. ಜಿಲ್ಲೆಯಲ್ಲಿ ಸಸಿ ದಿನಾಚರಣೆಯನ್ನು ನಡೆಸಬೇಕಾಗಿ ಜೂನ ೩೦ ರಲ್ಲಿ ಕೂಡಿದ ಜಿಲ್ಲಾಧಿಕಾರಿಗಳ ಸಭೆಯಲ್ಲಿ ನಿಶ್ಚಯಿಸಲಾಯಿತು.

ಪೆರ್ಮುದೆಯ ಜನತಾ ವಾಚನಾಲಯದ ಆಶ್ರಯದಲ್ಲಿ ಶ್ರೀ ಮರುವಳ ತಿರುಮಲೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ತಾ ೧೪ರಂದು ಒಂದು ಮಹಾಸಭೆ ಜರುಗಿ ಅನೇಕರ ಭಾಷಣಗಳಾಗಿ ವಯಸ್ಕ ಹಿಂದೀ ಶಿಕ್ಷಣ ತರಗತಿಗಳನ್ನು ನಡೆಸುವ ನಿರ್ಧಾರ ತೆಗೆದುಕೊಳ್ಳಲ್ಪಟ್ಟಿತು.

ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ಮಂಗಳೂರಲ್ಲಿ ಬೇಸಿಗೆ ಮತ್ತು ಮಳೆಗಾಲದ ರಜೆಗಳಲ್ಲಿ ನಡೆಸಲಾಗುವ ಕೈಗಾರಿಕೆಯ ತರಗತಿಗಳನ್ನು ರಂಜಾನ್ ತಿಂಗಳಲ್ಲೂ ನಡೆಸಬೇಕೆಂದು ಮುಸ್ಲಿಂ ಶಿಕ್ಷಕರೊಬ್ಬರು ವಿದ್ಯಾಧಿಕಾರಿಗಳಿಗೆ ಬಿನ್ನವಿಸಿಕೊಂಡಿದ್ದಾರೆ.

ಪುತ್ತೂರಿಗೆ ಸೇರಿದ ಹಕ್ಕಡ್ಕ ಗ್ರಾಮದ ಅರಸಿನಮಕ್ಕಿಯೆಂಬಲ್ಲಿ ಬ್ರಾಂಚ್ ಪೋಸ್ಟಾಫೀಸೊಂದನ್ನು ತೆರೆಯಲಾಗುವುದೆಂದು ತಿಳಿಸಲಾಗಿದ್ದರೂ ತೆರೆಯದೆ ಬಹಳ ತೊಂದರೆಯುಂಟಾಗಿದೆಯೆಂದು ಸ್ಥಳೀಯರೊಬ್ಬರು ಬರೆಯುತ್ತಾರೆ.

ಮಂಗಳೂರಲ್ಲಿ ಇತ್ತೀಚೆಗೆ ಜರುಗಿದ ಜಿಲ್ಲಾ ಆಹಾರ ಸಮಿತಿಯಲ್ಲಿ ದಂಡದ ಮೊಬಲಗನ್ನು ಯುದ್ಧೋತ್ತರ ಪುನರ್ರಚನಾ ಯೋಜನೆಗಳಿಗೆ ಉಪಯೋಗಿಸಬೇಕೆಂದೂ ಮಂಗಳೂರಲ್ಲಿ ನೂರಕ್ಕೆ ೨೫ ರಷ್ಟು ಸಕ್ಕರೆಯ ವಿತರಣ ಪ್ರಮಾಣವನ್ನು ಹೆಚ್ಚಿಸಬೇಕೆಂದೂ ಗೆಣಸನ್ನು ಜಿಲ್ಲೆಯಿಂದ ಹೊರಗೆ ಕಳಿಸದಂತೆ ನಿರ್ಬಂಧ ಹಾಕಬೇಕೆಂದೂ ಕೈಮಗ್ಗದ ಬಟ್ಟೆಯ ಬೆಲೆಯನ್ನು ಹತೋಟಿಗೆ ತರಬೇಕೆಂದೂ ತೀರ್ಮಾನವಾಯಿತು.

ಜುಲೈ ೧೨ ಮತ್ತು ೧೩ ರಲ್ಲಿ ಉಡುಪಿಯ ಕಲಾವೃಂದದ ವಾರ್ಷಿಕೋತ್ಸವ ವಿಜೃಂಭಣೆಯಿಂದ ನೆರವೇರಿತು. ಪ್ರಬಂಧ ಸ್ಪರ್ಧೆ ಕಾವ್ಯವಾಚನ ಮುಂತಾದವು ನಡೆದವು. ಅನೇಕರ ಭಾಷಣಗಳಾದವು. ಕೇಳಪ್ಪನವರು ದ. ಕ. ಜಿಲ್ಲೆಯನ್ನು ಮಲೆಯಾಳಕ್ಕೆ ಸೇರಿಸಬೇಕೆಂಬುದನ್ನು ಒಬ್ಬ ಭಾಷಣಕಾರರು ಖಂಡಿಸಿದರು. ಕಡೆಯಲ್ಲಿ ನಚಿಕೇತವೆಂಬ ನಾಟಕಾಭಿನಯದೊಡನೆ ಉತ್ಸವವು ಕೊನೆಗಂಡಿತು.

ಉಡುಪಿಯ ಪೇಜಾವರ ಮಠದ ಬಂಗಾರದ ಒಡವೆಗಳು ಕಳವಾದ ಸಂದರ್ಭದಲ್ಲಿ ಹಿಂದಿನ ಮೇಲ್ವಿಚಾರಕರಾದ ಶ್ರೀ ಮಿಯಾಳ ನರಸಿಂಹಾಚಾರ್ಯರಿಗೆ ೫ ವರ್ಷ ಸಶ್ರಮ ಶಿಕ್ಷೆ ಮತ್ತು ೫೦೦ ರೂಪಾಯಿ ದಂಡವನ್ನು ಶ್ರೀಗಳಾದ ಎಸ್. ವಿ. ಕೊಳ್ಪಾಡಿತ್ತಾಯ ಬಿ. ಶ್ರೀನಿವಾಸರಾವ್ ಮತ್ತು ಗುರುರಾಜ ಉಡುಪರಿಗೆ ಒಂದೊಂದು ವರ್ಷ ಸಶ್ರಮ ಶಿಕ್ಷೆ ಮತ್ತು ನೂರು ನೂರು ರೂಪಾಯಿ ದಂಡವನ್ನು ವಿಧಿಸಲಾಯಿತು.

ತಾ. ೧೫ರಲ್ಲಿ ಕುಂದಾಪುರ ತಾಲೂಕು ಬೋರ್ಡ ಎಲಿಮೆಂಟರಿ ಶಾಲಾ ಶಿಕ್ಷಕರ ಸಂಘದ ವಿಶೇಷ ಸಭೆಯು ಒಡೆಯರ ಹೋಬಳಿ ಬೋರ್ಡ ಶಾಲೆಯಲ್ಲಿ ಜರುಗಿ ಮುದುರೆಯ ಮ್ಯುನಿಸಿಪಲ್ ಶಾಲೆಯ ಅಧ್ಯಾಪಕರನ್ನು ಅನ್ಯಾಯವಾಗಿ ಕೆಲಸದಿಂದ ತೆಗೆದು ಹಾಕಿದ್ದಕ್ಕೆ ವಿಷಾದ ವ್ಯಕ್ತಪಡಿಸಿತು. ಮತ್ತು ಶ್ರೀದೇವರು ಬಡ ಶಿಕ್ಷಕರ ಬೇಡಿಕೆಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸಿತು.

Reg. No. B. 3148

LICENCE No 3
Licenced to Post without Prepayment

Karmaveer 28-7-47



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಅಫೀಸ ಖಡೇಬಜಾರ ಬೆಳಗಾವಿ

ಜುಲೈ ೨೮ ರಿಂದ ಅಗಸ್ಟ ೩ ರ ವರೆಗೆ

ಮೇಷ

ಪ್ರಕೃತಿ ಸಾಧಾರಣ ಅನುಕೂಲ. ಆದರೆ ಬಹಳ ವಿಷಯಗಳಲ್ಲಿ ಮನಸ್ಸು ನಿರುತ್ಸಾಹಿತ. ಉದ್ಯೋಗದಲ್ಲಿ ಪ್ರಗತಿ ಬಹಳ ಜೋರಿನಲ್ಲಿ. ಆದರೆ ಪ್ರತಿಷ್ಠೆಯಲ್ಲಿ ಸಂಬಂಧವಿಲ್ಲದಿದ್ದಂಥ ಮಾತುಗಳಲ್ಲಿ ಏನೇನೋ ತೊಂದರೆ ಬರುವದು. ದ್ರವ್ಯ ಲಾಭ ಅನುಕೂಲ. ಆದರೆ ಕಿರುಕುಳ ಮತ್ತು ವಿಪರೀತ ವೆಚ್ಚ. ಆಪ್ತ ಮಿತ್ರರು ಮತ್ತು ಅಧಿಕಾರಿಗಳಿಂದಲೂ ತೊಂದರೆ ಮತ್ತು ಕೃತಘ್ನತನದ ಭಾಷೆ. ವಾಹನಗಳಿಂದ ಅಪಘಾತದ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಿಕ್ಕುವ ಯಶಸ್ಸು ಇಲ್ಲವೆ ತೋರುವ ಅನುಕೂಲತೆ ಅನುಭವಾಂತ್ಯದಲ್ಲಿ ಬಹಳ ಪೊಳ್ಳು ಎನಿಸುವ ಅಂಜಿಕೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆದರೆ ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೩೦, ೩೧, ೩ ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಸಂತಾಪದ ಭರದಲ್ಲಿ ಹೆಂಡತಿಗೆ ಹೊಡೆತ ಇಲ್ಲವೆ ಅಪಶಬ್ದಗಳಿಂದ ಜರಿದು ಮಾತ್ನಾಡುವ ಅವಿಚಾರ. ಬಂಧು ವರ್ಗದವರು ನಿಮ್ಮ ವಿರುದ್ಧ ಬಹಳ ಕಾರಸ್ಥಾನ ನಡೆಸಿದ ಸುದ್ದಿ. ಸಂಗ್ರಹದಲ್ಲಿ ಸ್ವಲ್ಪ ಹೆಚ್ಚಳ. ಆದರೆ ಸ್ಥಾವರದಲ್ಲಿ ಹಾನಿಯುಂಟಾಗುವಂಥ ಕೆಲವೊಂದು ಘಟನೆಗಳು. ಉದ್ಯೋಗದಲ್ಲಿ ಬಹಳ ಗೊಂದಲವೆದ್ದು ದಿಗ್ಭ್ರಮೆಯಾಗುವ ಸ್ಥಿತಿ. ಮಿತ್ರರಿಂದಲೂ ಅಯುಕ್ತ ವೇಳೆಯಲ್ಲಿ ಅವಸಾನಘಾತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಆದರೆ ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ ನೆ ಚರಣಗಳಿಗೆ ತೊಂದರೆ ಕಡಮೆ. ತಾ. ೨೮, ೨೯, ೨ ಅನುಕೂಲ.

ಮಿಥುನ

ಎಲ್ಲರ ಪ್ರಕೃತಿ ಉತ್ತಮ. ಆದರೆ ನಿಮ್ಮಲ್ಲಿ ಅತಿ ಮತಭೇದ ಉಂಟಾಗಿ ಮೇಲಿಂದ ಮೇಲೆ ನೀಯೇನು ನಿಮ್ಮಪ್ಪ ಏನು ಎಂದು ತಿಕ್ಕಾಟವೇಳುವದು. ಬಂಧು ವರ್ಗದಲ್ಲಿ ವಿಶೇಷ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಬಹಳ ಕಡಮೆ. ಮತ್ತು ಲಾಭ ವಿಶೇಷ ಇಲ್ಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಅನುಕೂಲತೆ. ಆದರೆ ಅದಕ್ಕಾಗಿ ವೆಚ್ಚ ಮತ್ತು ತೊಂದರೆ ಇಮ್ಮಡಿ. ಮಿತ್ರರು ನಿಮ್ಮಲ್ಲಿ ವಿಪರೀತ ನೆಚ್ಚದಲ್ಲಿ ಕೆಡಹುವಂತೆ ಉಪದೇಶಿಸುವರು. ಪ್ರವಾಸ ತೊಂದರೆಯದು. ಭೆಟ್ಟಿ ಮಧ್ಯಮ ಆದರೆ ಪತ್ರವ್ಯವಹಾರ ಉತ್ತಮ. ಆರ್ದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೩೦, ೩೧, ೩ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣ. ಸ್ತ್ರೀ ಸುಖ ಮನಸ್ಸಿನಂತೆ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಶೇಷ. ಹಿತದ ಮತ್ತು ಒಳ್ಳೆ ಮಾತುಗಳು ಕೂಡ ಯಾರಿಗೂ ಸೇರದಂಥ ಯೋಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ. ಮತ್ತು ಸತ್ಕೃತ್ಯಗಳಲ್ಲಿ ಬಹಳ ವಿನಿಯೋಗ. ಮಿತ್ರ ಸುಖ ಉತ್ತಮ. ಪೂಜನೀಯ ವ್ಯಕ್ತಿಗಳ ದರ್ಶನ ಮತ್ತು ಅನುಗ್ರಹ. ಪ್ರವಾಸ ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಆದರೆ ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ೧ ನೇ ಚರಣಕ್ಕೆ ಲಾಭ ಕಡಮೆ. ತಾ. ೨೮, ೧, ೨ ಅನುಕೂಲ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿಗೆ ದೊಡ್ಡ ಕ್ಲೇಶ ಸಂಭವಿಸುವ ಅಂಜಿಕೆ. ಅಲ್ಲದೆ ಅವಳ ಮೇಲೆ ಅನೇಕರು ಬಹಳ ಸಿಟ್ಟು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಪ್ರತಿಷ್ಠೆ ಕುಂದುವದು. ಪರಿಷ್ಕರ ಮತ್ತು ಸರಕಾರೀ ಜನರ ಬಹಳ ತೊಂದರೆ. ಸಾಲವಿದ್ದರೆ ಸಾವಕಾರರ ಅಸಹ್ಯ ತೊಂದರೆ. ಆದರೆ ಅದಿಲ್ಲದಿದ್ದರೆ ಮುಳುಗುವ ವೆಚ್ಚ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡಃವಿಕೆ. ದೂರಕ್ಕಿಂತ ಸಮೀಪದ ಪ್ರವಾಸ ಹೆಚ್ಚು ತೊಂದರೆಯದು. ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೩೦, ೩೧, ೩ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಮಕ್ಕಳ ಉತ್ಕರ್ಷದಲ್ಲಿ ಬಹಳ ಗೊಂದಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ವಿಜಯ. ಮಿತ್ರರಲ್ಲಿ ಒಬ್ಬಬ್ಬರಿಗೆ ಬಹಳ ಕ್ಲೇಶ ಮತ್ತು ಅವರು ದೂರ ದೇಶಕ್ಕೆ ಸ್ಥಲಾಂತರರಾಗುವದರಿಂದ ಮನಸ್ಸು ಶೋಕದಲ್ಲಿ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಹಸ್ತಾದ ಕೊನೆಯ ೩ ಮತ್ತು ಚಿತ್ರಾದ ೧ ನೇ ಚರಣಕ್ಕೆ ಹೆಚ್ಚು ಅನುಕೂಲ. ತಾ. ೨೮, ೧, ೨ ಅನುಕೂಲ.

ದ ಕೃಷ್ಣ

ತುಲಾ

ಪ್ರಕೃತಿಗೆ ಬಹಳ ಕ್ಲೇಶ. ಹೆಂಡತಿಗೂ ಮಾನಸಿಕ ಕ್ಲೇಶ. ಮಕ್ಕಳಲ್ಲಿ ಕೆಲವರಿಗೆ ಲೋಕ್ಕಾರೋಪ ಬರುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚ ವಿಪರೀತ. ಮಿತ್ರರಲ್ಲಿ ಕೆಲವರಿಗೆ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಕೂಲತೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೯, ೩೦, ೩೧, ೩ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಆದರೆ ಉಭಯತರಲ್ಲಿ ಮೇಲಿಂದ ಮೇಲೆ ಮತಭೇದವಾಗುತ್ತ ನಡೆದು ಪ್ರಪಂಚದಲ್ಲಿ ಅವಶ್ಯಕ ಮಾತಿನ ಕಡೆಗೂ ದುರ್ಲಕ್ಷ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ಉತ್ತಮ. ಮಾವನ ಮನೆಯವರಲ್ಲಿ ಕೆಲವರ ಬಹಳ ಉನ್ನತಿ. ಮಿತ್ರರಲ್ಲಿ ಉತ್ಕರ್ಷ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಾದಿ ಕೆಲಸಗಳು ಸ್ವಲ್ಪ ತೊಂದರೆಯ ನಂತರ ಮನಸ್ಸಿನಂತೆ. ಅನುರಾಧೆಯ ಕೊನೆಯ ೩ ಮತ್ತು ಜೇಷ್ಠಾದ ೧ ನೇ ಚರಣಗಳಿಗೆ ಹೆಚ್ಚು ತೊಂದರೆ. ತಾ. ೩೦, ೩೧, ೧, ೨ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಲ್ಲಿ ಕೆಟ್ಟು ಒಳಿತು ವರ್ತನೆಯ ಬಗ್ಗೆ ಉಭಯತರಲ್ಲಿ ತೀವ್ರ ಮತಭೇದವಾಗಿ ಬಹಳ ವಿರಸ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಬೆಳೆವುದು. ಉದ್ಯೋಗದಲ್ಲಿ ಪ್ರಗತಿಯಲ್ಲಿ ಬಹಳ ಅಡಚಣೆ. ಆದರೆ ಲಾಭ ಮತ್ತು ಪ್ರತಿಷ್ಠೆ ಪ್ರಶಂಸನೀಯವಾಗುವಷ್ಟು ಉತ್ತಮ. ಅನಪೇಕ್ಷಿತ ಲಾಭದ ಸಂಭವವೂ ಇದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಮತ್ತು ವೆಚ್ಚ ಬಹಳ. ಆದರೆ ಕೊನೆಯಲ್ಲಿ ಅನುಕೂಲತೆ ಬಹಳ. ಅಲ್ಲದೆ ಒಬ್ಬ ಶತ್ರು ಪೂರ್ಣವಾಗಿ ಪರಾಜಯ ಹೊಂದುವ ಸಂಭವವೂ ಇದೆ. ಪ್ರವಾಸ ಕಷ್ಟಮ್ಮ. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೩೦, ೩೧, ೧, ೩ ಅನುಕೂಲ.

ಮಕರ

ಪ್ರಕೃತಿ ನಿಮ್ಮದು ಅನುಕೂಲ. ಆದರೆ ಹೆಂಡತಿಯದು ಬಹಳ ಕೆಡುವ ಸಂಭವ. ಮಕ್ಕಳು ಅತ್ಯಂತ ತೊಂದರೆ ಕೊಡುವಂತೆ ವರ್ತಿಸುವರು. ಉದ್ಯೋಗದಲ್ಲಿ ಪ್ರಗತಿ ಸಾಧಾರಣ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಅಧಿಕಾರದ ಇಲ್ಲವೆ ವರ್ಚಸ್ಸಿನ ಹೆಚ್ಚಳ. ಸ್ಥಾವರದಲ್ಲಿ ಅನುಕೂಲ ಘಟನೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಪ್ರವಾಸ ಮತ್ತು ಪತ್ರವ್ಯವಹಾರ ತೊಂದರೆಯದು. ಆದರೆ ಭೆಟ್ಟಿ ಅನುಕೂಲ. ಧನಿಷ್ಠೆಯ ಕೊನೆಯ ೩ ಮತ್ತು ಶ್ರವಣಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೮, ೧, ೨, ೩ ಅನುಕೂಲ.

ಕುಂಭ

ಸ್ವತಃಕ್ಕೆ ಮತ್ತು ಹೆಂಡತಿಗೆ ಆರೋಗ್ಯ ಕಡಮೆಯು. ಅದರಂತೆ ತಾಯಿ ಇಲ್ಲವೆ ಆಪ್ತರಲ್ಲಿಯ ವೃದ್ಧ ಸ್ತ್ರೀಗೆ ಬಹಳ ಕ್ಲೇಶ. ಮಕ್ಕಳಲ್ಲಿ ವಿಶೇಷ ಉನ್ನತಿ ಮತ್ತು ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಅಳದಕ್ಕಿತನದ್ದು. ಆದರೆ ಲಾಭ ತುಂಬ. ಧಂದೇದವರಿಗಿಂತ ನೋಕರಿಯವರಿಗೆ ಹೆಚ್ಚು ಪ್ರಗತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದರಲ್ಲಿಯೆ ಜಾಣತನ. ಪ್ರವಾಸ ಅತಿ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ. ೨೯, ೩೦, ೩೧, ೩ ಅನುಕೂಲ.

ಮೀನ

ಪ್ರಕೃತಿ ಬಹಳ ಉತ್ತಮ. ಸ್ತ್ರೀ ಸುಖ ಮನಸ್ಸಿನಂತೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ ಎನಿಸುಸದು. ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಬಹಳ ಸಾಹಸ ಮತ್ತು ಒಳ್ಳೆ ಯಶಸ್ಸು ಮತ್ತು ಪ್ರತಿಷ್ಠೆ ಕಡಮೆಯೆನಿಸಿದರೂ ಲಾಭ ತುಂಬ. ಸ್ವಪ್ನಗಳು ಶುಭ ಮತ್ತು ಭಾವೀ ಸೂಚಕ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿಜಯ. ಪ್ರವಾಸಾದಿ ಕೆಲಸ ಹಿತಕರ. ಆದರೆ ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೩೦, ೩೧, ೧, ೨ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ—ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ' ದ ಪರವಾಗಿ ಹ. ರಾ. ಪೋತದಾರರಿಂದ ಮುದ್ರಿತವಾಗಿ ಪ್ರಕಟವಾಯಿತು.

ಪ್ರಪಂಚವು ಇಬ್ಭಾಗವಾಯಿತು

(ಮೊದಲನೇ ಪುಟದಿಂದ)

ಧಾರಣ ಮಾರ್ಗವನ್ನೇ ಕಂಡು ಹಿಡಿಯ ಬೇಕಾಗಿದೆ. ಅಲ್ಲದಿದ್ದರೆ ಬೆಲೆಯಲ್ಲಿ ಭಯಂಕರ ಅಧಃಪಾತವುಂಟಾಗಿ ದೊಡ್ಡ ಗೊಂದಲವೇ ಸಂಭವಿಸುವುದು. ತಾವು ಐರೋಪ್ಯ ಮತ್ತು ಇತರ ರಾಷ್ಟ್ರಗಳಿಗೆ ಸಹಾಯ ಕೊಡಲು ಮುಂಬರುವುದು ಕೇವಲ ಪರಹಿತೈಕ ದೃಷ್ಟಿಯಿಂದಲೇ ಎಂಬುದು ಸುಳ್ಳೆಂದು ಅಮೇರಿಕನ್ನರೇ ಒಪ್ಪಿಕೊಳ್ಳುತ್ತಾರೆ.

ಇದರೊಂದಿಗೆ ನಾವು ಮುಂದೆ ಹೇಳುವುದನ್ನು ಚೆನ್ನಾಗಿ ತಿಳಿಯಬೇಕಾಗಿದೆ. ಬಹುಶಃ ಮಾರ್ಶಲ್ಲರ ಮಾತಿನ ಪ್ರಕಾರ ಏಶಿಯದ ಪಶ್ಚಿಮಕ್ಕಿರುವ ಎಲ್ಲ ಐರೋಪ್ಯ ರಾಷ್ಟ್ರಗಳಿಗೂ ಸಹಾಯ ನೀಡಬೇಕೆಂಬುದರಲ್ಲಿ ಸೇರಿದ ರಶಿಯಕ್ಕೂ ನೀಡಲು ಕಾಂಗ್ರೆಸ್ಸನ್ನು ಒಪ್ಪಿಸುವುದು ಬಹಳ ಕಷ್ಟವಾಗಿರಬಹುದು. ಏಕೆಂದರೆ ರಶಿಯದಲ್ಲಿಯ ಮತ್ತು ಇತರ ಪ್ರದೇಶಗಳಲ್ಲಿರುವ ಸಾಮ್ಯವಾದ ತತ್ವವನ್ನು ಕಾಂಗ್ರೆಸ್ಸು ಪ್ರಬಲವಾಗಿ ವಿರೋಧಿಸುತ್ತದೆ. ಮತ್ತು ಅದೂರದರ್ಶಿಗಳಾದ ಅನೇಕರು ಜುಲೈ ೨ ರಲ್ಲಿ ನಡೆದ ಘಟನೆಗಳಿಂದ ಉಂಟಾದ ಇಬ್ಭಾಗವನ್ನು ಕಂಡು ಸಂತೋಷವನ್ನೂ ಪ್ರದರ್ಶಿಸಬಹುದಾಗಿದೆ.

ಇತ್ತಂಡಗಳು

ಫ್ರಾನ್ಸಿನಲ್ಲಿಯೇ ಇರುವ ಸಾಮ್ಯವಾದಿ ಪಕ್ಷದ ದೆಸೆಯಿಂದ ಫ್ರೆಂಚರೇ ಸ್ವತಃ ಮುರ್ಧರ ಸನ್ನಿವೇಶದಲ್ಲಿದ್ದರೂ ಬ್ರಿಟಿಶರು ಮತ್ತು ಫ್ರೆಂಚರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಲು ಹಲವು ಐರೋಪ್ಯ ರಾಷ್ಟ್ರಗಳು ಮುಂದೆ ಬಂದಾವೆಂಬುದರಲ್ಲಿ ಸಂದೇಹವಿಲ್ಲ. ಪಶ್ಚಿಮದ ತಂಡಕ್ಕೆ ಎಷ್ಟು ಸ್ವತಂತ್ರ ರಾಷ್ಟ್ರಗಳು ಸೇರುವುವೆಂಬುದನ್ನು ಕಾದುನೋಡಬೇಕಾಗಿದೆ. ಆದರೆ ಈಗ ನಾವು ಆರ್ಥಿಕ ವಿಚಾರದಲ್ಲಿ ಪಶ್ಚಿಮ ಮತ್ತು ಪೂರ್ವದ ಎರಡು ತಂಡಗಳೊಡನೆ ಬಡಿದಾಡಬೇಕಾದ್ದೆಂಬುದು ನಿಶ್ಚಿತವಾದುದು.

ಈ ಆರ್ಥಿಕ ವಿಭಜನೆಯು ಬಹಳ ಅಪಾಯಕರವಾದ ರಾಜಕೀಯ ವಿಭಜನೆಯಾಗಿ ಪರಿಣಮಿಸದಿದ್ದರೂ ಯುರೋಪಿನ ಮುಂದಿನ ಅಭಿವೃದ್ಧಿಗೆ ಇದೊಂದು ದೊಡ್ಡ ಕೊಡಲಿಯ ಪೆಟ್ಟೆಂಬುದು ಖಂಡಿತ. ಏಕೆಂದರೆ, ಆ ಖಂಡವು ೩ ನೆಯ ಮಹಾ ಸಮರ ಪ್ರಾರಂಭಿಸುವುದರೊಳಗೆ ಸ್ವಲ್ಪಮಟ್ಟಿಗಾದರೂ ತಲೆಯೆತ್ತಬೇಕಲ್ಲವೆ? ಪೂರ್ವದ ಎಣ್ಣೆ ಮತ್ತು ಖನಿಜಗಳನ್ನೂ ಪಶ್ಚಿಮದ ಕಲ್ಲಿದ್ದಲು ಮತ್ತು ಕಾರಖಾನೆಯಲ್ಲಿ ತಯಾರಾದ ಸಾಮಾನುಗಳನ್ನೂ ಅದಲು ಬದಲು ಮಾಡಿಕೊಳ್ಳುವ ಸಂದರ್ಭವಿದ್ದಲ್ಲಿ ಬಹುಬೇಗ ಇಡಿಯ ಖಂಡವು ಸುಧಾರಿಸಿಕೊಳ್ಳಬಹುದಾಗಿತ್ತು.

ಸಾಳಿನ ನವೆಂಬರಿನಲ್ಲಿ ವಿಭಕ್ತವೂ ದರಿದ್ರವೂ ಆದ ಜರ್ಮನಿಯ ಗಾಯವನ್ನು ಗುಣಪಡಿಸಲು ಪ್ರಯತ್ನವೆಸಗಲು ಸೇರುವ ನಾಲ್ಕು ಪ್ರಮುಖ ದೇಶಗಳ ಪರರಾಷ್ಟ್ರ ಮಂತ್ರಿಗಳ ಸಮ್ಮೇಲನದ ಮೇಲೆ ಈಗ ನಡೆದ ಸಂಗತಿಗಳು ಅಶುಭ ಪರಿಣಾಮಗಳನ್ನು ಉಂಟುಮಾಡುವಂಥವಾಗಿವೆ.

ಬಹುಶಃ ಇತ್ತಂಡಗಳಲ್ಲಿಯ ಧ್ಯೇಯವೈಪರೀತ್ಯದ ಕ್ಷೇತ್ರವನ್ನು ಇನ್ನೂ ಹೆಚ್ಚಿಸಲು ಹೋಗದಿರುವುದರಲ್ಲೇ ಈಗ ಕೆಲಮಟ್ಟಿಗೆ ಭರವಸೆಯಿಡಲಾಗಿದೆಯೆಂದು ತೋರುತ್ತದೆ. ಭಾರತದಂತಹ ಏಶಿಯದ ಸ್ವತಂತ್ರ ರಾಷ್ಟ್ರಗಳು ಈ ಜಗಳದೊಳಗೆ ಪ್ರವೇಶಿಸದೆ ದೂರನಿಲ್ಲುವುದೊಳ್ಳೆಯದು. ಈ ಸಂಬಂಧದ ತೊಂದರೆಗಳು ಮಧ್ಯಪೂರ್ವವನ್ನು ಪ್ರವೇಶಿಸಲಾರವೆಂದು ಆಶಿಸುತ್ತೇನೆ. ಈ ಆರ್ಥಿಕ ವಿಭಜನೆಯೇನೋ ಹೆಚ್ಚಿನ ದುರ್ಭಾಗ್ಯವೆನಿಸಿದರೂ ಒಂದರಕಂಟಿಗಿನ್ನೊಂದು ಹೋಗದೆ ತಮ್ಮಷ್ಟಕ್ಕೆ ತಾವೇ ಇತ್ತಂಡಗಳೂ ತಮ್ಮ ತಮ್ಮ ಆರ್ಥಿಕೋನ್ನತಿಯನ್ನು ಸಾಧಿಸಬಹುದಾಗಿದೆ.

ಕೊನೆಯದಾಗಿ ಸಂಯುಕ್ತ ರಾಷ್ಟ್ರ ಸಂಘದ ಅಸ್ತಿತ್ವವನ್ನು ಕಾಯ್ದುಕೊಳ್ಳುವುದರ ಮತ್ತು ಅದರ ಸಾಮರ್ಥ್ಯದಿಂದ ಪ್ರಯೋಜನ ಹೊಂದುವುದರ ಬಗ್ಗೆ ಎಷ್ಟು ಪ್ರಯತ್ನವೆಸಗಿದರೂ ಸಾಲದೆಂದು ಹೇಳಬಯಸುತ್ತೇನೆ. ಸರ್ವಸಾಮಾನ್ಯವಾದ ದಣಿವು ಮತ್ತು ದಾರಿದ್ರ್ಯಗಳ ದೆಸೆಯಿಂದ ಈಗಿಂದೀಗ ಯುದ್ಧವು ಪುನಃ ಪ್ರಾರಂಭವಾದೀತೆಂಬ ಭಯವಿಲ್ಲದಾಗಿದೆ. ಹೋಗಲಿ, ಕೇಡಿನಿಂದ ಅಷ್ಟಾದರೂ ಒಳ್ಳಿತು ದೊರೆಕೊಂಡುದೊಂದು ವಿಶೇಷ.

ಪುಸ್ತಕ ಮತ್ತು ವಿಮರ್ಶೆ

[೨ ನೇ ಪುಟದಿಂದ]

ಪುಟ್ಟ ಪುಸ್ತಕ. ಬೆಲೆ ಆರು ಆಣೆ. ಶ್ರೀಮದ್ವಾಧಿವೇಂದ್ರಸ್ವಾಮಿಗಳು ಶ್ರೀರಾಮ ಮತ್ತು ಕೃಷ್ಣ ಚರಿತ್ರೆಯನ್ನು ಶ್ಲೋಕರೂಪವಾಗಿ ಸಂಕ್ಷೇಪಿಸಿ ಈ ಮಂಜರಿಗಳಲ್ಲಿ ವಿವರಿಸಿರುವರು. ಭಗವಂತನು ರಾಮಕೃಷ್ಣ ಅವತಾರ ಧಾರಣ ಮಾಡಿ ಎಸಗಿದ ಲೋಕಕಾರ್ಯವನ್ನೆಲ್ಲ ಬಣ್ಣಿಸಿದ್ದಾರೆ. ಪಂಡಿತರು ಸಂಸ್ಕೃತ ಶ್ಲೋಕಗಳನ್ನು ಕನ್ನಡಿಸಿ ಸಂಸ್ಕೃತ ತಿಳಿಯದವರಿಗೂ ಉಪಯುಕ್ತವಾಗುವಂತೆ ಮಾಡಿದ್ದಾರೆ. ನಿತ್ಯವೂ ಪಾರಾಯಣಯೋಗ್ಯವಾದುದು. ಎಲ್ಲರೂ ಸಂಗ್ರಹಿಸಬಹುದಾಗಿದೆ.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ

ಮೇಲಿನದು ಉಕ್ತ ಸಮಿತಿಯ ೧೯೪೬-೪೭ನೆಯ ಸಾಲಿನ ವರದಿ. ಸಮಿತಿಯ ಆದೇಶ, ಶಿಕ್ಷಣ ತರಗತಿಗಳು, ಪುಸ್ತಕ ಭಾಂಡಾರಗಳು, ಲಿಪಿ ಸುಧಾರಣೆ, ಗಿರಣಿ ಮತ್ತು ಕಾರಖಾನೆಗಳಲ್ಲಿ ಅಕ್ಷರ ಪ್ರಚಾರ, ಮೇಲ್ವಿಚಾರಣೆ ಮತ್ತು ಲೆಕ್ಕಪರಿಶೀಲನೆಗಳ ವಿವರಣವು ಇಲ್ಲಿ ಕೊಟ್ಟಿದೆ. ಇದು ವಿದ್ಯಾಪ್ರಚಾರಕರು ಅಗತ್ಯವಾಗಿ ಓದಬೇಕಾದ ಪುಸ್ತಕ.

ಬಿಲ್ಲವರ ಎಸೋಸಿಯೇಶನ್ ಮುಂಬೈ ವಾರ್ಷಿಕ ವರದಿ

ಮೇಲಿನದು ಶ್ರೀ ಗೋಕರ್ಣನಾಥಕ್ಷೇತ್ರ ಮಂಗಳೂರು ಸಂಘ ಮತ್ತು ಬಿಲ್ಲವರ ಹಿತವರ್ಧಕ ಸಂಘ ಇವುಗಳ ಏಕೀಕೃತ ಸಂಸ್ಥೆಯ ೧೯೪೬ ರ ಕಾರ್ಯಗಳ ವಿವರಣ. ಸಂಘ ಸ್ಥಾಪನೆಯಾಗಿ ೧೫ ವರ್ಷಗಳಾದವು. ಅನೇಕ ಮಹನೀಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳು ನಡೆದವು. ಪುಸ್ತಕ ಭಾಂಡಾರ ವಾಚನಾಲಯಗಳನ್ನೂ ಆಗಾಗ ಸಾಹಿತ್ಯ ಸ್ಪರ್ಧೆಗಳನ್ನೂ ಸಂಘ ನಡೆಸಿದೆ. ಉಕ್ತ ಸಮಾಜಕ್ಕೆ ಪರಸ್ಪರ ಸಹಾಯಕ ನಿಧಿ, ವಿದ್ಯಾರ್ಥಿವೇತನ ಇತ್ಯಾದಿಗಳನ್ನಿತ್ತು ಉಪಕಾರ ಮಾಡಿದೆಯೆಂದು ಮುಂತಾಗಿ ತಿಳಿದು ಬರುತ್ತದೆ.

Mysore Shall be Literate

ಮೇಲಿನದು ನಾಲ್ಕನೆಯ ಅಖಿಲ ಹಿಂದುಸ್ತಾನ ವಯಸ್ಕರ ಶಿಕ್ಷಣ ಸಮ್ಮೇಲನದಲ್ಲಿ ಓದಿದ ಪ್ರಬಂಧ. ಸಮ್ಮೇಲನವು ಕಳೆದ ಡಿಸೆಂಬರಿನಲ್ಲಿ ತಿರುವಾಂಕೂರಿನಲ್ಲಿ ನಡೆಯಿತು. ಶ್ರೀ ಎಸ್. ಪಿ. ಎಸ್. ರವರು ಮೈಸೂರು ಸಂಸ್ಥಾನದ ವಯಸ್ಕ ಶಿಕ್ಷಣ ಸಂಘದ ಪರವಾಗಿ ಉಕ್ತ ಪ್ರಬಂಧವನ್ನು ಓದಿದ್ದು. ಪ್ರಬಂಧದಲ್ಲಿ ಮೈಸೂರಿನಲ್ಲಿ ವಯಸ್ಕ ಶಿಕ್ಷಣ ನಡೆಯುತ್ತಿರುವ ಮತ್ತು ನಡೆಯಬೇಕಾದ ರೀತಿಯು ವರ್ಣಿತವಾಗಿದೆ.